

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಅಕ್ಟೋಬರ್ 27 ಭಾನುವಾರ 2024

ಸಂಪುಟ: 45 | ಸಂಚಿಕೆ: 191 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಕೃಷಿಗೆ ಸಮರ್ಪಕ ನೀರು; ಮಳೆ ಹಾನಿಗೆ ಪರಿಹಾರ ಕಲ್ಪಿಸಿ

● ಜಿಲ್ಲಾಡಳಿತಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶ ● ವಿಡಿಯೋ ಕಾನ್ಫರೆನ್ಸ್ ಮೂಲಕ ಡಿಸಿ, ಜಿಪಂ ಸಿಇಓಗಳೊಂದಿಗೆ ಚರ್ಚೆ ● ಮಳೆ ಹಾನಿ, ಪ್ರಾಣ ಹಾನಿಗೆ 48 ಗಂಟೆಯೊಳಗೆ ಪರಿಹಾರ ಕಲ್ಪಿಸಲು ಸೂಚನೆ



ಮುಖ್ಯಮಂತ್ರಿ ಸಿದ್ದರಾಮಯ್ಯ, ತಮ್ಮ ಸಹೋದ್ಯೋಗಿಗಳು ಮತ್ತು ಅಧಿಕಾರಿಗಳೊಂದಿಗೆ ಗೃಹ ಕಚೇರಿ ಕೃಷ್ಣಾದಲ್ಲಿ ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ಕಾರ್ಯ ನಿರ್ವಹಣಾಧಿಕಾರಿಗಳ ಜೊತೆ ವಿಡಿಯೋ ಕಾನ್ಫರೆನ್ಸ್ ನಡೆಸಿದರು.

ಬೆಂಗಳೂರು, ಅ.26(ಕೆಎಂಶಿ)– ಕಾವೇರಿ–ಕೃಷ್ಣಾ ಕೊಳ್ಳದ ಜಲಾಶಯಗಳು ಭರ್ತಿಯಾಗಿರುವುದರಿಂದ ಕೃಷಿ ಚಟುವಟಿಕೆಗೆ ಸಮರ್ಪಕ ನೀರು ಒದಗಿಸಿ. ಹಿಂಗಾರು ಮಳೆಯಲ್ಲಿ ಉಂಟಾಗಿರುವ ಹಾನಿ ಮತ್ತು ಬೆಳೆ ಪರಿಹಾರಕ್ಕೆ ತಕ್ಷಣ ಕ್ರಮ ಕೈಗೊಳ್ಳಿ ಎಂದು ಜಿಲ್ಲಾಡಳಿತಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶ ಮಾಡಿದ್ದಾರೆ.

ಇತ್ತೀಚೆಗೆ ಬಿದ್ದ ಭಾರಿ ಮಳೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ತಮ್ಮ ಸಹೋದ್ಯೋಗಿಗಳು ಮತ್ತು ಅಧಿಕಾರಿಗಳೊಂದಿಗೆ ಗೃಹ ಕಚೇರಿ ಕೃಷ್ಣಾದಲ್ಲಿ ಜಿಲ್ಲಾಧಿಕಾರಿ ಹಾಗೂ ಕಾರ್ಯ ನಿರ್ವಹಣಾಧಿಕಾರಿಗಳ ಜೊತೆ ವಿಡಿಯೋ ಕಾನ್ಫರೆನ್ಸ್ ನಡೆಸಿ, ಕುಡಿಯಲು ಸಾಕಷ್ಟು ನೀರು ಇಟ್ಟುಕೊಂಡು ರೈತರ ಭೂಮಿಗೆ ನೀರು ಹರಿಸಿ ಎಂದರು.

ನಮ್ಮ ಪ್ರಮುಖ ಜಲಾಶಯಗಳ ಒಟ್ಟು ಸಂಗ್ರಹಣಾ ಸಾಮರ್ಥ್ಯ 895.62 ಟಿಎಂಸಿಯಲ್ಲಿ, ಪ್ರಸ್ತುತ 871.26 ಟಿಎಂಸಿ ನೀರು ಸಂಗ್ರಹವಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 505.81 ಟಿಎಂಸಿ ಇತ್ತು.

ಮುಂದಿನ ಡಿಸೆಂಬರ್‌ವರೆಗೆ ರಾಜ್ಯದಲ್ಲಿ ಭಾರಿ ಮಳೆ ಬೀಳುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ಕೆರೆಗಳನ್ನು ತುಂಬಿಸುವ ಮತ್ತು ಕೃಷಿ ಹಾಗೂ ವಿದ್ಯುತ್ ಉತ್ಪಾದನೆಗೆ ನೀರನ್ನು ಸಮರ್ಪಕ ಬಳಕೆ ಮಾಡಿಕೊಳ್ಳಿ. ಅತಿವೃಷ್ಟಿ ಹಾಗೂ ಪ್ರವಾಹದಿಂದ ಆಗಿರುವ ಹಾನಿಗೆ ಪರಿಹಾರ ನೀಡಿ, ಜಿಲ್ಲಾಧಿಕಾರಿಗಳು ಹಾನಿಗೀಡಾದ ಸ್ಥಳಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿ, ನಿಯಮಾವಳಿ ಪ್ರಕಾರ ತಕ್ಷಣ ಪರಿಹಾರ ಒದಗಿಸಿ, ಜನರಿಗೆ ಸಾಂತ್ವನ ನೀಡಿ ಎಂದಿದ್ದಾರೆ. ಮನೆ ಹಾನಿ ಮತ್ತು ಪ್ರಾಣ ಹಾನಿ ಪ್ರಕರಣಗಳಲ್ಲಿ 48 ಗಂಟೆಗಳ ಒಳಗೆ ಪರಿಹಾರ ಒದಗಿಸಬೇಕು, ಹಿಂಗಾರಿನಲ್ಲಿ ಅತಿವೃಷ್ಟಿಯಿಂದಾಗಿ ಒಟ್ಟು 25 ಸಾವು ಸಂಭವಿಸಿವೆ, ಅತಿವೃಷ್ಟಿಯಿಂದಾಗಿ 19 ದೊಡ್ಡ, 66 ಸಣ್ಣ ಜಾನುವಾರುಗಳು ಸಾವಿಗೀಡಾಗಿವೆ, ಎಸ್‌ಡಿಆರ್‌ಎಫ್ ನಿಯಮಾನುಸಾರ ದೊಡ್ಡ ಜಾನುವಾರುಗಳಿಗೆ ಒಟ್ಟು 6.84 ಲಕ್ಷ ರೂ., ಸಣ್ಣ ಜಾನುವಾರುಗಳಿಗೆ ಒಟ್ಟು 2.8 ಲಕ್ಷ ರೂ. ಸೇರಿದಂತೆ ಒಟ್ಟು 9.6 ಲಕ್ಷ ರೂ. ತುರ್ತು ಪರಿಹಾರ ಪಾವತಿಸಲಾಗಿದೆ.

ಅಧಿಕ ಮಳೆಯಿಂದಾಗಿ 84 ಮನೆಗಳು ಸಂಪೂರ್ಣ ಹಾನಿಗೀಡಾಗಿವೆ, 2077 ಮನೆಗಳು ಭಾಗಶಃ ಹಾನಿಗೀಡಾಗಿವೆ, ಪೂರ್ತಿ ಮನೆ ಹಾನಿಗೆ 1.20 ಲಕ್ಷ ರೂ. ಹಾಗೂ ಭಾಗಶಃ ಹಾನಿಗೀಡಾದ ಮನೆಗಳಿಗೆ ಮುಂಗಾರು ಹಂಗಾಮಿನಲ್ಲಿ ಸೂಚಿಸಿರುವಂತೆ 50,000 ರೂ. ಪರಿಹಾರ ನೀಡಲು ಆದೇಶಿಸಲಾಗಿದೆ.

ಬೆಳೆ ಹಾನಿ ಕುರಿತು ಜಂಟಿ ಸಮೀಕ್ಷೆ ನಡೆಯುತ್ತಿದೆ, ಒಂದು ವಾರದೊಳಗೆ ಪೂರ್ಣಗೊಳಿಸಿ ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದರು.

ಅತಿವೃಷ್ಟಿ ಪರಿಹಾರ ಕಾರ್ಯಗಳಿಗೆ ಸಾಕಷ್ಟು ಅನುದಾನ ಲಭ್ಯವಿದೆ, ಜಿಲ್ಲಾಧಿಕಾರಿಗಳ ಖಾತೆಯಲ್ಲಿ 551.25 ಕೋಟಿ ರೂ. ಹಾಗೂ

■ 6ನೇ ಪುಟಕ್ಕೆ

ಬೇಲೆಕೇರಿ ಅದಿರು ನಾಪತ್ತೆ ಪ್ರಕರಣ

ಕಾಂಗ್ರೆಸ್ ಶಾಸಕ ಸತೀಶ್ ಸೈಲ್‌ಗೆ 7 ವರ್ಷ ಕಠಿಣ ಜೈಲು ಶಿಕ್ಷೆ

ಒಟ್ಟಾರೆ 44 ಕೋಟಿ ರೂ. ದಂಡ!



ಸತೀಶ್ ಕೃಷ್ಣ ಸೈಲ್

ಬೆಂಗಳೂರು: 2009–10ರ ಅವಧಿಯಲ್ಲಿ ಬೇಲೆಕೇರಿ ಬಂದರಿನಿಂದ ವಶಪಡಿಸಿಕೊಂಡ ಕಬ್ಬಿಣದ ಅದಿರನ್ನು ಕಳ್ಳತನ ಮಾಡಿ ಅಕ್ರಮವಾಗಿ ರಫ್ತು ಮಾಡಿದ್ದಕ್ಕಾಗಿ ಇಲ್ಲಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಕಾಂಗ್ರೆಸ್ ಶಾಸಕ ಸತೀಶ್ ಕೃಷ್ಣ ಸೈಲ್ ಅವರಿಗೆ ಏಳು ವರ್ಷಗಳ ಜೈಲು ಶಿಕ್ಷೆ ಮತ್ತು ಭಾರಿ ಮೊತ್ತದ ದಂಡವನ್ನು ವಿಧಿಸಿದೆ. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಅಕ್ಟೋಬರ್ 24 ರಂದು ಕಾರವಾರದ 58 ವರ್ಷದ ಶಾಸಕ ಮತ್ತು ಇತರ ಆರು ಆರೋಪಿಗಳನ್ನು ದೋಷಿ ಎಂದು ಘೋಷಿಸಿತ್ತು. ಎರಡು ಬಾರಿ ಎಂಎಲ್‌ಎ ಆಗಿರುವ ಸೈಲ್ ಶಿಕ್ಷೆಗೆ ಗುರಿಯಾಗಿರುವುದರಿಂದ ವಿಧಾನಸಭೆ ಸದಸ್ಯತ್ವ ಕಳೆದುಕೊಳ್ಳುವ ಭೀತಿ ಇದೆ. ಶ್ರೀ ಮಲ್ಲಿಕಾರ್ಜುನ ಶಿಪ್ಪಿಂಗ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರಾಗಿ, ಸೈಲ್ ಕಳ್ಳತನ, ಕ್ರಿಮಿನಲ್ ಪಿತೂರಿ ಮತ್ತು ವಂಚನೆ ಆರೋಪದ ಮೇಲೆ ಶಿಕ್ಷೆಗೊಳಗಾದರು. ಬಳ್ಳಾರಿಯಲ್ಲಿ ಅಕ್ರಮವಾಗಿ ಗಣಿಗಾರಿಕೆ ನಡೆಸಲಾಗಿದ್ದ ಕೋಟ್ಯಂತರ

■ 6ನೇ ಪುಟಕ್ಕೆ

ಶಾಸಕ ಸ್ಥಾನಕ್ಕೆ ಕುತ್ತು!

ನಿಯಮಗಳ ಪ್ರಕಾರ ಎರಡು ವರ್ಷಗಳಿಗಿಂತ ಹೆಚ್ಚಿನ ಜೈಲು ಶಿಕ್ಷೆಯಾದರೆ ಶಾಸಕ ಸ್ಥಾನವನ್ನು ಕಳೆದುಕೊಳ್ಳಬೇಕಾಗುತ್ತದೆ. ಅಂತಹದರಲ್ಲಿ ಸತೀಶ್ ಸೈಲ್ 7 ವರ್ಷಗಳ ಜೈಲು ಶಿಕ್ಷೆಗೆ ಗುರಿಯಾಗಿದ್ದಾರೆ. ಹೀಗಾಗಿ ಅವರು ಶಾಸಕ ಸ್ಥಾನದಿಂದ ಅನರ್ಹಗೊಳ್ಳಲಿದ್ದಾರೆ. ಈ ಬೆಳವಣಿಗೆಯ ಬಗ್ಗೆ ಪ್ರತಿಕ್ರಿಯಿಸಿದ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, 'ಅಪರಾಧಿಯಾಗಿರುವ ಶಾಸಕರನ್ನು ಅನರ್ಹಗೊಳಿಸುವಂತೆ ನಾನು ಕರ್ನಾಟಕ ವಿಧಾನ ಸಭಾ ಸ್ಪೀಕರ್‌ಗೆ ಮನವಿ ಮಾಡುತ್ತೇನೆ' ಎಂದು ಹೇಳಿದ್ದಾರೆ.





ಪಟಾಕಿ ಸಿಡಿಸಲು 2 ಗಂಟೆ ಮಾತ್ರ ಅವಕಾಶ

ಹಸಿರು ಪಟಾಕಿ ಮಾತ್ರ ಮಾರಾಟ ಮಾಡಿ: ಸಿಎಂ ಸಿದ್ದರಾಮಯ್ಯ ತಾಕೀತು



ಬೆಂಗಳೂರು: ದೀಪಾವಳಿ ಹಬ್ಬದ ಪ್ರಯುಕ್ತ ಮುಖ್ಯಮಂತ್ರಿ ಸಿದ್ದರಾಮಯ್ಯ ಹಲವು ಷರತ್ತುಗಳನ್ನು ವಿಧಿಸಿದ್ದಾರೆ. ದೀಪಾವಳಿ ದಿನ ಹಸಿರು ಪಟಾಕಿ ಸಿಡಿಸಲು ಮಾತ್ರ ಅವಕಾಶವಿದ್ದು ರಾತ್ರಿ 8 ಗಂಟೆಯಿಂದ 10 ಗಂಟೆ ಒಳಗೆ ಮಾತ್ರ ಪಟಾಕಿ ಹೊಡೆಯಬೇಕು ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಡಿಸಿ, ಎಸ್‌ಪಿ, ಸಿಇಓಗಳ ಜತೆ ಗೃಹಕಚೇರಿ ಕೃಷ್ಣಾದಲ್ಲಿ ಇಂದು ಸಭೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಪ್ರತಿ ವರ್ಷ ಪಟಾಕಿ ಸಿಡಿಸುವ ವೇಳೆ ಅವಘಡಗಳು ಸಂಭವಿಸುತ್ತವೆ. ಈ ಬಾರಿ ಪಟಾಕಿ ಅವಘಡ ಆಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಖಡಕ್ ಸೂಚನೆ ನೀಡಿದ್ದಾರೆ. ಸುಪ್ರೀಂಕೋರ್ಟ್ ಆದೇಶದಂತೆ ಪರಿಸರಕ್ಕೆ ಹಾನಿಯಾಗುವ ಪಟಾಕಿಗಳಿಗೆ ಅವಕಾಶ ನೀಡಬಾರದು. ಪಟಾಕಿ ದಾಸ್ತಾನು, ಮಾರಾಟ ಪ್ರಕ್ರಿಯೆಯಲ್ಲಿ ಲೋಪ ಆಗಬಾರದು. ಸುರಕ್ಷತೆ ವಿಷಯದಲ್ಲಿ ಯಾವುದೇ ಲೋಪವಾಗದಂತೆ ನೋಡಿಕೊಳ್ಳಿ, ನಿಯಮ ಮೀರಿದರೆ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಸಭೆಯಲ್ಲಿ ಅಧಿಕಾರಿಗಳಿಗೆ ಸೂಚನೆ ನೀಡಿದರು.





ಬಾಕಿ ಇರುವ ಪ್ರಕರಣಗಳ ಇತ್ಯರ್ಥಕ್ಕೆ ರಾಜೀ ಸಂಧಾನ ಅತ್ಯವಶ್ಯ

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ರವೀಂದ್ರ ಹೆಗಡೆ ಅಭಿಮತ



ಮೈಸೂರಿನ ಜಿಪಂ ಕಚೇರಿಯಲ್ಲಿ ಇಂದು ಆರಂಭವಾದ ಮೈಸೂರು, ಚಾಮರಾಜನಗರ ಜಿಲ್ಲೆಗಳ ಮಧ್ಯಸ್ಥಗಾರರಿಗೆ 2 ದಿನಗಳ ತರಬೇತಿ ಕಾರ್ಯಕ್ರಮವನ್ನು ಮೈಸೂರು ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ರವೀಂದ್ರ ಹೆಗಡೆ ಉದ್ಘಾಟಿಸಿದರು.

ಮೈಸೂರು,ಅ.26(ಆರ್‌ಕೆ)– ನ್ಯಾಯಾಲಯಗಳಲ್ಲಿ ಬಾಕಿ ಉಳಿದಿರುವ ಸಾವಿರಾರು ಪ್ರಕರಣಗಳನ್ನು ಇತ್ಯರ್ಥಗೊಳಿಸಲು ರಾಜೀ ಸಂಧಾನ ಅತ್ಯಗತ್ಯ ಎಂದು ಮೈಸೂರು ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ರವೀಂದ್ರ ಹೆಗಡೆ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಕರ್ನಾಟಕ ಮಧ್ಯಸ್ಥಿಕಾ ಕೇಂದ್ರ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳ ಸಂಯುಕ್ತಾಶ್ರಯದೊಂದಿಗೆ ಮೈಸೂರಿನ ಜಿಲ್ಲಾ ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ಇಂದು ಆರಂಭವಾದ ಮೈಸೂರು, ಚಾಮರಾಜನಗರ ಜಿಲ್ಲೆಗಳ ಮಧ್ಯಸ್ಥಗಾರರಿಗೆ ಎರಡು ದಿನಗಳ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಮಧ್ಯಸ್ಥಿಕೆಗಾರರು ಬಹಳ ಹಿಂದಿನಿಂದಲೂ ರಾಜೀ ಸಂಧಾನದ ಮೂಲಕ ಭಿನ್ನಾಭಿಪ್ರಾಯ, ವ್ಯಾಜ್ಯಗಳನ್ನು ಇತ್ಯರ್ಥ ಮಾಡಿ ಉಭಯತ್ರರಿಗೂ ನ್ಯಾಯ ಒದಗಿಸಿ ಪ್ರಕರಣ ಇತ್ಯರ್ಥ ಮಾಡುವ ಪದ್ಧತಿ ಇದೆ. ಹಾಗೆಂದ ಮಾತ್ರಕ್ಕೆ ಅವರೇ ಎಲ್ಲಾ ಬಗೆಯ ಪ್ರಕರಣಗಳನ್ನೂ ಬಗೆಹರಿಸುತ್ತಾರೆಂಬ ಅರ್ಥವಲ್ಲ. ಆದರೆ, ಸಮಸ್ಯೆ, ವಿವಾದ ಬಗೆಹರಿಸುವ ಮನೋಭಾವವಿರಬೇಕು ಎಂದರು.


ದೂರುದಾರ ಮತ್ತು ಎದುರಾಳಿಗಳನ್ನು ಒಂದೆಡೆ ಸೇರಿಸಿ, ತೊಂದರೆಗಳೇನೆಂಬುದನ್ನು ಸಮಾಧಾನದಿಂದ ಆಲಿಸಿ ಸಮಯಪ್ರಜ್ಞೆ, ಜಾಣ್ಮೆ ಬಳಸಿ ಪ್ರಕರಣವನ್ನು ಇತ್ಯರ್ಥಗೊಳಿಸುವ ಆಸಕ್ತಿ, ಜ್ಞಾನ ಮಧ್ಯಸ್ಥಗಾರನಿಗೆ ಇದ್ದಾಗ ಮಾತ್ರ ಪರಸ್ಪರ ಸಮ್ಮತಿಯಿಂದ ಬಗೆಹರಿಸಿಕೊಳ್ಳಬಹುದಾದ ವ್ಯಾಜ್ಯಗಳನ್ನು ಲೋಕ ಅದಾಲತ್‌ಗಳಲ್ಲಿ ಬಗೆಹರಿಸಬಹುದು ಎಂದು ಅಭಿಪ್ರಾಯಪಟ್ಟರು.


ಹಲವು ಪ್ರಕರಣಗಳ ಅಂಕಿ–ಅಂಶಗಳನ್ನು ಗಮನಿಸಿದಾಗ ನಿರೀಕ್ಷಿತ ಮಟ್ಟದಲ್ಲಿ ಪ್ರಕರಣಗಳು ವಿಲೇವಾರಿಯಾಗುತ್ತಿಲ್ಲ, ಪರಿಣಾಮಕಾರಿಯಾಗಿ ಸಂಧಾನ ಪ್ರಕ್ರಿಯೆ ನಡೆಸಿ ಸಮಯ ಪಾಲನೆ ಮಾಡುವ ಮೂಲಕ ನಿಗದಿತ ಅವಧಿಯೊಳಗಾಗಿ ವ್ಯಾಜ್ಯ ಇತ್ಯರ್ಥಗೊಳಿಸಿದಲ್ಲಿ ನ್ಯಾಯಾಲಯಗಳ ಸಮಯವೂ ಉಳಿಯುತ್ತದೆ ಎಂದರು.


ಕೌಟುಂಬಿಕ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರಾದ ಸಾವಿತ್ರಿ ಎಸ್.ಕುಜ್ಜಿ ಮಾತನಾಡಿ, ಇತ್ತೀಚೆಗೆ ಸಂಸಾರದಲ್ಲಿ ಭಿನ್ನಾಭಿಪ್ರಾಯಗಳು ಉಂಟಾದ ಪರಿಣಾಮ ಕೌಟುಂಬಿಕ ವ್ಯಾಜ್ಯಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ವಿಭಿನ್ನ ರೀತಿಯ ವೈಮನಸ್ಸುಗಳನ್ನು ಅರ್ಥ ಮಾಡಿಕೊಂಡು ಬಗೆಹರಿಸಲು ಪ್ರಯತ್ನಿಸಬೇಕು ಎಂದರು. ವಕೀಲರ ಸಂಘದ ಅಧ್ಯಕ್ಷ ಲೋಕೇಶ್, ಎಸ್.ಆರ್. ಅನುರಾಧ, ಬೃಂದಾ ನಂದಕುಮಾರ್ ಸೇರಿದಂತೆ ಹಲವರು ತರಬೇತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.


ಪುಸ್ತಕ ಆಯ್ಕೆಯ ಅಸಂಬದ್ಧವಾದ ನಿಯಮಾವಳಿಗೆ ಲೇಖಕರು, ಪ್ರಕಾಶಕರ ಸಂಘದ ಅಸಮಾಧಾನ


ನಾನಾ ಭಾಗ್ಯ ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಂಸ್ಕೃತಿಯ ಜೀವನಾಡಿಯಾದ ಪುಸ್ತಕಗಳಿಗೂ 'ಗ್ಯಾರಂಟಿ' ನೀಡಲು ಮನವಿ











ಮೈಸೂರು, ಅ.26– 2020ರ ಏಕಗವಾಕ್ಷಿ ಯೋಜನೆಯಡಿ ಗ್ರಂಥಾಲಯಗಳಿಗೆ ಖರೀದಿ ಮಾಡಿದ ಪುಸ್ತಕಗಳ ಬಿಲ್ ಅನ್ನು ಏಳು ತಿಂಗಳು ಕಳೆದರೂ ಪ್ರಕಾಶಕರಿಗೆ ಪಾವತಿ ಮಾಡಿಲ್ಲ ಎಂದು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಆಯುಕ್ತರಿಗೆ ಪತ್ರ ಬರೆದಿರುವ ಅಖಿಲ ಕರ್ನಾಟಕ ಲೇಖಕರ ಮತ್ತು ಪ್ರಕಾಶಕರ ಸಂಘವು ಶೀಘ್ರವೇ ಹಣ ಪಾವತಿಸುವಂತೆ ಮನವಿ ಮಾಡಿದೆ.

ಅಲ್ಲದೇ 2021ನೇ ಸಾಲಿನ ಪುಸ್ತಕಗಳ ಆಯ್ಕೆಯಲ್ಲಿ ಶೇ.60ಕ್ಕಿಂತ ಹೆಚ್ಚು ಪುಸ್ತಕಗಳನ್ನು ತಿರಸ್ಕರಿಸಿರುವ ಬಗ್ಗೆ ಸಂಘದ ಅಧ್ಯಕ್ಷ ಡಿ.ಎನ್.ಲೋಕಪ್ಪ ಮತ್ತು ಕಾರ್ಯದರ್ಶಿ ಯು.ಎಸ್.ಮಹೇಶ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

2018ರಲ್ಲಿ ಶೇ.20, 2019ರಲ್ಲಿ ಶೇ.10ರಷ್ಟು ಪುಸ್ತಕಗಳು ತಿರಸ್ಕರಿಸಲ್ಪಟ್ಟಿದ್ದವು. ಆದರೆ 2021ನೇ ಸಾಲಿನಲ್ಲಿ ಶೇ.60ರಷ್ಟು ಪುಸ್ತಕ ತಿರಸ್ಕರಿಸಿರುವುದು ಸರ್ವಕಾಲಿಕ ದಾಖಲೆಯೇ ಆಗಿದೆ. ಜೊತೆಗೆ ಪುಸ್ತಕಗಳ ತಿರಸ್ಕಾರದ ಬಗ್ಗೆ ಕೆಲವೊಂದು ಸಂಶಯಗಳು ಹಾಗೂ ಪ್ರಶ್ನೆಗಳು ಮೂಡಿವೆ ಎಂದು ಅವರು ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಮೊದಲು ಖರೀದಿಗೆ ಆಯ್ಕೆಯಾಗಿದ್ದ ಪುಸ್ತಕಗಳನ್ನು ಪುನರ್ ಪರಿಶೀಲನೆ ವೇಳೆ ಆಯ್ಕೆಯಾಗಿಲ್ಲ ಎಂದು ನಮೂದಿಸಲಾಗಿದೆ. ಆದರೆ ಪುಸ್ತಕಗಳ ಪುನರ್ ಪರಿಶೀಲನೆ ಮಾಡಲು ಯಾವ ಮಾನದಂಡವನ್ನು ಆಯ್ಕೆ ಸಮಿತಿಗೆ ನೀಡಲಾಗಿತ್ತು ಎಂದು ಪ್ರಶ್ನಿಸಿದ್ದಾರೆ.

2022ರ ಜನವರಿಯಲ್ಲಿ ಇಲಾಖೆಯು ಗ್ರಂಥಾಲಯಕ್ಕೆ ಪುಸ್ತಕಗಳನ್ನು ಆಹ್ವಾನಿಸಿದಾಗ ಇಲ್ಲದೇ ಇದ್ದ ನಿಯಮಗಳನ್ನು ಈಗ ಹೇರಲಾಗಿದೆ. ಕಾವ್ಯ, ನಾಟಕ, 10 ವರ್ಷದ ನಂತರ ಪುನರ್ ಮುದ್ರಣದ ಕೃತಿಗಳು, ಲೇಖಕರ ಸಮಗ್ರ ಸಂಪುಟಗಳು, ಅಭಿನಂದನಾ ಗ್ರಂಥಗಳು ಹಾಗೂ ಸಂಸ್ಮರಣ ಗ್ರಂಥಗಳನ್ನು ತಿರಸ್ಕರಿಸಿರುವುದು ಸರಿಯಲ್ಲ. ಕೆಲವು ಪುಸ್ತಕಗಳಿಗೆ 'ಇಂತಹ ಪುಸ್ತಕಗಳು ಈಗಾಗಲೇ ಗ್ರಂಥಾಲಯದಲ್ಲಿ ಇವೆ' ಎಂದು ಆಯ್ಕೆ ಸಮಿತಿಯವರು ಟಿಪ್ಪಣಿ ಬರೆದಿರುವುದು ಸಂಶಯಾಸ್ಪದವಾಗಿದೆ. ಇಂತಹ ಟಿಪ್ಪಣಿ ಕೊಡಬೇಕಾಗಿರುವುದು ಗ್ರಂಥಪಾಲಕರಲ್ಲವೇ? ಎಂದು ಪ್ರಶ್ನಿಸಿದ್ದಾರೆ. 'ತಾಂತ್ರಿಕ ಕಾರಣಗಳಿಂದ ಆಯ್ಕೆಯಾಗಿಲ್ಲ' ಹಾಗೂ 'ನಿಯಮಾನುಸಾರ ಆಯ್ಕೆಯಾಗಿಲ್ಲ' ಮತ್ತು 'ಗ್ರಂಥಾಲಯಕ್ಕೆ ಸೂಕ್ತವಾಗಿಲ್ಲ' ಎಂಬ ಟಿಪ್ಪಣಿಗಳನ್ನು ಬರೆದು ಪುಸ್ತಕಗಳನ್ನು ತಿರಸ್ಕರಿಸಲಾಗಿದೆ. ಅಂದರೆ ತಾಂತ್ರಿಕ ಕಾರಣ ಎಂದರೆ ಏನು? ನಿಯಮಾನುಸಾರ ಅಂದರೆ ಯಾವ ನಿಯಮ? ಗ್ರಂಥಾಲಯಕ್ಕೆ ಸೂಕ್ತವಾಗಿಲ್ಲ ಎನ್ನುವುದಾದರೆ ಸೂಕ್ತವಾದದ್ದು ಎಂಬುದರ ಮಾನದಂಡವೇನು? ಎಂದು ಪ್ರಶ್ನಿಸಿರುವ ಅವರು, ಹೇಗಾದರೂ ಮಾಡಿ ಪುಸ್ತಕಗಳ ಆಯ್ಕೆಯನ್ನು ಮಿತಿಗೊಳಿಸಬೇಕೆಂಬ ಹಠಕ್ಕೆ ಬಿದ್ದು, ಕ್ಷುಲ್ಲಕ ಕಾರಣಗಳನ್ನು ಹುಡುಕಿ ಉತ್ತಮ ಪುಸ್ತಕಗಳನ್ನು ತಿರಸ್ಕರಿಸಿದಂತೆ ಕಂಡು ಬರುತ್ತಿದೆ ಎಂಬ ಸಂಶಯವನ್ನು ಅವರು ವ್ಯಕ್ತಪಡಿಸಿದ್ದಾರೆ.

ಹೊಸ ಚುನಾಯಿತ ಸರ್ಕಾರವು ಹಿಂದಿನ ಸರ್ಕಾರಗಳಂತೆ ಕನ್ನಡ ಮತ್ತು ಸಂಸ್ಕೃತಿಯ ಮಹಾಪೋಷಕವಾಗಿದ್ದು, ಕನ್ನಡ ಸಂಸ್ಕೃತಿಯ ಬಹು ದೊಡ್ಡ ಸಂಪತ್ತು ಕನ್ನಡ ಪುಸ್ತಕಗಳು. ಕನ್ನಡ ಜನತೆಯ ಜೀವನ ಹಸನಾಗಲು ಹೊಸ ಗ್ಯಾರಂಟಿಗಳನ್ನು ನೀಡಿದ ಪುಸ್ತಕ ಪ್ರೇಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವಧಿಯಲ್ಲಿ ಕನ್ನಡ ಪುಸ್ತಕ ಪ್ರಕಾಶನಕ್ಕೆ ಗ್ಯಾರಂಟಿ ಇಲ್ಲದಿರುವ ಪರಿಸ್ಥಿತಿ ಬರಬಾರದು. ಪುಸ್ತಕ ಒಂದು ಸಂಸ್ಕೃತಿಯೇ ಹೊರತು ಸರಕಲ್ಲ. ಇದನ್ನು ಕೇವಲ ಉತ್ಪಾದಕ ದೃಷ್ಟಿಕೋನದಿಂದ ನೋಡಬಾರದು. ಸರ್ಕಾರವು ಸಾರ್ವಜನಿಕರಿಗೆ ಮೂಲಸೌಕರ್ಯಗಳಾದ ಶಿಕ್ಷಣ, ಆರೋಗ್ಯ, ನೀರು ಮುಂತಾದ ಸೌಕರ್ಯಗಳನ್ನು ಒದಗಿಸುವಂತೆ ಗ್ರಂಥಾಲಯಗಳ ಮೂಲಕ ಓದುಗರಿಗೆ ಪುಸ್ತಕಗಳನ್ನು ಒದಗಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ವರ್ಷಕ್ಕೆ ಮೂರೂವರೆ ಲಕ್ಷ ಕೋಟಿ ಮುಂಗಡ ಪತ್ರ ನೀಡುವ ಸರ್ಕಾರವು, ಗ್ರಂಥಾಲಯಗಳಿಗೆ ಪುಸ್ತಕ ಖರೀದಿಗೆ 10ರಿಂದ 15 ಕೋಟಿ ಖರ್ಚು ಮಾಡಿದರೆ ಹೊರೆಯಾಗಲ್ಲ. ಅದಕ್ಕೆ ಇಚ್ಛಾಶಕ್ತಿ ಇರಬೇಕು ಎಂದಿರುವ ಅವರು, ಪುಸ್ತಕಗಳ ಆಯ್ಕೆಯನ್ನು ಉದಾರ ಹಾಗೂ ಮುಕ್ತ ಮನಸ್ಸಿನಿಂದ ಮಾಡುವ ಮೂಲಕ ಸಹಕರಿಸಬೇಕು ಎಂದು ಮನವಿ ಮಾಡಿದ್ದಾರೆ.

'ಅಭಿನಂದನ'–ಚೆನ್ನವೀರ ಕಣವಿ, 'ಧೀರ ಸನ್ಯಾಸಿ' –ಡಾ.ಚಂದ್ರಶೇಖರಯ್ಯ, 'ಬಾನುಲಿ ದೇವಿ'–ಶಾಂತಾದೇವಿ ಕಣವಿ, 'ಪ್ರಸ್ಥಾನ' ಕಾದಂಬರಿ–ಡಾ.ಶ್ರೀಧರ ಎಚ್.ಜಿ., ಶಿವಾಜಿ ಖಡ್ಗ–ಡಾ.ಕೆ.ಬಿ.ಗಣಪತಿ ಇನ್ನಿತರೆ ಉತ್ತಮ ಪುಸ್ತಕಗಳ ಆಯ್ಕೆ ಮಾಡದೇ ಇರುವುದಕ್ಕೆ ಬೇಸರ ವ್ಯಕ್ತವಾಗಿದೆ.

ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನಲ್ಲಿ ಮಹರ್ಷಿ ವಾಲ್ಮೀಕಿ, ಗಾಂಧಿ ಜಯಂತಿ



ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನಲ್ಲಿ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ಹಾಗೂ ರಾಷ್ಟ್ರಪಿತ ಮಹಾತ್ಮ ಗಾಂಧಿ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಬ್ಯಾಂಕ್ ಅಧ್ಯಕ್ಷೆ ಪಿ.ರಾಜೇಶ್ವರಿ, ಉಪಾಧ್ಯಕ್ಷೆ ಪಿ.ಸವಿತಾ, ನಿರ್ದೇಶಕರಾದ ಆರ್.ರವಿಕುಮಾರ್(ರಾಜಕೀಯ), ಜೆ.ಯೋಗೇಶ್, ಎಸ್.ಬಿ.ಎಂ.ಮಂಜು ಎಸ್.ಅರವಿಂದ, ಎ.ಮಂಚಪ್ಪ, ಸಿ.ರೇವಣ್ಣ, ವೃತ್ತಿಪರ ನಿರ್ದೇಶಕ ಸಿ.ಎಸ್.ರಾಮಕೃಷ್ಣಯ್ಯ, ಸಿಇಓ ಹರ್ಷಿತ್‌ಗೌಡ, ಬ್ಯಾಂಕಿನ ಸದಸ್ಯರು, ಸಿಬ್ಬಂದಿ ಉಪಸ್ಥಿತರಿದ್ದರು.

ಪ್ರೀತಿಸುವಂತೆ ಅಪ್ರಾಪ್ತೆ ಪೀಡಿಸುತ್ತಿದ್ದ ಯುವಕನಿಗೆ 3 ವರ್ಷ ಕಠಿಣ ಶಿಕ್ಷೆ



ಮೈಸೂರು, ಅ. 26(ಆರ್‌ಕೆ)– ತನ್ನನ್ನು ಪ್ರೀತಿಸುವಂತೆ ಅಪ್ರಾಪ್ತೆಯನ್ನು ಪೀಡಿಸುತ್ತಿದ್ದ ಯುವಕನಿಗೆ ಮೈಸೂರಿನ ಪೋಕ್ಸೋ ವಿಶೇಷ ನ್ಯಾಯಾಲಯವು 3 ವರ್ಷ ಕಠಿಣ ಸಜೆ ಹಾಗೂ 10,000 ರೂ. ದಂಡ ವಿಧಿಸಿದೆ.

ಮೈಸೂರಿನ ಆಲನಹಳ್ಳಿ ನಿವಾಸಿ ಜಿ. ಮನು(21) ಶಿಕ್ಷೆಗೆ ಗುರಿಯಾದ ಆರೋಪಿ. ಆಲನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಶುಶ್ರುತ್ ಬಡಾವಣೆಯಲ್ಲಿ ವಾಸವಾಗಿರುವ 16 ವರ್ಷದ ಬಾಲಕಿ ಒಬ್ಬಳೇ ಇರುವುದನ್ನು ಖಾತರಿಪಡಿಸಿಕೊಂಡ ಆತ, 2022ರ ಆಗಸ್ಟ್ 22ರಂದು ಆಕೆಯ ಮನೆ ಬಳಿಗೆ ಹೋಗಿ ಹೊರಗೆ ನಿಂತು ಕಿಟಕಿ ಮೂಲಕ ತನ್ನನ್ನು ಪ್ರೀತಿಸುವಂತೆ ಒತ್ತಾಯಿಸಿದ್ದ ತಾನು ತಂದಿದ್ದ ಮೊಬೈಲ್ ಅನ್ನು ಆಕೆಗೆ ಕೊಟ್ಟು ತನ್ನೊಂದಿಗೆ ಮಾತನಾಡು ಎಂದು ಪೀಡಿಸಿ ಮಾನಸಿಕವಾಗಿ ಹಿಂಸೆ ನೀಡಿದ್ದನಾದರೂ ಅಪ್ರಾಪ್ತೆ ನಿರಾಕರಿಸಿ ಫೋನ್ ತೆಗೆದುಕೊಳ್ಳದೇ ವಾಪಸ್ ಕಳುಹಿಸಿದ್ದಳು. ತಂದೆ–ತಾಯಿ ಮನೆಗೆ ಬಂದಾಗ ಈ ವಿಷಯವನ್ನು ಬಾಲಕಿ ತಿಳಿಸಿದ ಹಿನ್ನೆಲೆಯಲ್ಲಿ ಪೋಷಕರು ಆಲನಹಳ್ಳಿ ಠಾಣೆಗೆ ಲಿಖಿತ ದೂರು ನೀಡಿದ್ದರು. ಪೋಕ್ಸೋ ಪ್ರಕರಣ ದಾಖಲಿಸಿಕೊಂಡಿದ್ದ ಆಲನಹಳ್ಳಿ ಪೊಲೀಸ್ ಇನ್‌ಸ್ಪೆಕ್ಟರ್ ಜಿ.ಎನ್.ಶ್ರೀಕಾಂತ, ಆರೋಪಿ ಮನು ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಪೋಕ್ಸೋ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಆನಂದ ಪಿ. ಹೊಗಾಡೆ ಅವರು, ವಾದ–ಪ್ರತಿವಾದ ಆಲಿಸಿ, ಸಾಕ್ಷ್ಯಾಧಾರಗಳಿಂದ ಆರೋಪ ಸಾಬೀತಾದ ಕಾರಣ, ಆರೋಪಿ ಮನುಗೆ 3 ವರ್ಷ ಕಠಿಣ ಶಿಕ್ಷೆ ಹಾಗೂ 10,000 ರೂ. ದಂಡ ವಿಧಿಸಿ ಅಕ್ಟೋಬರ್ 23ರಂದು ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕರಾದ ಕೆ.ಬಿ.ಜಯಂತಿ ವಾದ ಮಂಡಿಸಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕುತ್ತಿಗೆ ಹಾಗೂ ಬೆನ್ನು ನೋವಿಗೆ ಅಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30 ರವರೆಗೆ.

■ **ಬೆಳಕು ಹೊಳಪು:** ಚಿಂತನ–ಮಂಥನ, ಉದ್ಘಾಟನೆ: ಹಿರಿಯ ಕಲಾವಿದ ಪ್ರಕಾಶ್ ಬೆಳವಾಡಿ, ಉಪಸ್ಥಿತರು: ಜಿ.ಬಿ.ಹರೀಶ್, ಡಾ.ಎಸ್.ಆರ್.ಲೀಲಾ, ಎಂ.ಸಿ. ಕಟ್ಟಿಮನಿ, ಫಟಾಫಟ್ ಶ್ರೀನಿವಾಸ್, ಸುಧಾಕರ ಹೊಸಳ್ಳಿ, ಪ್ರವೀಣ ಕುಮಾರ್ ಮಾವಿನಕಾಡು, ಚಕ್ರವರ್ತಿ ಸೂಲಿಬೆಲೆ, ಸ್ಥಳ: ಗಾನಭಾರತಿ ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 9.30ರಿಂದ.

■ **ಅಖಿಲ ಕರ್ನಾಟಕ ತಿಗಳರ ಕ್ಷೇಮಾಭಿವೃದ್ಧಿ ಮತ್ತು ಸಾರ್ವಜನಿಕ ವಿದ್ಯಾಭಿವೃದ್ಧಿ ಸಂಘ :** ನೂತನ ಕಟ್ಟಡದ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಮಾಜಿ ವಿಧಾನ ಪರಿಷತ್ ಸದಸ್ಯ ಪಿ.ಆರ್.ರಮೇಶ್, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಡಾ.ಜಿ.ರಾಮಯ್ಯ, ಉಪಸ್ಥಿತರು: ಹೆಚ್. ಸುಬ್ಬಣ್ಣ, ಶಾಸಕ ಜಿ.ಟಿ.ದೇವೇಗೌಡ, ಮಾಜಿ ಸಂಸದ ಪ್ರತಾಪ್ ಸಿಂಹ, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ಬೆಂಗಳೂರು ವಿವಿ ಮಾಜಿ ಕುಲಪತಿ ಪ್ರೊ. ಕೆ.ಆರ್. ವೇಣುಗೋಪಾಲ್, ಮಾಜಿ ಶಾಸಕ ನೆಲ ನರೇಂದ್ರಬಾಬು, ಜಿ. ನರಸಿಂಹಮೂರ್ತಿ, ಎ.ಎಚ್. ಬಸವರಾಜು, ಬಿ.ಎಂ.ಗಂಗರಾಜು, ರಾಮಯ್ಯ, ಹೆಚ್.ವಿ. ಮಾಲಿನಿ ವೆಂಕಟೇಶ್, ಸ್ಥಳ: ಸಿಎ–01, ಜಿ–ಬ್ಲಾಕ್, ವಿಜಯನಗರ 3ನೇ ಹಂತ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಉಚಿತ ಆರೋಗ್ಯ ತಪಾಸಣೆ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 10 ರಿಂದ

■ **ಶ್ರೀ ಉರಿಲಿಂಗಪೆದ್ದಿ ಮಹಾಸಂಸ್ಥಾನ ಶಾಖಾ ಮಠ :** ಶ್ರೀ ಸಿದ್ದಪ್ಪ ಮಹಾಸ್ವಾಮಿಬಳವರ ಸ್ಮರಣಾರ್ಥ ಶರಣ ಚಿಂತನೆ–ತತ್ವಪದಕಾರರ ಸಂಗಮ, ಸಾನ್ನಿಧ್ಯ: ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಉದ್ಘಾಟನೆ: ಮೈಸೂರು ವಿವಿ ಪ್ರಾಧ್ಯಾಪಕ ಪ್ರೊ. ನಂಜಯ್ಯ ಹೊಂಗನೂರು, ಅಧ್ಯಕ್ಷತೆ: ಜಯದೇವಿ ತಾಯಿ ಮಾತಾಜಿ, ಪ್ರಾಸ್ತಾವಿಕ ನುಡಿ: ಶರಣ ಶ್ರೀ ಪರಮೇಶ್ವರ, ಸ್ಥಳ: ಮಠದ ಆವರಣ, ಗಾಂಧಿನಗರ, ಬೆಳಗ್ಗೆ 10ಕ್ಕೆ.

■ **ವ್ಯವಸ್ಥಾಪಕರು:** ಛಾಯಾಚಿತ್ರ ಕಲಾಕೃತಿಗಳ ಪ್ರದರ್ಶನ, ಖ್ಯಾತ ವನ್ಯಜೀವಿ ಛಾಯಾಚಿತ್ರ ಕಲಾವಿದರಾದ ಎಸ್. ರಾಮಪ್ರಸಾದ್ ಅವರ ಬೆರಗುಕಾರಿ 3ಡಿ ಛಾಯಾಚಿತ್ರ ಕಲಾಕೃತಿಗಳ ಪ್ರದರ್ಶನ, ಆಲೇಖ್ಯ ಮತ್ತು ವಿನ್ಯಾಸ: 3ಡಿ ಅರಸಿಕುಮಾರ್, ಸ್ಥಳ: ಸುಚಿತ್ರ ಆರ್ಟ್ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 10.30ಕ್ಕೆ

■ **ಅಭಿವೃದ್ಧಿ ಸಿಲ್ಕ್ ಇಂಡಿಯಾ :** ದೀಪಾವಳಿ ಹಬ್ಬದ ಪ್ರಯುಕ್ತ ಪರಿಶುದ್ಧ ರೇಷ್ಮೆ ಸೀರೆ ಮತ್ತು ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ವಿನೋಬಾ ರಸ್ತೆ, ಬೆಳಗ್ಗೆ 10.30ರಿಂದ.

■ **ಶ್ರೀ ನಾದಬ್ರಹ್ಮ ಸಂಗೀತ ಸಭಾ:** ವೈಣಿಕ ವೈಭವ, ಸಂಗೀತ ಕಲಾನಿಧಿ, ಪದ್ಮಭೂಷಣ ಡಾ. ಮೈಸೂರು ವಿ.ದೊರೆಸ್ವಾಮಿ ಅಯ್ಯಂಗಾರ್ ಅವರ 104ನೇ ಜನ್ಮ ದಿನಾಚರಣೆ ಸವಿನೆನಪಿಗಾಗಿ ಸಂಗೀತ ಕಾರ್ಯಕ್ರಮಗಳು, ಬೆಳಗ್ಗೆ 10ಕ್ಕೆ ಉದ್ಘಾಟನೆ, ವಿದ್ವಾನ್ ದಿಲಿಪ್ ಸಿಂಹ ಅವರಿಂದ ಕರ್ನಾಟಕ ಶಾಸ್ತ್ರೀಯ ಗಾಯನ, ವಿದುಷಿ ಪೃಥ್ವಿ ಭಾಸ್ಕರ್–ವಯೋಲಿನ್, ವಿದ್ವಾನ್ ಶಿವಲಕ್ಷ್ಮಿ ಕೇಶವ–ಮೃದಂಗ ಮತ್ತು ವಿದ್ವಾನ್ ವಿಕ್ರಮ್ ಭಾರದ್ವಾಜ್ ವೈ.ಪಿ–ಮೋರ್ಚಿಂಗ್, ಬೆಳಗ್ಗೆ 11.30ಕ್ಕೆ ವಿದ್ವಾನ್ ಪಣೀಂದ್ರ ಶರ್ಮ ಅನೂರ್ ಅವರಿಂದ ಗಾಯನ, ವಿದುಷಿ ಪೃಥ್ವಿ ಭಾಸ್ಕರ್–ವಯೋಲಿನ್, ವಿದ್ವಾನ್ ಶಿವಲಕ್ಷ್ಮಿ ಕೇಶವ–ಮೃದಂಗ ಮತ್ತು ವಿದ್ವಾನ್ ವಿಕ್ರಮ್ ಭಾರದ್ವಾಜ್ ವೈ.ಪಿ–ಮೋರ್ಚಿಂಗ್, ಸಂಜೆ 6ಕ್ಕೆ ವಿದುಷಿ ಕಾಶಿ ವಿಶಾಲಾಕ್ಷಿ ಅವರಿಗೆ ವೈಣಿಕ ಬ್ರಹ್ಮ ಪ್ರಶಸ್ತಿ ಪ್ರದಾನ, ವೈದೇಹಿ ಮತ್ತು ಶ್ರೀಮತಿ ಪುಷ್ಪಾ ಅಯ್ಯಂಗಾರ್ ಅವರಿಂದ ವೈಣಿಕ ಬ್ರಹ್ಮ ಅವರಿಗೆ ನಗದು ಬಹುಮಾನ, ವಿದ್ವಾನ್ ಕಾಶಿ ವಿಶಾಲಾಕ್ಷಿ ಮತ್ತು ವಿದುಷಿ ಪಪ್ಪು ಪದ್ಮ ರವಿಶಂಕರ್ ಅವರಿಂದ ವೀಣಾ ದ್ವಂದ್ವ ವಾದನ, ವಿದ್ವಾನ್ ಸುನೀಲ್ ಸುಬ್ರಮಣ್ಯ–ಮೃದಂಗ, ವಿದುಷಿ ಶಮಿತ್ ಎಸ್. ಗೌಡ–ಘಟಂ, ಸ್ಥಳ: ಮೈಸೂರು ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ



ಇಂದಿನ ಪಂಚಾಂಗ

27.10.2024 ಭಾನುವಾರ, ಮಳೆ ನಕ್ಷತ್ರ: ಸ್ವಾತಿ, 24.10.2024ರಿಂದ 05.11.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಕೃಷ್ಣ ಪಕ್ಷ, ತಿಥಿ: ದಶಮಿ, ನಕ್ಷತ್ರ: ಮಖ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್ :** 'ಅರಳು ಪ್ರತಿಭೆ' ಪ್ರತಿಭಾಂಕುರ ನೂತನ ಸಂಗೀತ ಮಾಲಿಕೆ, ಏಕರಾಗ ದರ್ಶನ ಶಹಾನ, ವಿದುಷಿ ರಶ್ಮಿ ಆರ್. ಬೆಂಗಳೂರು ಅವರಿಂದ ಗಾಯನ, ವಿದ್ವಾನ್ ಎಂ.ಡಿ. ಅರ್ಜುನ್–ವಯೋಲಿನ್, ವಿದ್ವಾನ್ ಪಿ.ಎಸ್. ಶ್ರೀಧರ್–ಮೃದಂಗ, ಸ್ಥಳ: ಶ್ರೀಸ್ವರ, ದೇವಪಾರ್ಥಿವ ರಸ್ತೆ, ಚಾಮರಾಜಪುರಂ, ಬೆಳಗ್ಗೆ 10.30ಕ್ಕೆ.


■ **ಕೆ.ಟಿ. ವೀರಪ್ಪ ಅಭಿಮಾನಿ ಬಳಗ:** ಕೆ.ಟಿ.ವೀರಪ್ಪ–90 ಅಭಿನಂದನಾ ಸಮಾರಂಭ, ಅಧ್ಯಕ್ಷತೆ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಎನ್. ಎಸ್.ರಾಮೇಗೌಡ, ಕೆ.ಟಿ.ವೀರಪ್ಪ ಕುರಿತ ಚಿತ್ರಸಂಪುಟ ಬಿಡುಗಡೆ : ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಲೋಕನಾಥ್, ಕೆ.ಟಿ.ವೀರಪ್ಪ– ವಿಜಯ ವೀರಪ್ಪ ದಂಪತಿಗೆ ಅಭಿನಂದನೆ, ಮುಖ್ಯ ಅತಿಥಿಗಳು: ಹಿರಿಯ ಸಾಹಿತಿ ಡಾ.ಸಿ.ಪಿ.ಕೆ., ಪ್ರೊ.ಪ್ರಧಾನ್ ಗುರುದತ್, ಸ್ಥಳ: ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಬೆಳಗ್ಗೆ 10.30ಕ್ಕೆ

■ **ಸ್ಪಂದನ ವೀರಶೈವ ಬಳಗ:** ಬಸವ ಜಯಂತಿ ಮತ್ತು ಬಳಗದ 18ನೇ ವಾರ್ಷಿಕೋತ್ಸವ, ಸಾನ್ನಿಧ್ಯ: ಬಸವ ಜ್ಞಾನ ಮಂದಿರದ ಪೀಠಾಧ್ಯಕ್ಷ ಮಾತೆ ಡಾ. ಬಸವಾಂಜಲಿ, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಉದ್ಘಾಟನೆ: ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು: ಶ್ರೀಮತಿ ಶ್ವೇತಾ ಮಡಪ್ಪಾಡಿ, ಬಳಗದ ಸಂಸ್ಥಾಪಕ ಅಧ್ಯಕ್ಷೆ ಶ್ರೀಮತಿ ಗೀತಾ ಈಶ್ವರ್, ಸ್ಥಳ: ಜೆಎಸ್‌ಎಸ್ ಕಾನೂನು ಕಾಲೇಜು, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಆರ್ಯ ಆಸ್ಪತ್ರೆ :** ಪ್ರಥಮ ವಾರ್ಷಿಕೋತ್ಸವ ಸಮಾರಂಭ, ಮುಖ್ಯ ಅತಿಥಿಗಳು: ಶಾಸಕ ಟಿ.ಎಸ್.ಶ್ರೀವತ್ಸ ಮಾಜಿ ಶಾಸಕ ಎಸ್.ಕೃಷ್ಣಪ್ಪ, ಸನ್ಮಾನ: ಡಾ.ಎಸ್.ರಂಗನಾಥಯ್ಯ, ಡಾ. ದಮಯಂತಿ ಅರಸ್, ಡಾ.ಆರ್.ರವಿಶಂಕರ್, ಸ್ಥಳ: ಅರಸು ಜಿಮ್‌ಖಾನ ಕ್ಲಬ್, ರೇಸ್ ಕೋರ್ಸ್ ರಸ್ತೆ, ಬೆಳಗ್ಗೆ 10.30ಕ್ಕೆ

■ **ಅಲೆಯನ್ಸ್ ಕ್ಲಬ್ ಆಫ್ ಮೈಸೂರು ನಾಲ್ವಡಿ ಸ್ಟಾರ್ ಸಿಂಗರ್ಸ್ :** ಉದ್ಘಾಟನಾ ಸಮಾರಂಭ, ಮಾಧ್ಯಮ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಗಾನಯಾನ–1, ಉಪಸ್ಥಿತರು: ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಡಾ. ನಾಗರಾಜ ವಿ.ಭೈರಿ, ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್, ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಎನ್. ಬೆಟ್ಟೇಗೌಡ, ಡಾ.ವೈ.ಡಿ.ರಾಜಣ್ಣ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ –ಹೆಚ್. ಆರ್. ಲಕ್ಷ್ಮೀನಾರಾಯಣ ಭಟ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಗೀತಾ ವೈ.ಪುಟ್ಟಿ, ಎಂ.ಆರ್.ಸುಧಾ, ವ್ಯಾಖ್ಯಾನ–ಡಾ.ಬಿ.ವಿ.ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಹಾಸನಾಂಬೆ ದರ್ಶನ–ಪ್ರಾಯೋಜಿತ ಕಾರ್ಯಕ್ರಮ, ಹಾಸನಾಂಬೆ ದೇವಿಯ ಇತಿಹಾಸ ಕುರಿತು ಮಾತನಾಡುತ್ತಾರೆ ಡಾ.ಸಿ.ಚ.ಯತೀಶ್ವರ, ನಿರ್ಮಾಣ–ಡಾ.ವಿಜಯ್ ಅಂಗಡಿ, ನಿರ್ವಹಣೆ–ಬಿ.ವಿ.ಶ್ರೀಧರ್, ಪ್ರಾಯೋಜಕರು–ಜಿಲ್ಲಾಡಳಿತ, ಹಾಸನ, 8.45 ಕನ್ನಡ ಚಿತ್ರಗೀತೆಗಳು, 9.05–ನಮ್ಮ ಆರೋಗ್ಯ 'ಆಯಿಷ್ ಯಶೋಗಾಥೆ' ಸರಣಿಯಲ್ಲಿ 'ಶ್ರವಣದೋಷ' ಮತ್ತು 'ಬುದ್ಧಿಮಾಂದ್ಯತೆ' ಕುರಿತು ಕಾರ್ಯಕ್ರಮ. ಭಾಗವಹಿಸುತ್ತಾರೆ: ಡಾ.ಮೇಘಾ, ಡಾ.ಸಂಗೀತಾ ಮಹೇಶ್, ವಿಠ್ಠಲ್. ಎಸ್.ಕೆ, ಸುಧಾ ಬಾಲಕೃಷ್ಣರಾವ್, ಪ್ರಸ್ತುತಿ: ಬೇದ್ರೆ ಮಂಜುನಾಥ್ ಮತ್ತು ದಿಗ್ವಿಜಯ್. ಬಿ., ಪ್ರಾಯೋಜಕರು– ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಮೈಸೂರು, 9.35 ಚಿತ್ರಗೀತೆಗಳು, 9.45 ಹಾಸನ ದರ್ಶನ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಜಿಲ್ಲಾ ಪ್ರವಾಸೋದ್ಯಮ ಇಲಾಖೆ, ಹಾಸನ, 10.00 ಕೇಳಿ ಗಿಳಿಗಳೇ: ವಿವಿಧ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 ಮಕ್ಕಳ ಮಂಟಪ: 'ಹಕ್ಕಿಗೂಡು' ಕಥೆ ಹೇಳುತ್ತಾರೆ–ಕೆ.ಎಸ್.ಶಿವರಾಂ ಜೊತೆಗೆ ಮಾಹಿತಿ, ಪ್ರಸ್ತುತಿ: ಎಂ.ಎಸ್.ಭಾರತಿ, 11.00 ಮನ್ ಕೀ ಬಾತ್–ಭಾರತದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತು, 11.30 ಮನ್ ಕೀ ಬಾತ್–ಭಾರತದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದ

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ದೇವರನಾಮ–ಬಳ್ಳಾರಿ ಎಂ.ರಾಘವೇಂದ್ರ, 12.45 ಜನಪದ ಸಂಗೀತ–ಚಾಮರಾಜನಗರ ರಾಮಸಮುದ್ರದ ಚಿನ್ನಮ್ಮ ಮತ್ತು ಸಂಗಡಿಗರಿಂದ ನಿಂಗರಾಜಮ್ಮನ ಹಾಡು, 1.00 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ: ಶಭಾನ ಮತ್ತು ಕೀರ್ತಿ.ಎಸ್. ಬೈಂದೂರು, ಪರಿಕಲ್ಪನೆ: ಅಬ್ದುಲ್ ರಶೀದ್, 1.20 ಹಾಸನಾಂಬೆ ದರ್ಶನ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಜಿಲ್ಲಾಡಳಿತ, ಹಾಸನ, 1.25 ಭಾವಗೀತೆಗಳು–ನಿಖಿಲಾ. ಬಿ.ವಿ., 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ಕಮಲ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ: ಎಂ.ವೆಂಕಟೇಶ್ ಗೋಡ್ಖಿಂಡಿ–ಕೊಳಲು ವಾದನ, 4.45 ಚಿತ್ರಗೀತೆಗಳು, 6.51 ಕೃಷಿರಂಗ: ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ– ವಾರದ ಕೃಷಿರಂಗ–ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ–ಆರ್.ಲೋಕೇಶ್ವರಿ, 7.45 ಯಾರೂ ಕಾಣದ ಪ್ರವಾಸಿ ತಾಣ–ನಂಜನಗೂಡು ತಾಲೂಕಿನ ಗಂಗರ ಕಾಲದ ಪ್ರವಾಸಿ ತಾಣ ಹಿರೇಕಾಟಿ ಬಗ್ಗೆ ಮಾತನಾಡುತ್ತಾರೆ ಸಿರಿ ಮೈಸೂರು, 8.00 ಮನ್ ಕೀ ಬಾತ್–ಭಾರತದ ಜನತೆಯೊಂದಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿರವರ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 9.15 ರಂಗಗೀತೆಗಳು –ಕುಪ್ಪ ವೆಂಕಟರಾಮ್, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ, ಚಿರಾಗ್ ಕಟ್ಟಿ–ಸಿತಾರ್

■ **ಕುವೆಂಪು ಕಲಾನಿಕೇತನ, ಸ್ನೇಹ ಶ್ರೀರಕ್ಷಾ ಸಂಗೀತ ನೃತ್ಯ ಸಾಂಸ್ಕೃತಿಕ ಅಕಾಡೆಮಿ:** ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ 141ನೇ ಜಯಂತಿ ಪ್ರಯುಕ್ತ ಕರ್ನಾಟಕ ಸಾಂಸ್ಕೃತಿಕ ಕಲಾ ಸಂಭ್ರಮ, ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ: ಡಾ. ಶ್ರೀ ಹನುಮಂತನಾಥ ಮಹಾಸ್ವಾಮೀಜಿ, ಉದ್ಘಾಟನೆ: ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ, ಪ್ರಶಸ್ತಿ ಪ್ರದಾನ: ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಅಭಿನಂದನಾ ಭಾಷಣ: ಹಿರಿಯ ಪೊಲೀಸ್ ಅಧಿಕಾರಿ ಡಾ.ಬಿ.ಆರ್.ರವಿಕಾಂತೇಗೌಡ, ಪ್ರಶಸ್ತಿ ಪುರಸ್ಕೃತರು: ಸಾಹಿತಿ ಪ್ರೊ.ಬಿ.ಜಯಪ್ರಕಾಶ್ ಗೌಡ, ಮಹಾಕವಯತ್ರಿ ಡಾ.ಲತಾ ರಾಜಶೇಖರ್, ಟಿ.ಸತೀಶ್ ಜವರೇಗೌಡ, ಮುಖ್ಯ ಅತಿಥಿಗಳು: ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಡಾ.ಸಂತೋಷ್ ಹಾನಗಲ್ಲ, ಹೆಚ್.ಕೆ.ರಾಮು, ಅಯೂಬ್‌ಖಾನ್, ವ.ಚ.ಚನ್ನೇಗೌಡ, ಸಿ.ಜಿ.ಗಂಗಾಧರ್, ಸ್ಥಳ: ಜಗನ್ಮೋಹನ ಅರಮನೆ ಸಭಾಂಗಣ, ಸಂಜೆ 5.30ಕ್ಕೆ.

■ **ಪ್ರಕಾಶ್ ಪ್ರಿಯದರ್ಶನ್ ಸ್ನೇಹ ಬಳಗ ಹಾಗೂ ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ:** ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತಿ ತೀರ್ಥ ಮಹಾಸ್ವಾಮಿಗಳವರ ಸನ್ಯಾಸ ಸ್ವೀಕಾರ ಸ್ವರ್ಣ ಮಹೋತ್ಸವ ಅಂಗವಾಗಿ ಸಾರ್ವಜನಿಕ ಸುಬ್ಬಣ್ಣ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಲೇಖನಿ ಸಾಮಗ್ರಿಗಳು ಹಾಗೂ ಹಣ್ಣು ಹಂಪಲು ವಿತರಣಾ ಕಾರ್ಯಕ್ರಮ, ಮುಖ್ಯ ಅತಿಥಿಗಳು ಶಾಸಕ ಟಿ.ಎಸ್.ಶ್ರೀವತ್ಸ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್, ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯದರ್ಶನ್, ಯುವ ಮುಖಂಡರಾದ ಎನ್.ಎಂ. ನವೀನ್‌ಕುಮಾರ್, ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ. ರಾಮಪ್ರಸಾದ್, ಎಂ.ಡಿ.ಪಾರ್ಥಸಾರಥಿ, ಕಡಕೊಳ ಜಗದೀಶ್, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಸ್ಥಳ: ಸಾರ್ವಜನಿಕ ಸುಬ್ಬಣ್ಣ ಹಾಸ್ಟೆಲ್ ಆವರಣ, ವಿದ್ಯಾರಣ್ಯಪುರಂ, ಸಂಜೆ 6ಕ್ಕೆ.

■ **ನರಸಿಂಹರಾಜ ಮೊಹಲ್ಲಾ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್:** ವಿದುಷಿ ರೇವತಿ ಕಾಮತ್ ಅವರಿಂದ ವೀಣಾ ವಾದನ, ವಿದ್ವಾನ್ ಬಿ.ಆರ್.ಶ್ರೀಧರ್ ಮತ್ತು ವಿದ್ವಾನ್ ಶರತ್ ಜಿ.ರಾವ್–ಮೃದಂಗ, ವಿದ್ವಾನ್ ಎಂ.ಆರ್. ಮಂಜುನಾಥ್–ಘಟಂ, ಸ್ಥಳ: ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನ, ಎನ್.ಆರ್. ಮೊಹಲ್ಲಾ, ಸಂಜೆ 6.30ಕ್ಕೆ.

■ **ರಂಗಾಯಣ:** ಮೈಸೂರಿನ ಶಶಿ ಥಿಯೇಟರ್ ತಂಡದ ಕಲಾವಿದರಿಂದ 'ಉರಿಯ ಉಯ್ಯಾಲೆ' ನಾಟಕ ಪ್ರದರ್ಶನ, ರಚನೆ: ಡಾ.ಎಚ್.ಎಸ್.ವೆಂಕಟೇಶ್‌ಕುಮಾರ್, ನಿರ್ದೇಶನ : ಬಿ.ಎನ್.ಶಶಿಕಲಾ, ಸ್ಥಳ: ಭೂಮಿಗೀತ ರಂಗಮಂದಿರ, ರಂಗಾಯಣ, ಸಂಜೆ 6.30ಕ್ಕೆ.

■ **ವೇದಾಂತ ಇನ್‌ಸ್ಟಿಟ್ಯೂಟ್, ಬೆಂಗಳೂರು:** ಬೆಂಗಳೂರು ವೇದಾಂತ ಇನ್‌ಸ್ಟಿಟ್ಯೂಟ್‌ನ ಸಂಸ್ಥಾಪಕ ಆಚಾರ್ಯ ಈಶ್ವರನ್ ಅವರಿಂದ ಭಗವದ್ಗೀತೆಯ ಸಾರ ಕುರಿತು ಇಂಗ್ಲೀಷ್‌ನಲ್ಲಿ ಪ್ರವಚನ, ಸ್ಥಳ: ಪ್ರೊ.ವೈ.ಟಿ.ತಾತಾಚಾರಿ ಸಭಾಂಗಣ, ಭಾರತೀಯ ವಿದ್ಯಾಭವನ, ಸಂಜೆ 6.45ರಿಂದ.


■ **ರಂಗವಲ್ಲಿ :** ಮಹಿಳಾ ಏಕವ್ಯಕ್ತಿ ನಾಟಕೋತ್ಸವ, ನುಡಿ ಸುದರ್ಶನ ಅಭಿನಯಿಸುವ ನಾಟಕ ಸಕುಬಾಯಿ ಕಾಮ್‌ವಾಲಿ, ವಿನ್ಯಾಸ ಮತ್ತು ನಿರ್ದೇಶನ : ಹುಲುಗಪ್ಪ ಕಟ್ಟೀಮನಿ, ಸ್ಥಳ: ಕಿರುರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 7ಕ್ಕೆ.

■ **ಕರ್ನಾಟಕ ರತ್ನ ಅಪ್ಪು ಪುನೀತ್ ರಾಜಕುಮಾರ್ ಅಭಿಮಾನಿಗಳ ಬಳಗ, ದಸರಾ ಸಾಂಸ್ಕೃತಿಕ ಹಾಗೂ ಮಹಿಳಾ ಮತ್ತು ಮಕ್ಕಳ ಉಪಸಮಿತಿ :** ಬೆಳಗ್ಗೆ 10.30 ರಿಂದ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ಸ್ಮರಣಾರ್ಥ ಗಂಧದಗುಡಿ ಚಿತ್ರಕಲಾ ಸ್ಪರ್ಧೆ, ಉಪಸ್ಥಿತರು: ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಆಯೂಬ್ ಖಾನ್, ಕಾರ್ಯನಿರ್ವಹಣಾಧಿಕಾರಿ ಕೆ.ರುದ್ರೇಶ್, ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ, ಡಿ.ಟಿ.ಪ್ರಕಾಶ್, ಮಂಚೇಗೌಡನಕೊಪ್ಪಲು ರವಿ, ನವೀನ್‌ಕುಮಾರ್, ಕೆ.ಆರ್. ಬ್ಯಾಂಕ್ ನಿರ್ದೇಶಕ ಶಿವಪ್ರಕಾಶ್, ನಜರ್‌ಬಾದ್ ನಟರಾಜ್, ದಸರಾ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ರಘುರಾಜೇ ಅರಸ್, ರತನ್, ದೀಕ್ಷಿತ್, ಮಹಿಳಾ ಮತ್ತು ಮಕ್ಕಳ ಸಮಿತಿ ಅಧ್ಯಕ್ಷೆ ಶಾರದಾ ಸಂಪತ್, ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಸ್ಥಳ: ಪಿ. ಕಾಳಿಂಗರಾವ್ ಗಾನ ಮಂಟಪ.

ಮೈಸೂರು ಬಿವಿಬಿಯಲ್ಲಿ 'ಭಗವದ್ಗೀತೆಯ ಸಾರ' ಕುರಿತು ಪ್ರವಚನ

ಉತ್ತಮ ಜೀವನಶೈಲಿ ಬಗ್ಗೆ ಭಗವದ್ಗೀತೆ ತಿಳಿಸಿಕೊಡುತ್ತದೆ

ವೇದಾಂತ ಸಂಸ್ಥೆಯ ಸಂಸ್ಥಾಪಕ ಈಶ್ವರನ್





ಮೈಸೂರಿನ ಭಾರತೀಯ ವಿದ್ಯಾಭವನದ ಪ್ರೊ.ವೈ.ಟಿ.ತಾತಾಚಾರಿ ಸಭಾಂಗಣದಲ್ಲಿ ಶನಿವಾರ 'ಭಗವದ್ಗೀತೆಯ ಸಾರ' ಕುರಿತಂತೆ ಇಂಗ್ಲಿಷ್‌ನಲ್ಲಿ ಬೆಂಗಳೂರಿನ ವೇದಾಂತ ಸಂಸ್ಥೆಯ ಸಂಸ್ಥಾಪಕ ಆಚಾರ್ಯ ಈಶ್ವರನ್ ಪ್ರವಚನ ನೀಡಿದರು. ಮತ್ತೊಂದು ಚಿತ್ರದಲ್ಲಿ ಸಭಿಕರನ್ನು ಕಾಣಬಹುದು.

ಮೈಸೂರು,ಅ.26(ಪಿಎಂ)– ಭಗವದ್ಗೀತೆಯು ನಮ್ಮ ಜೀವನಶೈಲಿ ಹೇಗಿದ್ದರೆ ಉತ್ತಮ ಎಂಬುದನ್ನು ತಿಳಿಸಿಕೊಡುತ್ತದೆ ಎಂದು ಬೆಂಗಳೂರಿನ ವೇದಾಂತ ಸಂಸ್ಥೆಯ ಸಂಸ್ಥಾಪಕ ಆಚಾರ್ಯ ಈಶ್ವರನ್ ಹೇಳಿದರು.

ಮೈಸೂರಿನ ವಿಜಯನಗರದ 1ನೇ ಹಂತದಲ್ಲಿರುವ ಭಾರತೀಯ ವಿದ್ಯಾಭವನದ (ಬಿವಿಬಿ) ಪ್ರೊ.ವೈ.ಟಿ.ತಾತಾಚಾರಿ ಸಭಾಂಗಣದಲ್ಲಿ ಶನಿವಾರ 'ಭಗವದ್ಗೀತೆಯ ಸಾರ' ಕುರಿತಂತೆ ಇಂಗ್ಲಿಷ್‌ನಲ್ಲಿ ಅವರು ಪ್ರವಚನ ನೀಡಿದರು.

ಭಗವದ್ಗೀತೆಯು ನಮಗೆ ಸಂಸಾರ ಎಂದರೇನು? ಹೇಗಿರಬೇಕೆಂಬುದನ್ನು ತಿಳಿಸುತ್ತದೆ. ವೇದಾಂತ ಒಂದು ವಿಷಯವಾಗಿದ್ದು, ಭಗವದ್ಗೀತೆಯು ಅದರಲ್ಲಿನ ಒಂದು ಅಧ್ಯಾಯವಾಗಿದೆ. ವೇದಾಂತ ಒಂದು ಶಾಸ್ತ್ರವಾಗಿದ್ದು, ಅದರಲ್ಲಿ ಮೂರು ಪ್ರಮುಖವಾದ ಅಧ್ಯಾಯಗಳಿದ್ದು, ಅವುಗಳೆಂದರೆ ಉಪನಿಷತ್ತುಗಳು, ಬ್ರಹ್ಮಸೂತ್ರ ಮತ್ತು ಭಗವದ್ಗೀತೆಯಾಗಿದೆ ಎಂದರು.

ಭಗವದ್ಗೀತೆಯು ಮಹಾಭಾರತದ ಭಾಗವಾಗಿದೆ ಎಂಬ ಕಲ್ಪನೆ ನಮ್ಮೆಲ್ಲರಿಗೂ ತಿಳಿದಿದೆ. ವಾಸ್ತವವಾಗಿ ಗೀತೆಯಲ್ಲಿ ಕೃಷ್ಣನು ತನ್ನ ಧರ್ಮೋಪದೇಶವನ್ನು ಎರಡನೇ ಅಧ್ಯಾಯದ 11ನೇ ಶ್ಲೋಕದಿಂದ ಪ್ರಾರಂಭಿಸುತ್ತಾನೆ. ಮೊದಲ ಪೂರ್ಣ ಅಧ್ಯಾಯದಲ್ಲಿ ಕೃಷ್ಣನು ಮಾತನಾಡುವುದೇ ಇಲ್ಲ. ಏಕೆಂದು ನಮಗೆ ಅಚ್ಚರಿಯಾಗುತ್ತದೆ. ಭಗವದ್ಗೀತೆಯು ಮೊದಲಿಗೆ ನಮ್ಮ ಸರಿಯಾದ ಸ್ಥಿತಿಗತಿ ಹೇಗಿರಬೇಕೆಂಬುದನ್ನು ವಿವರಿಸುತ್ತದೆ. ನಿಮ್ಮ ಜೀವನಶೈಲಿ ಹೇಗಿರಬೇಕೆಂಬುದನ್ನು ಬೋಧಿಸುತ್ತದೆ ಎಂದು ವಿವರಿಸಿದರು.

ಪ್ರಸ್ತುತದ ದಿನಗಳಲ್ಲಿ ಜನರು ಪರಸ್ಪರ ಮಾತನಾಡುವಷ್ಟು ಸಮಯವಿಲ್ಲದಂತೆ ಇದ್ದಾರೆ. ವಿಚ್ಛೇದನ ಪ್ರಕರಣಗಳು ಹೆಚ್ಚಾಗುತ್ತಿವೆ. ಇದು ಆತಂಕಕಾರಿಯಾಗಿದ್ದು, ಕೊನೆ ಪಕ್ಷ ನಮ್ಮ ದೇಶದಲ್ಲಿಯಾದರೂ ಈ ಪರಿಸ್ಥಿತಿ ನಿರ್ಮಾಣವಾಗಬಾರದಿತ್ತು. ವಿದ್ಯಾವಂತರು ಮತ್ತು ಬುದ್ಧಿವಂತರೂ ಆಗಿ ಇಂತಹ ಪರಿಸ್ಥಿತಿಯತ್ತ ಸಾಗುತ್ತಿರುವುದು ದುರಂತವೇ ಸರಿ. ಪರಸ್ಪರ ಘರ್ಷಣೆ ಕಾರಣ ಸಂಬಂಧದ ನಡುವೆ ಬಿರುಕು ಉಂಟಾಗುತ್ತಿದೆ ಎಂದರು.

ಬಾಂಧವ್ಯ, ದುಃಖ, ಖಿನ್ನತೆ, ರಾಗ, ಶೋಕ ಹಾಗೂ ಮೋಹ ನಮ್ಮಲ್ಲಿನ ಹೆಚ್ಚಿನವರಿಗೆ ಗೊತ್ತಿದೆ. ರಾಗವು (ಬಾಂಧವ್ಯ) ಶೋಕಕ್ಕೆ ಕಾರಣವಾಗುತ್ತದೆ. ಶೋಕವು ಮೋಹ ಮತ್ತು ಭ್ರಮೆಗೆ ಕಾರಣವಾಗುತ್ತದೆ. ಭ್ರಮೆಗೆ ಸಿಲುಕಿದರೆ ನಿಮ್ಮ ಸಂಪೂರ್ಣ ಆಲೋಚನೆಯ ಕ್ರಮವನ್ನು ಕಳೆದುಕೊಳ್ಳಬೇಕಾಗುತ್ತದೆ. ಇದು ಪ್ರಸ್ತುತದ ಬಹುತೇಕರ ಸ್ಥಿತಿಯಾಗಿದೆ. ಅಂತೆಯೇ ಅರ್ಜುನ ಸಹ ಇಂತಹ ಸ್ಥಿತಿಗೆ ಒಳಗಾಗಿದ್ದ ಎಂದು ಹೇಳಿದರು.

ನನ್ನ ಅತ್ಯಾವಶ್ಯಕ ಧರ್ಮ ಯಾವುದು ಎಂಬುದನ್ನು ಭಗವದ್ಗೀತೆ ತಿಳಿಸಿಕೊಡುತ್ತದೆ. ಆ ಜ್ಞಾನಕ್ಕೆ ಬ್ರಹ್ಮವಿದ್ಯ ಎನ್ನುತ್ತಾರೆ. ಕರ್ಮ, ಭಕ್ತಿ ಮತ್ತು ಜ್ಞಾನದ ಪಾತ್ರವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಅದಕ್ಕೆ ಭಗವದ್ಗೀತೆಯಲ್ಲಿ ಉತ್ತರ ದೊರೆಯಲಿದೆ. ನಾಳೆ (ಅ.27 ಸಂಜೆ 6.45) ಯೋಗ ಶಾಸ್ತ್ರದ ಬಗ್ಗೆ ಮಾತನಾಡಲಿದ್ದೇನೆ ಎಂದು ಮಾಹಿತಿ ನೀಡಿದರು. ಬಿವಿಬಿ ಮೈಸೂರು ಕೇಂದ್ರದ ಉಪಾಧ್ಯಕ್ಷ ಸಿ.ನಾಗಣ್ಣ, ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಖಜಾಂಚಿ ಎ.ಟಿ.ಭಾಷ್ಯಂ, ಆಡಳಿತ ಮಂಡಳಿ ಸದಸ್ಯ ಡಾ.ಗಂಗಾಧರ್ ಮತ್ತಿತರರು ಹಾಜರಿದ್ದರು.

ನಾಳೆ ಸಿಎಂ ಸಿದ್ದರಾಮಯ್ಯ ಹಾಸನಾಂಬೆ ದರ್ಶನ



ಮೈಸೂರು, ಅ.26(ಎಸ್‌ಬಿಡಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ(ಅ.28) ಶ್ರೀ ಹಾಸನಾಂಬೆ ದರ್ಶನ ಪಡೆಯಲಿದ್ದಾರೆ.

ಅಂದು ಸಂಜೆ 4ಕ್ಕೆ ಹೆಲಿಕಾಪ್ಟರ್ ಮೂಲಕ ಹಾಸನಕ್ಕೆ ತೆರಳಿ, ಶ್ರೀ ಹಾಸನಾಂಬ ದೇವಿಯ ದರ್ಶನ ಪಡೆದ ನಂತರ ಸಂಜೆ 5ಕ್ಕೆ ಹೆಲಿಕಾಪ್ಟರ್ ಇಲ್ಲವೇ ರಸ್ತೆ ಮಾರ್ಗವಾಗಿ ಬೆಂಗಳೂರಿಗೆ ವಾಪಸ್ಸಾಗಲಿದ್ದಾರೆ ಎಂದು ಅವರ ಪ್ರವಾಸ ಕಾರ್ಯಕ್ರಮದ ಪಟ್ಟಿಯಲ್ಲಿ ತಿಳಿಸಲಾಗಿದೆ.

ಇಂದಿನಿಂದ ಮೂರು ದಿನ ಕೆಆರ್‌ಎಸ್ ರಸ್ತೆಯಲ್ಲಿ ವಾಹನ ಸಂಚಾರ ನಿಷೇಧ

ಮೈಸೂರು, ಅ.26(ಎಸ್‌ಪಿಎನ್)– ನಗರದ ಯಾದವಗಿರಿಯ ಜ್ಯುವೆಲ್ ಫಿಲ್ಟರ್ ಆವರಣದಲ್ಲಿ 219 ಎಂಎಂ ವ್ಯಾಸದ ನೀರು ಸರಬರಾಜು ಕೊಳವೆ ಮಾರ್ಗ ಹಾಗೂ ನಿಯಂತ್ರಣ ಕವಾಟಗಳ ಅಳವಡಿಕೆ ಹಾಗೂ ಎಲ್‌ಎಲ್‌ಆರ್ ಮತ್ತು ಹೆಚ್‌ಎಲ್‌ಆರ್ ಮೂಲದಿಂದ ರೈಲ್ವೆ ಕೊಳವೆ ಮಾರ್ಗಕ್ಕೆ ಸಂಪರ್ಕ ಕಲ್ಪಿಸುವ ಕಾಮಗಾರಿಯನ್ನು ಮೈಸೂರು ನಗರಪಾಲಿಕೆ ಕೈಗೆತ್ತಿಗೊಂಡಿದೆ.

ಹಾಗಾಗಿ ಈ ಮಾರ್ಗದಲ್ಲಿ ಅ.27ರಿಂದ ಅ.29ರವರೆಗೆ ತಾತ್ಕಾಲಿಕವಾಗಿ ವಾಹನ ಸಂಚಾರ ಸ್ಥಗಿತಗೊಳಿಸಲಾಗಿದ್ದು, ವಾಹನ ಸವಾರರು ಸದರಿ ದಿನಾಂಕದಂದು ಬದಲಿ ರಸ್ತೆಯಲ್ಲಿ ಸಂಚರಿಸಬೇಕು.

ಬದಲಿ ಮಾರ್ಗ: ಕೆಆರ್‌ಎಸ್ ಮುಖ್ಯರಸ್ತೆಯ ಬಿ.ಸಿ.ಲಿಂಗಯ್ಯ ವೃತ್ತದ ಕಡೆಯಿಂದ ಬರುವ ವಾಹನಗಳು ತರಾಸು ವೃತ್ತದಲ್ಲಿ ಎಡ ತಿರುವು ತೆಗೆದುಕೊಂಡು ಬಂಬೂಬಜಾರ್ ಕಡೆಯಿಂದ ಸಂಚರಿಸುವುದು. ದಾಸಪ್ಪ ವೃತ್ತದ ಕಡೆಯಿಂದ ಬರುವ ವಾಹನಗಳು ಕೆ.ಎಂ.ಕಾರ್ಯಪ್ಪ ವೃತ್ತದ ಕಡೆಗೆ ಚಲಿಸಿ, ವಿನೋಬಾ ರಸ್ತೆ ಹಾಗೂ ವಾಲ್ಮೀಕಿ ರಸ್ತೆಯ ಮೂಲಕ ಸಂಚರಿಸುವಂತೆ ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಸಾದ್ ಉರ್ ರೆಹಮಾನ್ ಷರೀಫ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

7 BHK (G+2)
HOUSE FOR RENT
Suitable for :
PLAYHOME,
DIAGNOSTICS,
PG.
Bogadi 2nd Stage,
opp. Nirmithi Kendra, MYSORE
Ph : 9845377292

Deepavali Offer
UPTO 40% OFF
T&C Apply.
BED SHEETS
for Comfort Sleep
since 1879 Bombay Dyeing
Authorised Dealer
Vastra Vaibhav
☎ : 0821-4288614
Shiiv Market, Shivarampet
Beside Rajkamal Theatre, Mysuru

ಮೈಸೂರು ಮಿತ್ರ 45
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಆನ್‌ಲೈನ್‌ನಲ್ಲಿ ಬ್ಯಾಂಕ್ ಉದ್ಯೋಗಿ ಖಾತೆಗೆ ಕತ್ತರಿ!

ಕ್ರೆಡಿಟ್ ಕಾರ್ಡ್ ನೆಪದಲ್ಲಿ 10.66 ಲಕ್ಷ ವಂಚನೆ

ಮೈಸೂರು, ಅ.26(ಎಸ್‌ಬಿಡಿ)– ಬ್ಯಾಂಕ್ ಉದ್ಯೋಗಿಯನ್ನೇ ವಂಚಿಸಿ ಆನ್‌ಲೈನ್ ಮೂಲಕ 10.66 ಲಕ್ಷ ರೂ. ಲಪಟಾಯಿಸಿರುವ ಪ್ರಕರಣ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

ಮೈಸೂರಿನ ಕಲ್ಯಾಣಗಿರಿ ನಿವಾಸಿಯಾಗಿರುವ ಬ್ಯಾಂಕ್ ಉದ್ಯೋಗಿಯೊಬ್ಬರು ತಮ್ಮ ಖಾತೆಯಿಂದ ಮೂರು ಹಂತಗಳಲ್ಲಿ ಒಟ್ಟು 10,66,817 ರೂಗಳನ್ನು ಮೋಸದಿಂದ ವರ್ಗಾವಣೆ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಕ್ರೆಡಿಟ್ ಕಾರ್ಡ್ ನೆಪ: ಈ ಬ್ಯಾಂಕ್ ಉದ್ಯೋಗಿಗೆ ಗುರುವಾರ ಸಂಜೆ 4.30ರ ಸಮಯದಲ್ಲಿ ಕ್ರೆಡಿಟ್ ಕಾರ್ಡ್ ಸಂಬಂಧ ವಾಟ್ಸಾಪ್ ಸಂದೇಶವೊಂದು ಬಂದಿದೆ. ಅದರ ವ್ಯಕ್ತಿಯೊಬ್ಬ ಕರೆ ಮಾಡಿ, ನಿಮಗೆ ಕ್ರೆಡಿಟ್ ಕಾರ್ಡ್ ಬೇಕಾ ಎಂದು ಕೇಳಿದ್ದಾನೆ. ಅದಕ್ಕೆ ಇವರು ನನ್ನ ಬಳಿ ಕ್ರೆಡಿಟ್ ಕಾರ್ಡ್ ಇದೆ. ಹಾಗಾಗಿ ನನಗೆ ಮತ್ತೊಂದು ಕಾರ್ಡ್ ಅವಶ್ಯಕತೆ ಇಲ್ಲ ಎಂದಿದ್ದಾರೆ. ಸರಿ ಹಾಗಾದರೆ ನಾವೊಂದು ಲಿಂಕ್ ಕಳಿಸುತ್ತೇವೆ, ಆ ಮೂಲಕ ಕ್ರೆಡಿಟ್ ಕಾರ್ಡ್ ಪ್ರಕ್ರಿಯೆಯನ್ನು ಕ್ಯಾನ್ಸಲ್ ಮಾಡಿಕೊಳ್ಳಿ ಎಂದು ಹೇಳಿ, ಕರೆ ಕಟ್ ಮಾಡಿದ್ದಾನೆ.

ಕರೆ ಮಾಡಿದ್ದವನು ಕ್ರೆಡಿಟ್ ಕಾರ್ಡ್ ಪಡೆಯುವಂತೆ ಯಾವುದೇ ರೀತಿ ಒತ್ತಾಯಿಸದ ಕಾರಣ ಆತನ ಬಗ್ಗೆ ಅನುಮಾನ ಮೂಡಿಲ್ಲ. ಹಾಗಾಗಿ ಆತ ಕಳುಹಿಸಿದ ಲಿಂಕ್ ಮೇಲೆ ಕ್ಲಿಕ್ ಮಾಡಿದಾಗ ಆಧಾರ್ ಹಾಗೂ ಅಕೌಂಟ್ ನಂಬರ್ ದಾಖಲಿಸುವಂತೆ ಕೇಳಲಾಗಿದೆ. ತಕ್ಷಣವೇ ಜಾಗೃತರಾದ ಬ್ಯಾಂಕ್ ಉದ್ಯೋಗಿ, ಯಾವುದೇ ಮಾಹಿತಿ ದಾಖಲಿಸದೆ ಆ ಪೇಜ್‌ನಿಂದ ಹೊರ ಬಂದಿದ್ದಾರೆ. ಅದಾಗಿ 2–3 ಗಂಟೆ ಬಳಿಕ ಅವರ ಒಂದು ಬ್ಯಾಂಕ್ ಖಾತೆಯಿಂದ 2.29 ಲಕ್ಷ ರೂ. ಹಾಗೂ ಮತ್ತೊಂದು ಖಾತೆಯಿಂದ 7.63 ಲಕ್ಷ ರೂ. ಡೆಬಿಟ್ ಆಗಿದೆ. ಅಲ್ಲದೆ ಮರುದಿನ ಶುಕ್ರವಾರ ಬೆಳಗ್ಗೆ ಅವರ ಕ್ರೆಡಿಟ್ ಕಾರ್ಡ್‌ನಿಂದ 74,717 ರೂ. ಕಡಿತಗೊಂಡಿದೆ.

ಎಷ್ಟೇ ಜಾಗೃತವಾಗಿದ್ದರೂ ಸೈಬರ್ ವಂಚಕರು ಕುಳಿತಲ್ಲೇ ಕೋಟ್ಯಾಂತರ ರೂ. ಹಣವನ್ನು ದೋಚುತ್ತಿದ್ದಾರೆ. ಊಹಿಸಲಸಾಧ್ಯವಾದ ರೀತಿಯಲ್ಲಿ ಜನರನ್ನು ವಂಚಿಸುತ್ತಿದ್ದಾರೆ. ಬ್ಯಾಂಕ್ ಖಾತೆಗಳಲ್ಲಿ ಹಣ ಬಿಡುವುದಕ್ಕೂ ಹೆದರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸೈಬರ್ ವಂಚಕರನ್ನು ಹೆಡೆಮುರಿಕಟ್ಟುವುದು ಪೊಲೀಸರಿಗೆ ಸವಾಲಾಗಿ ಪರಿಣಮಿಸಿದೆ. ಈ ಬಗ್ಗೆ ಪ್ರತಿಯೊಬ್ಬರೂ ಎಚ್ಚರಿಕೆ ವಹಿಸುವುದು ಅನಿವಾರ್ಯವಾಗಿದೆ.

ದಸರಾ ವಸ್ತುಪ್ರದರ್ಶನದಲ್ಲಿ ಮಹಿಳಾ ಆಯೋಗದ ಮಳಿಗೆ ಉದ್ಘಾಟನೆ



ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಮಹಿಳಾ ಆಯೋಗದ ಮಳಿಗೆಯನ್ನು ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಉದ್ಘಾಟಿಸಿದರು. ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಮತ್ತಿತರರಿದ್ದರು.

ಮೈಸೂರು, ಅ.26(ಎಂಕೆ)– ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಮಹಿಳಾ ಆಯೋಗದ ಮಳಿಗೆಯನ್ನು ಶನಿವಾರ ಉದ್ಘಾಟಿಸಲಾಯಿತು.

ಟೇಪ್ ಕತ್ತರಿಸಿ, ದೀಪ ಬೆಳಗುವ ಮೂಲಕ ಮಳಿಗೆ ಉದ್ಘಾಟಿಸಿದ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಮಾತನಾಡಿ, ಮಹಿಳೆಯ ಸಬಲೀಕರಣ, ಸಾಧಕ ಮಹಿಳೆಯರ ಸಾಧನೆ ಅನಾವರಣ ಹಾಗೂ ಹೆಣ್ಣು ಸಮಾಜದ ಕಣ್ಣು ಎಂಬ ಸಂದೇಶದೊಂದಿಗೆ ಮಳಿಗೆ ನಿರ್ಮಿಸಲಾಗಿದೆ. ಮಳಿಗೆಯಲ್ಲಿ ಮಹಿಳಾ ಆಯೋಗದ ಸಹಾಯವಾಣಿ, ಇ–ಮೇಲ್ ಐಡಿ ಮತ್ತು ಆಯೋಗದ ವಿಳಾಸವನ್ನು ತಿಳಿಸಲಾಗಿದೆ ಎಂದರು.

ರಾಜ್ಯದ ಯಾವುದೇ ಇಲಾಖೆಯಲ್ಲೂ ಹೆಣ್ಣಿನ ಮೇಲೆ ಮಾನಸಿಕ ಹಾಗೂ ದೈಹಿಕ ಹಿಂಸೆ ನಡೆದರೂ ಅದನ್ನು ಪ್ರಶ್ನಿಸುವ ಹಾಗೂ ನೊಂದ ಹೆಣ್ಣು ಮಗುವಿಗೆ ನ್ಯಾಯ ದೊರಕಿಸಿಕೊಡುವ ಜವಾಬ್ದಾರಿ ಆಯೋಗಕ್ಕಿದೆ. ಶೇ.90 ರಷ್ಟು ಮಹಿಳೆಯರಿಗೆ ಮಹಿಳಾ ಆಯೋಗವೆಂಬುದು ಇದೇ ಎಂಬುದೇ ತಿಳಿದಿಲ್ಲ. ಹಾಗಾಗಿ ಈ ವರ್ಷ ವಸ್ತುಪ್ರದರ್ಶನದಲ್ಲಿ ಆಕರ್ಷಕ ಮಳಿಗೆ ನಿರ್ಮಿಸಲಾಗಿದೆ ಎಂದು ತಿಳಿಸಿದರು.

ಮಹಿಳಾ ಆಯೋಗದ ಮಾಹಿತಿ ಜೊತೆಗೆ ಸಾಧಕ ಮಹಿಳೆಯರ ಸಾಧನೆ ಹಾಗೂ ಹೆಣ್ಣು ಸಮಾಜದ ಪ್ರತಿಯೊಂದು ಹಂತದಲ್ಲಿಯೂ ಎದುರಿಸುವ ಸವಾಲು ಮತ್ತು ಸವಾಲುಗಳನ್ನು ಗೆದ್ದು ಹೊರಬರುವ ಸಾಹಸವನ್ನು ಚಿತ್ರಿಸಲಾಗಿದೆ. ವಸ್ತುಪ್ರದರ್ಶನಕ್ಕೆ ಭೇಟಿ ನೀಡುವ ಪ್ರತಿಯೊಬ್ಬ ಪ್ರವಾಸಿಗರು ಮಹಿಳಾ ಆಯೋಗದ ಮಳಿಗೆ ತಪ್ಪದೇ ಭೇಟಿ ನೀಡಿ ಎಂದು ಮನವಿ ಮಾಡಿದರು. ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಅಯೂಬ್ ಖಾನ್, ಮಹಿಳಾ ಮುಖಂಡರು ಉಪಸ್ಥಿತರಿದ್ದರು.

ಲಾರಿ ಡಿಕ್ಕಿ; ಅಪರಿಚಿತ ಸಾವು



ಮೈಸೂರು, ಅ.26(ಎಸ್‌ಬಿಡಿ)– ಲಾರಿ ಡಿಕ್ಕಿ ಹೊಡೆದ ಪರಿಣಾಮ ರಸ್ತೆ ದಾಟುತ್ತಿದ್ದ ಅಪರಿಚಿತ ಸಾವನ್ನಪ್ಪಿರುವ ಘಟನೆ ಮೈಸೂರು–ಹುಣಸೂರು ಹೆದ್ದಾರಿಯಲ್ಲಿ ಶನಿವಾರ ಮಧ್ಯಾಹ್ನ ನಡೆದಿದೆ.

ಹೂಟಗಳ್ಳಿ ಸಮೀಪದ ಡಾಲ್ಫಿನ್ ಬೇಕರಿ ಬಳಿ ಶನಿವಾರ ಮಧ್ಯಾಹ್ನ 2.30ರ ಸಮಯದಲ್ಲಿ ಸುಮಾರು 50 ವರ್ಷದ ವ್ಯಕ್ತಿ ರಸ್ತೆ ದಾಟುವಾಗ ಹಿನಕಲ್ ಫ್ಲೈ ಓವರ್ ಕಡೆಯಿಂದ ವೇಗವಾಗಿ ಬಂದ ಲಾರಿ(ಕೆಎ–13, ಸಿ–7049) ಡಿಕ್ಕಿ ಹೊಡೆದಿದೆ. ಪರಿಣಾಮ ತಲೆಗೆ ಬಲವಾದ ಪೆಟ್ಟು ಬಿದ್ದು ಪಾದಚಾರಿ ಸ್ಥಳದಲ್ಲೇ ಮೃತಪಟ್ಟಿದ್ದಾಗಿ ಪೊಲೀಸರು ತಿಳಿಸಿದ್ದಾರೆ.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಮೈಸೂರಿನ ವಿವಿ ಪುರಂ ಸಂಚಾರ ಠಾಣೆ ಪೊಲೀಸರು, ಲಾರಿ ಚಾಲಕನನ್ನು ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಂಡಿದ್ದಾರೆ.

ವಾರಸುದಾರರು ಸಂಪರ್ಕಿಸಿ: ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿ ಸುಮಾರು 5.5 ಅಡಿ ಎತ್ತರವಿದ್ದು, ಎಣ್ಣೆಗೆಂಪು ಬಣ್ಣ ಹಾಗೂ ಸಾಧಾರಣ ಮೈಕಟ್ಟು ಹೊಂದಿದ್ದಾರೆ. ಸಿಮೆಂಟ್ ಬಣ್ಣದ ಶರ್ಟ್ ಹಾಗೂ ಬೂದು ಬಣ್ಣದ ಜೀನ್ಸ್ ಪ್ಯಾಂಟ್ ಧರಿಸಿದ್ದಾರೆ. ಅವರ ವಾರಸುದಾರರಿದ್ದಲ್ಲಿ ವಿವಿ ಪುರಂ ಸಂಚಾರ ಠಾಣೆ(0821–2418529, 9480802262) ಅಥವಾ ಪೊಲೀಸ್ ಕಂಟ್ರೋಲ್ ರೂಂ (2418339/340) ಸಂಪರ್ಕಿಸುವಂತೆ ಇನ್ಸ್‌ಪೆಕ್ಟರ್ ಎಂ.ಆರ್.ಲವ ಮನವಿ ಮಾಡಿದ್ದಾರೆ.

ಸೌರಶಕ್ತಿ ವಿದ್ಯುತ್ ಬಳಕೆಯಿಂದ ಆರ್ಥಿಕ ಸ್ವಾವಲಂಬನೆ ಸಾಧ್ಯ

ತಜ್ಞರ ಅಭಿಮತ



ಲೀ ರುಚಿ ಹೋಟೆಲ್‌ನಲ್ಲಿ ಕಿರ್ಲೋಸ್ಕರ್ ಸೋಲಾರ್‌ನ ಮೈಸೂರು ಸಮ್ಮೇಳನ ನಡೆಯಿತು

ಮೈಸೂರು, ಅ.26(ಎಂಕೆ)– ಸೌರಶಕ್ತಿ ವಿದ್ಯುತ್ ಬಳಕೆಯಿಂದ ಹಣ ಉಳಿತಾಯದ ಜೊತೆಗೆ ಆರ್ಥಿಕ ಸ್ವಾವಲಂಬನೆ ಸಾಧ್ಯ ಎಂದು ಕಿರ್ಲೋಸ್ಕರ್ ಸೋಲಾರ್‌ನ ಇನ್ವರ್ಟರ್ಸ್ ಅಂಡ್ ಸ್ಮಾಲ್ ಪ್ರಾಜೆಕ್ಟ್ ನ್ಯಾಷನಲ್ ಹೆಡ್ ಸುರೇಶ್ ಸಿಂಪ್ಸನ್ ತಿಳಿಸಿದರು.

ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಲೀ ರುಚಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ಕಿರ್ಲೋಸ್ಕರ್ ಸೋಲಾರ್‌ನ ಮೈಸೂರು ಸಮ್ಮೇಳನದಲ್ಲಿ ಮಾತನಾಡಿದ ಅವರು, ಸೋಲಾರ್‌ಗೆ ಹೂಡಿಕೆ ಮಾಡಿದ ಬಂಡವಾಳ ವಾಪಸ್ ಬರುವುದರಲ್ಲಿ ಯಾವುದೇ ಅನುಮಾನ ಬೇಡ. ಇದಕ್ಕೆ ಪೂರಕವಾಗಿರುವ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಸೂರ್ಯ ಘರ್ ಯೋಜನೆಯನ್ನು ಸದ್ಬಳಕೆ ಮಾಡಿಕೊಳ್ಳಿ ಎಂದು ಸಲಹೆ ನೀಡಿದರು.

ಸೌರ ಮೇಲ್ಛಾವಣಿ(ಸೋಲಾರ್ ಪ್ಯಾನಲ್) ಅಳವಡಿಸಿ ಸಾಕಷ್ಟು ಲಾಭ ಪಡೆಯಬಹುದಾಗಿದೆ. ಒಂದು ಯೂನಿಟ್ ವಿದ್ಯುತ್ ಬಳಕೆಗೆ(ಖಾಸಗಿ) ಸರಾಸರಿ 10 ರೂ. ಇದೆ. 200 ಯೂನಿಟ್‌ಗೆ 2000 ರೂ. ಆಗಲಿದೆ. ಅದೇ ಜಾಗದಲ್ಲಿ ಸೋಲಾರ್ ಪ್ಯಾನಲ್ ಬಳಕೆ ಮಾಡಿದರೆ, ವಿದ್ಯುತ್ ಉಚಿತವಾಗುವ ಜೊತೆಗೆ ಹೂಡಿಕೆ ಮಾಡಿದ ಬಂಡವಾಳವೂ ವಾಪಸ್ ಬರಲಿದೆ ಎಂದು ತಿಳಿಸಿದರು.

ಕಿರ್ಲೋಸ್ಕರ್ ಸೋಲಾರ್ ಉತ್ಪನ್ನಗಳ ಡಿಸ್ಟ್ರಿಬ್ಯೂಟರ್ ಶ್ರೀನಿವಾಸ್ ಮಾತನಾಡಿ, ಕಿರ್ಲೋಸ್ಕರ್ ಸೋಲಾರ್ ಪ್ಯಾನಲ್‌ಗೆ 25 ವರ್ಷಗಳ ವಾರಂಟಿ ನೀಡಲಿದ್ದು, ಸೋಲಾರ್ ಪ್ಯಾನಲ್‌ಗೆ ಮಾಡಲಾದ ಖರ್ಚನ್ನು ಎರಡ್ಮೂರು ವರ್ಷದಲ್ಲೇ ವಾಪಸ್ ಪಡೆಯಬಹುದು. ಹಾಗೆಯೇ ಸೋಲಾರ್ ಉತ್ಪನ್ನಗಳ ಬಳಕೆಯಿಂದ ಪರಿಸರ ಮಾಲಿನ್ಯ ಕಡಿಮೆಯಾಗಲಿದೆ. ಸೌರ ವಿದ್ಯುತ್ ಅನ್ನು ಸರ್ಕಾರಕ್ಕೆ ಮಾರಾಟ ಮಾಡಿ ಹಣವನ್ನೂ ಗಳಿಸಬಹುದಾಗಿದೆ ಎಂದು ತಿಳಿಹೇಳಿದರು.

ಇದೇ ವೇಳೆ ಕಿರ್ಲೋಸ್ಕರ್ ಸೋಲಾರ್ ಉತ್ಪನ್ನಗಳ ಬಳಕೆದಾರರ ಅಭಿಪ್ರಾಯಗಳನ್ನು ಸಂಗ್ರಹಿಸಿ, ಮಾರುಕಟ್ಟೆಯಲ್ಲಿರುವ ನ್ಯೂನತೆಗಳ ಕುರಿತು ಮಾಹಿತಿ ಪಡೆಯಲಾಯಿತು. ವಿದ್ಯುತ್ ಗುತ್ತಿಗೆದಾರರ ಅಶೋಕ್, ಆಡಿಟರ್ ಶ್ರೀನಿವಾಸ್, ಹೋಟೆಲ್ ಉದ್ಯಮಿ ಅಶೋಕ್ ಮತ್ತಿತರರಿದ್ದರು.

ನೈಋತ್ಯ ರೈಲ್ವೆ

ದೀಪಾವಳಿ ಮತ್ತು ಛತ್ ಪೂಜಾ ವಿಶೇಷ ರೈಲು ಸೇವೆಗಳು

ದೀಪಾವಳಿ ಮತ್ತು ಛತ್ ಹಬ್ಬದ ಅಂಗವಾಗಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ತೆರವುಗೊಳಿಸಲು ಭಾರತೀಯ ರೈಲ್ವೆ ಈ ಕೆಳಗಿನ ವಿಶೇಷ ಎಕ್ಸ್ ಪ್ರೆಸ್ ರೈಲುಗಳನ್ನು ಓಡಿಸಲು ಸೂಚಿಸಿದೆ. ಪ್ರಯಾಣಿಕರು ಹೆಚ್ಚಿನ ಮಾಹಿತಿಗಾಗಿ **https://enquiry.indianrail.gov.in** ಅಧಿಕೃತ ವೆಬ್‌ಸೈಟ್ ಭೇಟಿ ನೀಡುವ ಮೂಲಕ ಅಥವಾ ಸಹಾಯವಾಣಿ ಸಂಖ್ಯೆ 139 ಗೆ ಕರೆ ಮಾಡಿ ಮಾಹಿತಿ ಪಡೆದುಕೊಳ್ಳಬಹುದು.

ಕ್ರಸಂ.	ರೈಲು ಸಂಖ್ಯೆ	ಮೂಲ ನಿಲ್ದಾಣ	ಗಮ್ಯಸ್ಥಾನ	ಸೇವೆಯ ದಿನಗಳು	ಪ್ರಯಾಣದ ದಿನಾಂಕ
1	06547	ಯಶವಂತಪುರ	ಬೆಳಗಾವಿ	ಬುಧವಾರ	30.10.2024
2	06548	ಬೆಳಗಾವಿ	ಯಶವಂತಪುರ	ಗುರುವಾರ	31.10.2024
3	06549	ಯಶವಂತಪುರ	ಬೆಳಗಾವಿ	ಶುಕ್ರವಾರ	01.11.2024
4	06550	ಬೆಳಗಾವಿ	ಯಶವಂತಪುರ	ಭಾನುವಾರ	03.11.2024
5	06567	ಮೈಸೂರು	ವಿಜಯಪುರ	ಬುಧವಾರ & ಶನಿವಾರ	30.10.2024 & 02.11.2024
6	06568	ವಿಜಯಪುರ	ಮೈಸೂರು	ಗುರುವಾರ & ಭಾನುವಾರ	31.10.2024 & 03.11.2024
7	07339	ಎಸ್‌ಎಸ್‌ಎಸ್ ಹುಬ್ಬಳ್ಳಿ	ಕೆಎಸ್‌ಆರ್ ಬೆಂಗಳೂರು	ಪ್ರತಿದಿನ	01.04.2024 to 31.12.2024
8	07340	ಕೆಎಸ್‌ಆರ್ ಬೆಂಗಳೂರು	ಎಸ್‌ಎಸ್‌ಎಸ್ ಹುಬ್ಬಳ್ಳಿ	ಪ್ರತಿದಿನ	02.04.2024 to 01.01.2025
9	06545	ಯಶವಂತಪುರ	ವಿಜಯಪುರ	ಪ್ರತಿದಿನ	01.04.2024 to 31.12.2024
10	06546	ವಿಜಯಪುರ	ಯಶವಂತಪುರ	ಪ್ರತಿದಿನ	01.04.2024 to 01.01.2025
11	07329	ಎಸ್‌ಎಸ್‌ಎಸ್ ಹುಬ್ಬಳ್ಳಿ	ವಿಜಯಪುರ	ಪ್ರತಿದಿನ	01.04.2024 to 31.03.2025
12	07330	ವಿಜಯಪುರ	ಎಸ್‌ಎಸ್‌ಎಸ್ ಹುಬ್ಬಳ್ಳಿ	ಪ್ರತಿದಿನ	02.04.2024 to 31.03.2025
13	06919	ಎಸ್‌ಎಸ್‌ಎಸ್ ಹುಬ್ಬಳ್ಳಿ	ವಿಜಯಪುರ	ಪ್ರತಿದಿನ	01.04.2024 to 31.03.2025
14	06220	ವಿಜಯಪುರ	ಎಸ್‌ಎಸ್‌ಎಸ್ ಹುಬ್ಬಳ್ಳಿ	ಪ್ರತಿದಿನ	01.04.2024 to 31.03.2025
15	06517	ಯಶವಂತಪುರ	ಹಿಂದೂಪುರ	ಪ್ರತಿದಿನ	01.04.2024 to 31.03.2025
16	06518	ಹಿಂದೂಪುರ	ಯಶವಂತಪುರ	ಪ್ರತಿದಿನ	01.04.2024 to 31.03.2025
17	07377	ವಿಜಯಪುರ	ಮಂಗಳೂರು ಸೆಂಟ್ರಲ್	ಪ್ರತಿದಿನ	01.04.2024 to 31.12.2024
18	07378	ಮಂಗಳೂರು ಸೆಂಟ್ರಲ್	ವಿಜಯಪುರ	ಪ್ರತಿದಿನ	02.04.2024 to 01.01.2025
19	07355	ಎಸ್‌ಎಸ್‌ಎಸ್ ಹುಬ್ಬಳ್ಳಿ	ರಾಮೇಶ್ವರಂ	ಶನಿವಾರ	06.04.2024 to 28.12.2024
20	07356	ರಾಮೇಶ್ವರಂ	ಎಸ್‌ಎಸ್‌ಎಸ್ ಹುಬ್ಬಳ್ಳಿ	ಭಾನುವಾರ	07.04.2024 to 29.12.2024
21	06509	ಕೆಎಸ್‌ಆರ್ ಬೆಂಗಳೂರು	ದಾನಾಪುರ	ಸೋಮವಾರ	01.04.2024 to 31.03.2025
22	06510	ದಾನಾಪುರ	ಕೆಎಸ್‌ಆರ್ ಬೆಂಗಳೂರು	ಬುಧವಾರ	03.04.2024 to 31.03.2025
23	07363	ಎಸ್‌ಎಸ್‌ಎಸ್ ಹುಬ್ಬಳ್ಳಿ	ಯೋಗ ನಗರಿ ರಿಷಿಕೇಶ್	ಸೋಮವಾರ	14.10.2024 to 04.11.2024
24	07364	ಯೋಗ ನಗರಿ ರಿಷಿಕೇಶ್	ಎಸ್‌ಎಸ್‌ಎಸ್ ಹುಬ್ಬಳ್ಳಿ	ಗುರುವಾರ	17.10.2024 to 07.11.2024
25	06587	ಎಸ್‌ಎಂವಿಟಿ ಬೆಂಗಳೂರು	ಭಗತ್ ಕಿ ಕೋಠಿ	ಶುಕ್ರವಾರ & ಬುಧವಾರ	25.10.2024 & 30.10.2024
26	06588	ಭಗತ್ ಕಿ ಕೋಠಿ	ಎಸ್‌ಎಂವಿಟಿ ಬೆಂಗಳೂರು	ಸೋಮವಾರ & ಶನಿವಾರ	28.10.2024 & 02.11.2024
27	07335	ಬೆಳಗಾವಿ	ಮಣುಗೂರು	ಭಾನುವಾರ, ಬುಧವಾರ, ಶನಿವಾರ & ಮಂಗಳವಾರ	16.10.2024 to 30.03.2025
28	07336	ಮಣುಗೂರು	ಬೆಳಗಾವಿ	ಸೋಮವಾರ, ಗುರುವಾರ, ಭಾನುವಾರ & ಬುಧವಾರ	17.10.2024 to 31.03.2025
29	06533	ಎಸ್‌ಎಂವಿಟಿ ಬೆಂಗಳೂರು	ಕಲಬುರಗಿ	ಬುಧವಾರ & ಶನಿವಾರ	30.10.2024 & 02.11.2024
30	06534	ಕಲಬುರಗಿ	ಎಸ್‌ಎಂವಿಟಿ ಬೆಂಗಳೂರು	ಗುರುವಾರ & ಭಾನುವಾರ	31.10.2024 & 03.11.2024
31	06565	ಯಶವಂತಪುರ	ಮಂಗಳೂರು ಜಂ.	ಬುಧವಾರ	30.10.2024
32	06566	ಮಂಗಳೂರು ಜಂ.	ಯಶವಂತಪುರ	ಗುರುವಾರ	31.10.2024
33	06597	ಎಸ್‌ಎಂವಿಟಿ ಬೆಂಗಳೂರು	ಕಾರವಾರ	ಬುಧವಾರ	30.10.2024
34	06598	ಕಾರವಾರ	ಎಸ್‌ಎಂವಿಟಿ ಬೆಂಗಳೂರು	ಗುರುವಾರ	31.10.2024
35	06209	ಕೆಎಸ್‌ಆರ್ ಬೆಂಗಳೂರು	ಡಾ. ಎಂ.ಜಿ.ಆರ್. ಚೆನ್ನೈ ಸೆಂಟ್ರಲ್	ಬುಧವಾರ & ಭಾನುವಾರ	30.10.2024 & 03.11.2024
36	06210	ಡಾ.ಎಂ.ಜಿ.ಆರ್. ಚೆನ್ನೈ ಸೆಂಟ್ರಲ್	ಕೆಎಸ್‌ಆರ್ ಬೆಂಗಳೂರು	ಬುಧವಾರ & ಭಾನುವಾರ	30.10.2024 & 03.11.2024
37	07311	ಎಸ್‌ಎಸ್‌ಎಸ್ ಹುಬ್ಬಳ್ಳಿ	ಮಂಗಳೂರು ಜಂ.	ಶನಿವಾರ	02.11.2024
38	07312	ಮಂಗಳೂರು ಜಂ.	ಎಸ್‌ಎಸ್‌ಎಸ್ ಹುಬ್ಬಳ್ಳಿ	ಭಾನುವಾರ	03.11.2024
39	06215	ಯಶವಂತಪುರ	ಕೊಟ್ಟಾಯಂ	ಮಂಗಳವಾರ	29.10.2024
40	06216	ಕೊಟ್ಟಾಯಂ	ಯಶವಂತಪುರ	ಬುಧವಾರ	30.10.2024
41	07313	ಎಸ್‌ಎಸ್‌ಎಸ್ ಹುಬ್ಬಳ್ಳಿ	ಕೊಲ್ಲಂ ಜಂ.	ಶನಿವಾರ	26.10.2024
42	07314	ಕೊಲ್ಲಂ ಜಂ.	ಎಸ್‌ಎಸ್‌ಎಸ್ ಹುಬ್ಬಳ್ಳಿ	ಭಾನುವಾರ	27.10.2024
43	06211	ಎಸ್‌ಎಂವಿಟಿ ಬೆಂಗಳೂರು	ಸಂತ್ರಾಗಾಚಿ ಜಂ.	ಶನಿವಾರ	26.10.2024
44	06212	ಸಂತ್ರಾಗಾಚಿ ಜಂ.	ಎಸ್‌ಎಂವಿಟಿ ಬೆಂಗಳೂರು	ಭಾನುವಾರ	27.10.2024
45	06217	ಎಸ್‌ಎಂವಿಟಿ ಬೆಂಗಳೂರು	ಕಲಬುರಗಿ	ಗುರುವಾರ	31.10.2024
46	06218	ಕಲಬುರಗಿ	ಎಸ್‌ಎಂವಿಟಿ ಬೆಂಗಳೂರು	ಶುಕ್ರವಾರ	01.11.2024
47	07323	ಎಸ್‌ಎಸ್‌ಎಸ್ ಹುಬ್ಬಳ್ಳಿ	ಯಶವಂತಪುರ	ಬುಧವಾರ	30.10.2024
48	07324	ಯಶವಂತಪುರ	ಕಲಬುರಗಿ	ಬುಧವಾರ	30.10.2024
49	07325	ಕಲಬುರಗಿ	ಎಸ್‌ಎಸ್‌ಎಸ್ ಹುಬ್ಬಳ್ಳಿ	ಗುರುವಾರ	31.10.2024
50	07373	ಎಸ್‌ಎಸ್‌ಎಸ್ ಹುಬ್ಬಳ್ಳಿ	ಮುಜಫರ್‌ಪುರ ಜಂ.	ಭಾನುವರ	27.10.2024
51	07374	ಮುಜಫರ್‌ಪುರ ಜಂ.	ಎಸ್‌ಎಸ್‌ಎಸ್ ಹುಬ್ಬಳ್ಳಿ	ಬುಧವಾರ	30.10.2024
52	07315	ಎಸ್‌ಎಸ್‌ಎಸ್ ಹುಬ್ಬಳ್ಳಿ	ಮುಜಫರ್‌ಪುರ ಜಂ.	ಸೋಮವಾರ	04.11.2024
53	07316	ಮುಜಫರ್‌ಪುರ ಜಂ.	ಎಸ್‌ಎಸ್‌ಎಸ್ ಹುಬ್ಬಳ್ಳಿ	ಶನಿವಾರ	09.11.2024
54	06235	ಎಸ್‌ಎಂವಿಟಿ ಬೆಂಗಳೂರು	ದಾನಾಪುರ	ಭಾನುವಾರ	03.11.2024
55	06236	ದಾನಾಪುರ	ಎಸ್‌ಎಂವಿಟಿ ಬೆಂಗಳೂರು	ಶನಿವಾರ	09.11.2024

PUB/524/AAS/PRB/SWR/2024-25

www.swr.indianrailways.gov.in | South Western Railway - SWR | sw_railways | SWRRLY | SWRRLY

ನಕ್ಕರೆ ಅದೇ ಸ್ವರ್ಗ

ಗಂಡ ಮತ್ತು ಹೆಂಡತಿ ಮಧ್ಯೆ ಜೋರು ಜಗಳ ಆಗುತ್ತೆ. ಗಂಡನಿಗೆ ಸಿಟ್ಟು ಬರುತ್ತೆ. ಅದಕ್ಕೆ ಹೆಂಡತಿ ಕೊಟ್ಟ ಉತ್ತರ ಬಲು ಮಜಾ..!

ಗಂಡ : ನಿನ್ನಂಥ 50 ಜನ ನಂಗೆ ಸಿಕ್ತಾರೆ

ಹೆಂಡತಿ ನಗುತ್ತಾ ಹೇಳ್ತಾಳೆ, "ನಿಮ್ಗೆ ಈಗ್ಲೂ ನನ್ನಂಥ ಹೆಂಡ್ತೀನೇ ಇಷ್ಟ ಅಂತ ಆಯ್ತು". ಹೆಂಡತಿ ಉತ್ತರ ಕೇಳಿ ಗಂಡನಿಗೆ ಏನು ಹೇಳಬೇಕೋ ತೋಚದಂಗಾಯ್ತು.

ಮೈಸೂರು ಮಿತ್ರ

ಭಾನುವಾರ, 27 ಅಕ್ಟೋಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಕೆಲವೊಮ್ಮೆ ನಾವು ಓದಲು ಮನಸ್ಸು ಮಾಡದ ಪುಟಗಳಲ್ಲೇ ನಾವು ಅರಸುವ ಉತ್ತರಗಳಿರುತ್ತವೆ. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕೂತು ಉಂಡರೆ ಕುಡಿಕೆ ಹೊನ್ನು ಸಾಲದು

ನಿಮ್ಮ ಪತ್ರಗಳು

ಜಾತಿ ಗಣತಿಗೆ ಖರ್ಚು ನಿಜಕ್ಕೂ ಆಘಾತಕಾರಿ

ಮಾನ್ಯರೆ,

ಜಾತಿ ಗಣತಿ ಈಗ ಸದ್ದು ಮಾಡುತ್ತಿದೆ. ಸಂಕಟ ಬಂದಾಗ ವೆಂಕಟರಮಣ ಎನ್ನುವಂತೆ ಈಗಿನ ಸರ್ಕಾರ ಆಗಾಗ ಜಾತಿ ಗಣತಿ ವರದಿ ಬಿಡುಗಡೆ ಮಾಡುವ ಸದ್ದು ಮಾಡುತ್ತಿರುತ್ತದೆ. 10 ವರ್ಷದ ಹಿಂದೆ ನಡೆದ ಜಾತಿ ಗಣತಿಯಲ್ಲಿ ಸರಿಯಾಗಿ ಗಣತಿ ಮಾಡಿಲ್ಲ, ವೈಜ್ಞಾನಿಕವಾಗಿ ಗಣತಿ ಮಾಡಿಲ್ಲ ಎಂದು ವಿರೋಧ ಪಕ್ಷಗಳು ಆಕ್ಷೇಪಿಸುತ್ತಿವೆ ಹಾಗೂ 10 ವರ್ಷದ ಹಿಂದಿನ ಸ್ಥಿತಿಗೂ ಈಗಿನ ಸ್ಥಿತಿಗೂ ಭಾರಿ ವ್ಯತ್ಯಾಸವಿದೆ ಎಂದು ಹೇಳುತ್ತಿವೆ. ಜೊತೆಗೆ ಒಕ್ಕಲಿಗ, ಲಿಂಗಾಯತ ಸಮುದಾಯ ಹಾಗೂ ಸಮುದಾಯಗಳ ಶಾಸಕರಿಂದಲೂ ತೀವ್ರ ವಿರೋಧ ವ್ಯಕ್ತವಾಗುತ್ತಿದೆ. ಜಾತಿ ಗಣತಿ ವರದಿಯನ್ನು ಸರ್ಕಾರ ತನ್ನ ಅನುಕೂಲಕ್ಕೆ ತಕ್ಕಂತೆ ತಯಾರಿಸಿದೆ ಎನ್ನುವುದು ಕೂಡ ವಿರೋಧ ಪಕ್ಷಗಳ ಆಕ್ಷೇಪ. ಕಾಂತರಾಜ್ ವರದಿಯ ಕಡತಗಳು ನಾಪತ್ತೆಯಾಗಿವೆ ಎನ್ನುವುದು ಹಾಗೂ ನಂತರ ನೇಮಕಗೊಂಡ ಜಯಪ್ರಕಾಶ್ ಹೆಗಡೆ ಆಯೋಗಕ್ಕೆ ಕಾಂತರಾಜ್ ಆಯೋಗದ ವರದಿಯನ್ನು ಬದಲಾವಣೆ ಮಾಡದಂತೆ ವರದಿ ನೀಡುವಂತೆ ಸರ್ಕಾರ ನಿರ್ದೇಶನ ನೀಡಿದ್ದು ಕೂಡ ಪತ್ರಿಕೆಯಲ್ಲಿ ವರದಿಯಾಗಿತ್ತು.

ಅಂದ ಹಾಗೆ ಈ ಜಾತಿ ಗಣತಿ ವರದಿ ತಯಾರಿಸಲು ಸರ್ಕಾರ 160 ಕೋಟಿ ಖರ್ಚು ಮಾಡಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ್ ಅವರು ಪದೇ ಪದೆ ಹೇಳುತ್ತಿದ್ದಾರೆ. ಇಂದಿನ ದಿನ ಪತ್ರಿಕೆಯಲ್ಲಿ ವರದಿಯಾಗಿರುವ ಪ್ರಕಾರ ಸರ್ಕಾರ ಖರ್ಚು ಮಾಡಿರುವುದು 169 ಕೋಟಿ ರೂಪಾಯಿಗಳಂತೆ!

ಈಗ ಕೇಂದ್ರ ಸರ್ಕಾರ ನಿನ್ನೆ 21ನೇ ರಾಷ್ಟ್ರೀಯ ಜಾನುವಾರು ಗಣತಿಯನ್ನು ಇಡೀ ದೇಶದ ಎಲ್ಲಾ 28 ರಾಜ್ಯಗಳು ಹಾಗೂ 8 ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆಸಲು ಚಾಲನೆ ನೀಡಿದ್ದು, ಕೇಂದ್ರ ಸರ್ಕಾರಕ್ಕೆ ಆಗುವ ಖರ್ಚು ಕೇವಲ 200 ಕೋಟಿ ಎಂದು ತಿಳಿಸಿದೆ. ಹಾಗಾದರೆ ನಮ್ಮ ರಾಜ್ಯ ಸರ್ಕಾರ 10 ವರ್ಷಗಳ ಹಿಂದೆಯೇ ನಡೆಸಿದ ಜಾತಿ ಗಣತಿಗೆ 169 ಕೋಟಿ ರೂ.ಗಳಷ್ಟು ರಷ್ಟು ಭಾರಿ ಖರ್ಚಾಗಿದೆ ಎಂದು ಸರ್ಕಾರ ತಿಳಿಸಿದೆ. ನಿಜಕ್ಕೂ ಇದು ಆಯೋಗಗಳ ಖರ್ಚು ವೆಚ್ಚದ ಬಗ್ಗೆ ವಿಮರ್ಶೆ ಮಾಡಬೇಕಾದ ಸಂಗತಿ. ಸರ್ಕಾರ ಇಂತಹ ಆಯೋಗಗಳ ಬಗ್ಗೆ ತೋರುವ ಧಾರಾಳತನಕ್ಕೆ ಉತ್ತಮ ನಿದರ್ಶನ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಕ್ರೀಡೆಗಳು ಹೊರೆಯಲ್ಲ: ಭಾರತದ ಪ್ರಾಬಲ್ಯದ ಕ್ರೀಡೆಗಳ ಕಡಿತ ಸಮಂಜಸವಲ್ಲ

ಮಾನ್ಯರೆ,

ಆರ್ಥಿಕ ಸಂಕಷ್ಟವನ್ನು ಕಡಿತಗೊಳಿಸುವ ನಿಟ್ಟಿನಲ್ಲಿ ಸ್ಕಾಟ್ಲೆಂಡ್ ಸರಕಾರ 2026ರ ಕಾಮನ್‌ವೆಲ್ತ್ ಕ್ರೀಡಾಕೂಟದಿಂದ ಸುಮಾರು 9 ಕ್ರೀಡೆಗಳನ್ನು ಹೊರಗಿಡಲು ನಿರ್ಧರಿಸಿದೆ. ಇದು ಜಾಗತಿಕ ಕ್ರೀಡಾರಂಗದಲ್ಲಿ ಮುಂಚೂಣಿಯತ್ತ ಸಾಗುತ್ತಿರುವ ಭಾರತಕ್ಕೆ ದೊಡ್ಡ ಹಿನ್ನಡೆಯಾಗಿದೆ. ಭಾರತ ಇದಕ್ಕೆ ಪ್ರಬಲ ವಿರೋಧವನ್ನು ಸೂಚಿಸಬೇಕಾದ ಅನಿವಾರ್ಯತೆಯಲ್ಲಿದೆ. ಜತೆಗೆ ಭಾರತ ಪ್ರತಿನಿಧಿಸುವ ಪ್ರಮುಖ ಕ್ರೀಡೆಗಳು ವೇಳಾಪಟ್ಟಿಯಲ್ಲಿರುವಂತೆ ನೋಡಿಕೊಳ್ಳುವುದು ಕ್ರೀಡಾಪಟುಗಳ ದೃಷ್ಟಿಯಿಂದ ಅತ್ಯಗತ್ಯ.

2022ರ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಹೋಲಿಸಿದರೆ 9 ಕ್ರೀಡೆಗಳನ್ನು ಕೈಬಿಡಲಾಗಿದೆ. ಅದರಲ್ಲೂ ಪ್ರಮುಖವಾಗಿ ಭಾರತ ಪ್ರಾಬಲ್ಯ ಸಾಧಿಸಿರುವ ಹಾಕಿ, ಶೂಟಿಂಗ್, ಕುಸ್ತಿ, ಟೇಬಲ್ ಟೆನ್ನಿಸ್‌ನಂತಹ ಪ್ರಮುಖ ಕ್ರೀಡೆಯನ್ನೇ ಹೊರಗಿಡುವ ಮೂಲಕ ಭಾರತದ ವಿರುದ್ಧ ಪರೋಕ್ಷವಾಗಿ ನಿರ್ಬಂಧ ಹೇರಿದಂತಾಗಿದೆ.

ಇದುವರೆಗೆ ಭಾರತ 203 ಚಿನ್ನ, 190 ಬೆಳ್ಳಿ, 171 ಕಂಚು ಸೇರಿದಂತೆ 564 ಪದಕಗಳನ್ನು ಗೆದ್ದಿದೆ. ಅದರಲ್ಲೂ ಕುಸ್ತಿ, ಶೂಟಿಂಗ್ ಮತ್ತು ಭಾರ ಎತ್ತುವ ಸ್ಪರ್ಧೆಗಳಲ್ಲಿ 100ಕ್ಕೂ ಅಧಿಕ ಪದಕಗಳನ್ನು ಗೆದ್ದಿದೆ. ಆದರೆ ಭಾರತ ಹೆಚ್ಚು ಪದಕಗಳನ್ನು ಗೆಲ್ಲಬಹುದಾದ ಕ್ರೀಡೆಗಳನ್ನೇ ಕೈ ಬಿಟ್ಟಿರುವುದು ದೇಶದ ಕ್ರೀಡಾ ವಲಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲುಬಹುದು. ಒಲಂಪಿಕ್ಸ್, ಏಷ್ಯನ್ ಗೇಮ್ಸ್‌ನಂತೆಯೇ ಪ್ರತಿಷ್ಠಿತ ಕೂಟಗಳಲ್ಲಿ ಒಂದಾಗಿರುವ ಕಾಮನ್‌ವೆಲ್ತ್ ಕ್ರೀಡಾಕೂಟವು ಕಾಮನ್‌ವೆಲ್ತ್ ರಾಷ್ಟ್ರಗಳನ್ನು ಒಗ್ಗೂಡಿಸುವ ಒಂದು ವೇದಿಕೆ. ಜಗತ್ತಿನಾದ್ಯಂತ ಯುದ್ಧದ ಕಾರ್ಮೋಡ ಕವಿದಿರುವ ಹೊತ್ತಿನಲ್ಲಿ ಕ್ರೀಡೆ ಎಲ್ಲರನ್ನು ಒಗ್ಗೂಡಿಸುವ ಹಾಗೂ ಶಾಂತಿಯನ್ನು ಸಾರುವ ಮಂತ್ರ ದಂಡ. ಆದರೆ ಆರ್ಥಿಕ ಹೊರೆ ಹೆಚ್ಚುವ ನೆಪದಲ್ಲಿ ಕ್ರೀಡೆಗಳನ್ನೇ ಕಡಿತಗೊಳಿಸಿರುವುದು ಸಮಂಜಸವಲ್ಲ.

–ಕೆ.ಎಸ್.ಸುರೇಶ್, ಮುಖ್ಯ ಶಿಕ್ಷಕರು, ಕೆ.ಜಿ.ಹಳ್ಳಿ.

15ನೇ ವಾರ್ಡಿನ ರಸ್ತೆಯಲ್ಲಿ ಬಿಡಾಡಿ ದನಗಳ ಉಪಟಳ

ಮಾನ್ಯರೇ,

ಮೈಸೂರಿನ ನರಸಿಂಹರಾಜ ಕ್ಷೇತ್ರದ 15ನೇ ವಾರ್ಡಿನ ವ್ಯಾಪ್ತಿಗೆ ಬರುವ ಕುರಿಮಂಡಿ ಬಸ್ ನಿಲ್ದಾಣದ ಎದುರಿನ ರಸ್ತೆಯಲ್ಲಿ ವಿಪರೀತವಾದ ದನ ಕರುಗಳನ್ನು ಓಡಾಡಲು ಬಿಡಲಾಗಿದೆ. ಇದರಿಂದ ಜನ ಸಂಚಾರಕ್ಕೆ, ವಾಹನ ಸಂಚಾರಕ್ಕೆ ತೀವ್ರತರವಾದ ತೊಂದರೆ ಉಂಟಾಗಿದೆ. ಅಪಘಾತಗಳಾಗುವ ಸಂಭವ ಹೆಚ್ಚಿದೆ. ಜೊತೆಗೆ ರಸ್ತೆಯೆಲ್ಲಾ ಗೋಮೂತ್ರ ಮತ್ತು ಸಗಣಿಯಿಂದ ಗಲೀಜಾಗಿ ಕಾಣುತ್ತಿದೆ. ಈ ದನ ಕರುಗಳನ್ನು ಯಾರು ರಸ್ತೆಯಲ್ಲಿ ಬಿಟ್ಟಿದ್ದಾರೆ ಎಂಬುದು ತಿಳಿಯುತ್ತಿಲ್ಲ. ವಾಹನಗಳು ಓಡಾಡುವ ರಸ್ತೆಯಲ್ಲಿ ದನ ಕರುಗಳನ್ನು ಬಿಟ್ಟಿರುವುದರಿಂದ ವಾಹನ ಸಂಚಾರಕ್ಕೆ ಮತ್ತು ಜನ ಸಂಚಾರಕ್ಕೆ ಬಹಳ ತೊಂದರೆಯಾಗಿದೆ. ಜೊತೆಗೆ ಕಟ್ಟಡ ನಿರ್ಮಾಣಕ್ಕೆ ಬಳಸುವ ಸ್ಟೋನ್ ಡಸ್ಟ್, ಜಲ್ಲಿ ಮುಂತಾದವುಗಳನ್ನು ಪಾರ್ಕ್ ಮುಂದೆಯೇ ಸುರಿಯಲಾಗುತ್ತಿದೆ ಮತ್ತು ಪಾರ್ಕ್‌ನ ಕಾಂಪೌಂಡ್‌ನ ಮೇಲೆ ಬಟ್ಟೆಗಳನ್ನು ಒಣ ಹಾಕಲಾಗುತ್ತಿದೆ ಈ ಎಲ್ಲಾ ಕಾರಣಗಳಿಂದ ಪಾರ್ಕ್ ಸೌಂದರ್ಯವೂ ಹಾಳಾಗುತ್ತಿದೆ. ಅದಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿ ವಿನಂತಿ.

–ರೂಪ, ಸ್ಥಳೀಯ ನಿವಾಸಿ, ಮೈಸೂರು

50:50 ಸೂತ್ರ ರದ್ದು ಮಾಡದೆ ನಿವೇಶನ ಪಡೆಯಬಾರದಿತ್ತು

ಮಾನ್ಯರೆ,

ಮುಖ್ಯಮಂತ್ರಿಯವರ ಪತ್ನಿ ಶ್ರೀಮತಿ ಪಾರ್ವತಿಯವರು ವಾಪಸ್ ಮಾಡಿದ 14 ನಿವೇಶಗಳನ್ನು ಮುಡಾ ವಾಪಸು ತೆಗೆದುಕೊಂಡಿದೆ. 50:50 ಫಾರ್ಮುಲಾ ಆರಂಭವಾದ ಮೇಲೆ ಇನ್ನೂ ಹಲವಾರು ಭೂ ಮಾಲೀಕರಿಗೆ ನಿವೇಶಗಳನ್ನು ಮತ್ತು ಬದಲಿ ನಿವೇಶಗಳನ್ನು ನೀಡಲಾಗಿದೆ. ಹಾಗಿದ್ದರೆ ಅವರಿಂದಲೂ ಮುಡಾ ನಿವೇಶನಗಳನ್ನು ವಾಪಸು ಪಡೆಯಬೇಕಲ್ಲವೇ? ಹಾಗಿಲ್ಲದಿದ್ದರೆ ನಿಯಮ ಒಬ್ಬರಿಗೊಂದು ಇನ್ನೊಬ್ಬರಿಗೊಂದು ಎಂದಂತಾಗುತ್ತದೆ. 50:50 ಸೂತ್ರ ರದ್ದು ಮಾಡದೇ ಶ್ರೀಮತಿ ಪಾರ್ವತಿಯವರಿಂದ ನಿವೇಶನ ಪಡೆಯಬಾರದಿತ್ತು. ಹಾಗೆ ಪಡೆದಿರುವುದರಿಂದ ಹಿಂದಿನಿಂದ ಅನ್ವಯವಾಗುವಂತೆ 50:50 ನಿಯಮವನ್ನು ಹಿಂತೆಗೆದುಕೊಂಡು ಹಂಚಿಕೆಯಾಗಿರುವ ಎಲ್ಲರಿಂದಲೂ ವಾಪಸು ಪಡೆಯಬೇಕು.

–ಕೆ.ಎ. ಸಿದ್ದಲಿಂಗಪ್ಪ, ಮೈಸೂರು.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದ ಲಹರಿ

ವೀರಮಾತೆ ಜೀಜಾಬಾಯಿ

ಹೆಣ್ಣನ್ನು ಸಂಸ್ಕೃತಿಯ ವಾಹಕಳು ಎನ್ನುವ ಮಾತು ಅದೆಷ್ಟು ಸತ್ಯ! ಒಂದು ಹೆಣ್ಣು ಸುಶಿಕ್ಷಿತಳಾದರೆ, ಒಂದು ಕುಟುಂಬವೇ ಸುಶಿಕ್ಷಿತವಾಗುತ್ತದೆ ಎಂಬುದರಲ್ಲಿ ಅನುಮಾನವೇ ಇಲ್ಲ. ಮಕ್ಕಳಿಗೆ ಹುಟ್ಟಿನಿಂದ ಒಳ್ಳೆಯ ಸಂಸ್ಕಾರ ನೀಡುವ ಮೊದಲ ಗುರು ತಾಯಿ. ಮಗುವಿಗೆ ತನ್ನ ಎದೆಹಾಲ ಜೊತೆಗೆ ಒಳ್ಳೆಯ ಆಲೋಚನೆ, ಆಚಾರ–ವಿಚಾರಗಳ ತಳಹದಿಯನ್ನು ಆಕೆ ತಯಾರು ಮಾಡಿಯೇ ಇಟ್ಟಿರುತ್ತಾಳೆ. ಮೇಣದಂತಹ ಮಕ್ಕಳ ಮನಸ್ಸನ್ನು ಹದವಾಗಿಸಿ ತಯಾರು ಮಾಡುವಲ್ಲಿ ಆಕೆಯ ಪಾತ್ರ ಬಲು ದೊಡ್ಡದು. ನಮ್ಮ ಪುರಾಣ, ಇತಿಹಾಸದಲ್ಲಿ ಇಣುಕಿ ನೋಡಿ. ಅಂತಹ ಅದೆಷ್ಟು ಮಾತೆಯರು ನಮಗೆ ನೋಡ ಸಿಗುತ್ತಾರೆ. ಪಾರ್ವತಿ, ಸೀತೆ, ಯಶೋದೆ, ಕುಂತಿ ಅಷ್ಟೇ ಅಲ್ಲ, ಹಿಡಿಂಬೆಯೂ ಘಟೋತ್ಕಚನನ್ನು ತಯಾರು ಮಾಡಿದವಳೇ. ಭಾರತದ ಇತಿಹಾಸದಲ್ಲಿ ಹಿಂದೂ ಧರ್ಮದ ಉಳಿವಿಗಾಗಿ ತನ್ನ ವೀರ ಮಗನನ್ನು ದೇಶದ, ಧರ್ಮದ ರಕ್ಷಣೆಗಾಗಿ ಅತ್ಯಂತ ಶ್ರೇಷ್ಠ ಪುರುಷನನ್ನಾಗಿ ರೂಪಿಸಿದ ಖ್ಯಾತಿಯನ್ನು ಹೊತ್ತ ಮಹಾಮಾತೆ ಒಬ್ಬಳು ಇದ್ದಾಳೆ. ಆಕೆಯ ಸ್ಮರಣೆಯೇ ಪವಿತ್ರವಾದುದು.

ಭಾರತವು ಫ್ರೆಂಚರ, ಮುಸ್ಲಿಮರ, ಪೋರ್ಚುಗೀಸರ ಮತ್ತು ಬ್ರಿಟಿಷರ ದಾಳಿಯಿಂದ ತತ್ತರಿಸಿ ಹೋಗಿದ್ದ ಕಾಲಘಟ್ಟ, ಭಾರತೀಯರಾದ ಹಿಂದೂಗಳ ಮೇಲೆ ಘೋರ ಅತ್ಯಾಚಾರಿಗಳ ಆಕ್ರಮಣ ನಿರಂತರವಾಗಿತ್ತು. ಅವರದೇ ಮೇಲುಗೈ ಆಗಿತ್ತು. ದೇಶಿ ರಾಜರುಗಳು ತಮ್ಮ ಧರ್ಮ, ಸಂಸ್ಕೃತಿಯನ್ನು ರಕ್ಷಿಸುವುದರ ಬದಲಿಗೆ ಪರಕೀಯರ ಸೇವೆಯಲ್ಲೇ ಬದುಕನ್ನು ಕಳೆಯುತ್ತಿದ್ದರು. ಹೀಗೆ ಈ ನಾಡಿನ ಸ್ವಾತಂತ್ರ್ಯ ಮುಳುಗಿಯೇ ಹೋಯಿತೇನೋ ಎಂಬಂತಹ ಕತ್ತಲಿನಲ್ಲಿ ವೀರನೊಬ್ಬ ಸೂರ್ಯನಂತೆ ಹುಟ್ಟಿ ಬಂದುದು ಭಾರತದ ಪುಣ್ಯವೇ ಸರಿ. ಅವನಲ್ಲಿ ತನ್ನ ಧರ್ಮ, ಸಂಸ್ಕೃತಿಯ ಬಗೆಗೆ ಅಪಾರ ಅಭಿಮಾನವನ್ನು ಬಿತ್ತಿ, ದಾಸ್ಯದ ಬದುಕನ್ನು ಕೊನೆಗಾಣಿಸಬೇಕೆಂಬ ಕಿಚ್ಚನ್ನು ಹಚ್ಚಿ, ಅವನ ಬೆನ್ನೆಲುಬಾಗಿ ನಿಂತವಳು ಅವನ ತಾಯಿ ಮಹಾಮಾತೆ **ಜೀಜಾಬಾಯಿ**. ಆ ಶ್ರೇಷ್ಠ ಪುರುಷನೇ **ಛತ್ರಪತಿ ಶಿವಾಜಿ**. ಅವನ ಸಾಧನೆಯ ಹಾದಿಯಲ್ಲಿ ಸದಾ ಸ್ಫೂರ್ತಿ ತುಂಬಿದಾಕೆ. ಆತನ ಯಶಸ್ಸಿನ ಪ್ರತೀ ಮೆಟ್ಟಿಲಿನಲ್ಲೂ ಅವಳ ಕಾಣಿಕೆ ಇದೆ. ಅವನು ಆಕೆಯ ಗರ್ಭದಲ್ಲಿದ್ದಾಗ ಅವಳಿಗೆ ಆಗುತ್ತಿದ್ದ ಬಯಕೆಗಳಾದರೂ ದುರ್ಗವನ್ನೇರಬೇಕು. ಕುದುರೆಯನ್ನೇರಿ ಕವಚ ತೊಟ್ಟು ಖಡ್ಗ ಹಿಡಿದು ಹೋರಾಡಬೇಕು. ಹುಲಿಯೊಡನೆ ಕಾದಾಡಬೇಕೆಂಬಂಥವು! ಅರ್ಜುನನಂತಹ ಮಗ ಹುಟ್ಟಲೆಂದು ಆಕೆ ಬಯಸುತ್ತಿದ್ದಳೆಂದೇ ಅವಳಲ್ಲಿ ಭಾರತದ ಇತಿಹಾಸವನ್ನು ಪುನರ್ನಿರ್ಮಿಸಿದ ಮಗ ಹುಟ್ಟಿರಬೇಕು.



ಜೀಜಾಬಾಯಿ

1630ರ ಫೆಬ್ರವರಿ 19ರಂದು ಜನಿಸಿದ ಶಿವಾಜಿಗೆ ನೀಡುತ್ತಿದ್ದ ಪ್ರತೀ ಹಾಲಿನ ಗುಟುಕಿನ ಜೊತೆಗೆ ಶಿವಾಜಿಗೆ ಹಿಂದೂ ಧರ್ಮದ, ಸಂಸ್ಕೃತಿಯ, ಸ್ವದೇಶದ ಹಿರಿಮೆಯನ್ನು ಮನವರಿಕೆ ಮಾಡಿಕೊಟ್ಟು, ಅದನ್ನು ರಕ್ಷಿಸಬೇಕೆಂಬ ಹಂಬಲವನ್ನು ಅವನಲ್ಲಿ ಆಳವಾಗಿ ಬಿತ್ತಿದ್ದಳು. ವೀರ ಪುರುಷರ ಕತೆಗಳನ್ನು ಆಕೆಯ ಬಾಯಿಂದ ಕೇಳುವುದೆಂದರೆ ಬಾಲಕ ಶಿವಾಜಿಗೆ ಎಲ್ಲಿಲ್ಲದ ಉತ್ಸಾಹ! ಆಕೆಯ ಆಶೀರ್ವಾದ ಒಂದಿದ್ದರೆ, ನ್ಯಾಯ, ಧರ್ಮದ ತಳಹದಿಯ ಮೇಲೆ ಸ್ವರಾಜ್ಯವನ್ನು ಕಟ್ಟುವ, ಈ ನಾಡನ್ನು ದಾಸ್ಯದಿಂದ ಮುಕ್ತಗೊಳಿಸುವ ಕನಸನ್ನು ಕಾಣುತ್ತಿದ್ದ. ಹೀಗೆ ಶಿವಾಜಿಯನ್ನು ದುಷ್ಟ ಶಿಕ್ಷಕನಾಗಿ, ಶಿಷ್ಟ ರಕ್ಷಕನಾಗಿ ರೂಪುಗೊಳಿಸಿದ ಮಹಾಮಾತೆ ಜೀಜಾಬಾಯಿ. ರಾಜನೀತಿ, ಯುದ್ಧ ನೀತಿ, ಶಸ್ತ್ರ–ಶಾಸ್ತ್ರಗಳ ಜೊತೆ ಭವ್ಯ ಹಿಂದೂ ಸಂಪ್ರದಾಯಗಳ ಕಟ್ಟುನಿಟ್ಟಾದ ಶಿಕ್ಷಣ ಲಭಿಸುವಂತೆ ನೋಡಿಕೊಂಡವಳು ಆಕೆ. ಶಿವಾಜಿಯ ತಂದೆ ಶಹಾಜಿ ಈ ತಾಯಿ–ಮಗನನ್ನು ಪುಣೆಯಲ್ಲಿ ಇಟ್ಟಿದ್ದರು. ಆಗ ವಿಜಾಪುರದ ಸುಲ್ತಾನರ ದಾಳಿಗೆ ಸಿಕ್ಕಿ ಪುಣೆಯು ನಿರ್ನಾಮವಾಗಿ ಹೋಗಿತ್ತು. ಅಲ್ಲಿದ್ದ ಎಲ್ಲ ಮಂದಿರಗಳನ್ನೂ ಕೆಡವಲಾಗಿತ್ತು. ಆಗ ಜೀಜಾಬಾಯಿ ಅದನ್ನೆಲ್ಲ ಮತ್ತೆ ನಿರ್ಮಿಸಿ, ಅಲ್ಲಿಯ ರಾಜ್ಯ ಸೂತ್ರವನ್ನು ತಾನೇ ಕೈಗೆ ತೆಗೆದುಕೊಂಡಳು. ಪಳಗಿದ ರಾಜಕೀಯ ಪಟು ದಾದಾಜಿಕೊಂಡದೇವನೊಂದಿಗೆ ರಾಜ್ಯಾಡಳಿತದ ಬಗ್ಗೆ ಚರ್ಚಿಸುವಾಗ ಬಾಲಕ ಶಿವಾಜಿಯೂ ಇರುತ್ತಿದ್ದು, ವಿಶೇಷ ಆಸಕ್ತಿಯಿಂದ ವಿಚಾರ ವಿನಿಮಯ ಮಾಡುತ್ತಿದ್ದ. ಎಲ್ಲವನ್ನೂ ಗ್ರಹಿಸುತ್ತಿದ್ದ. ಶಕುಂತಲೆಯು ಭರತನನ್ನು ಬೆಳೆಸಿದಂತೆ, ಸೀತಾಮಾತೆ ಲವ–ಕುಶರನ್ನು ತಯಾರು ಮಾಡಿದಂತೆ ಜೀಜಾಬಾಯಿಯು ಸ್ವತಂತ್ರ ಸಾಮ್ರಾಟನನ್ನು ನಿರ್ಮಾಣ ಮಾಡುವ ಮಹತ್ಕಾರ್ಯದಲ್ಲಿ ನಿರತಳಾಗಿದ್ದಳು.

> “ಒಂದು ಕೋಟೆ ವಶವಾಯಿತೆಂದರೆ ಅದರೊಡನೆ ಅದರ ರಾಜಧಾನಿ, ಸೈನ್ಯ, ಆಹಾರ, ಖಜಾನೆ ಎಲ್ಲವೂ ಗೆದ್ದವರದೇ. ಅದನ್ನು ಮತ್ತೊಂದು ಕೋಟೆಯನ್ನು ಆಕ್ರಮಿಸಲು ಉಪಯೋಗಿಸು ಎಂಬುದು ಜೀಜಾಬಾಯಿಯ ಉಪದೇಶವಾಗಿತ್ತು.


ಅಂತೆಯೇ ಒಂದು ಹನಿ ರಕ್ತವೂ ಬೀಳದಂತೆ ತನ್ನ ಮಾವಳಿ ಗೆಳೆಯರೊಡನೆ ಮಿಂಚಿನಂತೆ ಮುತ್ತಿ ತೋರಣಘಡವನ್ನು ವಶಪಡಿಸಿಕೊಂಡು ಸ್ವರಾಜ್ಯ ದೇವತೆಗೆ ಶಿವಾಜಿಯು ಪ್ರಥಮ ಕಾಣಿಕೆಯನ್ನು ಅರ್ಪಿಸಿದ. ಒಂದು ಕೋಟೆ ವಶವಾಯಿತೆಂದರೆ ಅದರೊಡನೆ ಅದರ ರಾಜಧಾನಿ, ಸೈನ್ಯ, ಆಹಾರ, ಖಜಾನೆ ಎಲ್ಲವೂ ಗೆದ್ದವರದೇ. ಅದನ್ನು ಮತ್ತೊಂದು ಕೋಟೆಯನ್ನು ಆಕ್ರಮಿಸಲು ಉಪಯೋಗಿಸು ಎಂಬುದು ಜೀಜಾಬಾಯಿಯ ಉಪದೇಶವಾಗಿತ್ತು. ಮುಂದೆ ರಾಜಘಡ, ಕೊಂಡಾಣ, ಶಿರವಳ, ಸುಭಾನ ಮಂಗಳ ಹೀಗೆ ಒಂದಾದ ಮೇಲೊಂದರಂತೆ ಕೋಟೆಗಳು ಶಿವಾಜಿಯ ಕೈವಶವಾದುವು. ಇದನ್ನು ಕೇಳಿ ಸಿಟ್ಟಿಗೆದ್ದ ಸುಲ್ತಾನ ಶಿವಾಜಿಗೆ ಪಾಠ ಕಲಿಸಲು ಅವರ ತಂದೆಯನ್ನು ಹಿಡಿದು ತಂದು ಪ್ರಾಣ ಭಯ ತೋರಿಸುವ ತಂತ್ರವನ್ನು ಹೂಡಿದ. ಮೂಗು ಹಿಡಿದರೆ, ಬಾಯಿ ತಾನಾಗಿಯೇ ತೆರೆಯುವಂತೆ! ಬೆಂಗಳೂರಿನ ಬಳಿ ಮುಸ್ತಾಫ ಖಾನನು ಶಹಾಜಿಯನ್ನು ಸೆರೆ ಹಿಡಿದು ಬಿಜಾಪುರಕ್ಕೆ ಎಳೆದು ತಂದ. ಆಗ ಬಿಜಾಪುರದ ಸೆರೆಮನೆ ಸೇರಿದವರು ಬದುಕಿ ಬರುತ್ತಿದ್ದುದು ಅಪರೂಪ. ಇದನ್ನು ಕೇಳಿದ ಜೀಜಾಬಾಯಿಯ ಎದೆ ಝುಲ್ಲೆಂದಿತು. ಆಕೆಯ ಗಂಡನ ಜೀವ ಅಪಾಯದಲ್ಲಿತ್ತು. ಅದೇ ವೇಳೆಗೆ ಶಿವಾಜಿಯನ್ನು ಸೆರೆ ಹಿಡಿಯಲು ಫತ್ತೇಖಾನನು ಭಾರಿ ಸೈನ್ಯದೊಂದಿಗೆ ಬರುತ್ತಿರುವ ಸುದ್ದಿಯೂ ಬಂದಿತು. ವಿಪತ್ತಿನ ಮೇಲೆ ವಿಪತ್ತು. ಸ್ವರಾಜ್ಯ ಬೇಕೋ, ತಂದೆ ಬೇಕೋ ಎಂಬ ದೊಡ್ಡ ಪ್ರಶ್ನೆ ಶಿವಾಜಿಯ ಎದುರು ನಿಂತಿತ್ತು. ಅವನು ತಾಯಿಯೊಡನೆ ವಿಚಾರ ಮಾಡಿದ. ಯುದ್ಧ ಮಾಡುವುದೆಂದು ನಿರ್ಧರಿಸಿದ. ಬಿಜಾಪುರದ ಸೇನೆಯನ್ನು ಪುರಂದರ ಘಡದಲ್ಲಿ ನಿಂತು ಎದುರಿಸಿದ, ಓಡಿಸಿದ. ತನ್ನ ತಂದೆಯ ಬಿಡುಗಡೆಗೆ ಸಹಾಯ ಕೇಳಿ ದೆಹಲಿಯ ಮೊಘಲ್ ಬಾದಶಹ ಶಹಜಹಾನನಿಗೆ ಬುದ್ಧಿವಂತಿಕೆಯ ಪತ್ರ ಬರೆದು, ಬಿಜಾಪುರದ ಸುಲ್ತಾನನು ತಂದೆಯನ್ನು ಬಿಡುಗಡೆ ಮಾಡಲೇಬೇಕಾಗುವಂತಹ ಪರಿಸ್ಥಿತಿಯನ್ನು ತಂದಿಟ್ಟ. ಹೀಗೆ ತಾಯಿಯ ಮಾರ್ಗದರ್ಶನದಿಂದ ಶಿವಾಜಿ ಮುಂದುವರೆಯುತ್ತಲೇ ಇದ್ದ. ಜೀಜಾಬಾಯಿಗೂ ಅನುಭವೀ ರಾಜಕಾರಣಿಗಳ, ಕಾರಭಾರಿಗಳ ಜೊತೆಯಲ್ಲಿ ರಾಜಕಾರಣದ ಅತ್ಯಂತ ಕಠಿಣ ಸಮಸ್ಯೆಗಳನ್ನು ಅಭ್ಯಾಸ ಮಾಡಿದ ಅನುಭವ ಇತ್ತು. ಹೀಗಾಗಿ ಅವಳು ಮಗನಿಗೆ ಸಮರ್ಥವಾದ ಮಾರ್ಗದರ್ಶನ ಮಾಡಬಲ್ಲವಳಾಗಿದ್ದಳು.

ಬಿಜಾಪುರ ಸರದಾರ ಅಫಝುಲ್‌ಖಾನನು ಶಿವಾಜಿಯನ್ನು ಕೆರಳಿಸಿ, ಹೊರಬಂದಾಗ ಅವನನ್ನು ಮುಗಿಸಲೆಂದು ಗುಡಿಗಳನ್ನು ನಿರ್ನಾಮ ಮಾಡಿ, ತಾಯಿ ತುಳಜಾ ಭವಾನಿಯ ಮೂರ್ತಿಯನ್ನೂ ನುಚ್ಚುನೂರು ಮಾಡಿರುತ್ತಾನೆ. ಈಗ ಅವನನ್ನು ಭೇಟಿ ಮಾಡುವುದೋ, ಬೇಡವೋ ಎಂದು ತಾಯಿಯೊಡನೆ ಸಮಾಲೋಚಿಸಿದ ಶಿವಾಜಿಯು, ವೀರನಂತೆ ಅವನನ್ನು ಭೇಟಿ ಮಾಡುವಂತೆ ಹೇಳಿದ ತಾಯಿಯ ಮಾತಿನಂತೆ ನಡೆಯುತ್ತಾನೆ. ಖಾನನ ಕ್ರೂರ ಸ್ವಭಾವವನ್ನರಿತಿದ್ದ ಅವನ ಮಿತ್ರರಿಗ್ಯಾರಿಗೂ ಇದು ಇಷ್ಟವಿಲ್ಲದಿದ್ದರೂ ತಾಯಿ ಮಗನನ್ನು ಮೃತ್ಯುಕೂಪಕ್ಕೆ ಹೊಕ್ಕಿಬರಲು ಕಳುಹಿಸುತ್ತಾಳೆ. ಶಿವಾಜಿಯು ಉಪಾಯದಿಂದ ಖಾನನನ್ನೇ ಕೊಂದು ಜಯಶಾಲಿಯಾಗಿ ಬಂದ ಕತೆ ಜನಜನಿತವಾಗಿದೆ. ಶಿವಾಜಿಯ ಮಿತ್ರರೆಲ್ಲರನ್ನೂ ತನ್ನ ಮಕ್ಕಳಂತೆಯೇ ಕಾಣುತ್ತಿದ್ದ ಜೀಜಾಬಾಯಿ ಅವರಿಗೂ ಸ್ಫೂರ್ತಿಯ ಸೆಲೆಯಾಗಿದ್ದಳು. ವೀರ ತಾನಾಜಿಯು ಅತೀ ದುರ್ಗಮವಾಗಿದ್ದ ಸಿಂಹಘಡವನ್ನು ಸಿಂಹದಂತೆ ಸೆಣಸಿ, ಉದಯಭಾನು ರಾಥೋಡನನ್ನು ಕೊಂದು ಅದನ್ನು ವಶಪಡಿಸಿಕೊಳ್ಳಲು ಆಕೆಯ ವೀರೋಚಿತ ಮಾತುಗಳೇ ಕಾರಣ. ಆ ಕೋಟೆಯ ಮೇಲೆ ಹಿಂದೂ ಧ್ವಜ ಹಾರಾಡುವುದನ್ನು ಅತೀವ ಸಂತೋಷದಿಂದ ನೋಡಿದ ಆಕೆ, ತಾನಾಜಿಯ ವೀರ ಮರಣವನ್ನು ಕೇಳಿ ಮಮ್ಮಲ ಮರುಗಿದ್ದಳೂ ಸಹ. ಶಿವಾಜಿಯು ಸ್ವತಂತ್ರ ಸಾಮ್ರಾಜ್ಯದ ಸಿಂಹಾಸನವನ್ನೇರುವವರೆಗೆ ಅವನ ಬೆನ್ನೆಲುಬಾಗಿದ್ದ ಮಹಾಮಾತೆಯ ಬದುಕು ನಮ್ಮ ಮುಂದಿನ ಪೀಳಿಗೆಗೆ ನಿರಂತರ ಚೈತನ್ಯದ ಚಿಲುಮೆಯಾಗಲಿ.

ಮೈಸೂರಲ್ಲಿ ಮಾರಾಟವಾಗುವ ತುಪ್ಪದಲ್ಲಿ ಕಲಬೆರಕೆ ಇಲ್ಲ

ಆರೋಗ್ಯ ಇಲಾಖೆ ಪ್ರಯೋಗಾಲಯದಿಂದ ದೃಢೀಕರಣ

ಮೈಸೂರು, ಅ.26(ಬಿಎಲ್‌ಯು)– ತಿರುಪತಿ ಲಡ್ಡುವಿನಲ್ಲಿ ಪ್ರಾಣಿ ಕೊಬ್ಬು ಬಳಕೆ ಮಾಡಲಾಗಿತ್ತು ಎಂಬ ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಆರೋಪದ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ತುಪ್ಪವನ್ನು ಗುಣಮಟ್ಟದ ಪರೀಕ್ಷೆಗೆ ಒಳಪಡಿಸಲಾಗಿತ್ತು. ತಿರುಪತಿ ಲಡ್ಡುನಲ್ಲಿ ಪ್ರಾಣಿ ಕೊಬ್ಬು ಬಳಕೆ ಮಾಡಲಾಗಿತ್ತು ಎಂಬ ಆರೋಪ ಕೇಳಿ ಬಂದ ನಂತರ ಜನರಲ್ಲಿ ತುಪ್ಪದ ಗುಣಮಟ್ಟದ ಬಗ್ಗೆ ಸಂಶಯಗಳು ವ್ಯಕ್ತವಾಗಿತ್ತು. ತಾವು ಬಳಕೆ ಮಾಡುತ್ತಿರುವ ತುಪ್ಪದ ಗುಣಮಟ್ಟದ ಬಗ್ಗೆ ಜನರ ಅನುಮಾನ ದೂರ ಮಾಡಬೇಕಿತ್ತು. ಈ ವಿಚಾರವನ್ನು ರಾಜ್ಯ ಸರ್ಕಾರದ ಆರೋಗ್ಯ ಇಲಾಖೆ ಗಂಭೀರವಾಗಿ ಪರಿಗಣಿಸಿತ್ತು.



ಜನರ ಸಂಶಯ ನಿವಾರಣೆ ಮಾಡುವ ನಿಟ್ಟಿನಲ್ಲಿ ಮೈಸೂರು ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ತುಪ್ಪದ ಮಾದರಿಯನ್ನು ಸಂಗ್ರಹಿಸಿ ಪ್ರಯೋಗಾಲಯದಲ್ಲಿ ಪರೀಕ್ಷೆಗೊಳಪಡಿಸುವಂತೆ ಅಧಿಕಾರಿಗಳಿಗೆ ಆದೇಶಿಸಿತ್ತು. ಅದರಂತೆ ಮೈಸೂರಿನ ಹಲವೆಡೆ ತುಪ್ಪದ ಮಾದರಿಯನ್ನು ಸಂಗ್ರಹಿಸಲಾಗಿತ್ತು. ಪ್ಯಾಕಿಂಗ್ ಮಾಡಿದ ತುಪ್ಪ, ಕೆಜಿ ಹಾಗೂ ಗ್ರಾಂಗಳಲ್ಲಿ ಚಿಲ್ಲರೆಯಾಗಿ ಮಾರಾಟ ಮಾಡುತ್ತಿದ್ದ ತುಪ್ಪದ ಮಾದರಿಯನ್ನು ಸಂಗ್ರಹ ಮಾಡಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು.

ಮೈಸೂರಿನಲ್ಲಿ ಮಾರಾಟ ಮಾಡುತ್ತಿದ್ದ ತುಪ್ಪದಲ್ಲಿ ಯಾವುದೇ ಕಲಬೆರಕೆ ಕಂಡು ಬಂದಿಲ್ಲ ಎಂಬುದು ಪ್ರಯೋಗಾಲಯದ ವರದಿಯಿಂದ ದೃಢಪಟ್ಟಿದೆ. ಕೆಲವು ಆಹಾರಗಳಲ್ಲಿ ಕಲಬೆರಕೆ ಇರಬಹುದು. ಆದರೆ ತುಪ್ಪದಲ್ಲಿ ಕಲಬೆರಕೆ ಇಲ್ಲದೇ ಇರುವುದು ಸಮಾಧಾನದ ಸಂಗತಿಯಾಗಿದೆ.

ಆಹಾರ ಮನುಷ್ಯನ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಆದ ಕಾರಣ ಪ್ರತಿಯೊಂದು ಆಹಾರ ಪದಾರ್ಥವನ್ನು ಆರೋಗ್ಯ ಇಲಾಖೆ ಆಗಾಗ ಗುಣಮಟ್ಟದ ಪರೀಕ್ಷೆಗೊಳಪಡಿಸಬೇಕು.

ಆಹಾರ ಪದಾರ್ಥ ಸ್ಥಳಗಳಿಗೆ ದಿಢೀರ್ ಭೇಟಿ ನೀಡಿ ಮಾದರಿಯನ್ನು ಸಂಗ್ರಹ ಮಾಡುತ್ತೇವೆ. ಕಲಬೆರಕೆ ಇದ್ದರೆ ಕಠಿಣ ಶಿಕ್ಷೆಗೊಳಪಡಿಸಲಾಗುವುದು ಎಂದು ಸರ್ಕಾರ ಎಚ್ಚರಿಕೆ ನೀಡಿದ ಪಕ್ಷದಲ್ಲಿ ಬಹುತೇಕ ಆಹಾರ ಪದಾರ್ಥಗಳು ಕಲಬೆರಕೆ ಆಗುವುದು ತಪ್ಪುತ್ತದೆ.

ನಿವೃತ್ತ ಐಪಿಎಸ್ ಅಧಿಕಾರಿ ಕೆಂಪಯ್ಯ ಹೆಸರಲ್ಲಿ ಕ್ರಿಕೆಟ್ ಪಂದ್ಯಾವಳಿ

ಮೈಸೂರು,ಅ.26(ಎಂಟಿವೈ)–ಕನ್ನಡ ರಾಜ್ಯೋತ್ಸವದ ಅಂಗವಾಗಿ ನವೆಂಬರ್‌ನಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ಕೆಂಪಯ್ಯ ಅವರ ಹೆಸರಲ್ಲಿ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗುವುದು ಎಂದು ಸಂಯುಕ್ತ ಕರ್ನಾಟಕ ಆಟೋರಿಕ್ಷಾ ಚಾಲಕರ ಮತ್ತು ಮಾಲೀಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಂ.ವಿ.ಶ್ರೀನಿವಾಸ ಮಿತ್ರ ತಿಳಿಸಿದ್ದಾರೆ.



ಕೆಂಪಯ್ಯ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಂಪಯ್ಯ ಐಪಿಎಸ್ ಅಭಿಮಾನಿಗಳ ಸೇವಾ ವೇದಿಕೆ ಹಾಗೂ ಸಂಯುಕ್ತ ಕರ್ನಾಟಕ ಆಟೋರಿಕ್ಷಾ ಚಾಲಕರ ಮತ್ತು ಮಾಲೀಕರ ಕ್ಷೇಮಾಭಿವೃದ್ಧಿ ಸಂಘದ ಸಂಯುಕ್ತಾಶ್ರಯದಲ್ಲಿ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲು ನಿರ್ಧರಿಸಲಾಗಿದ್ದು, ಈ ಪಂದ್ಯಾವಳಿಯಲ್ಲಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿ–ವಿದ್ಯಾರ್ಥಿನಿಯರು, ವಾಣಿಜ್ಯ ವಾಹನ ಚಾಲಕರು, ಮಾಲೀಕರು, ಆಟೋ ರಿಕ್ಷಾ, ಟ್ಯಾಕ್ಸಿ, ಮ್ಯಾಕ್ಸಿಕ್ಯಾಬ್, ಲಾರಿ, ಬಸ್, ಸರ್ಕಾರಿ ಇಲಾಖೆ ಸಿಬ್ಬಂದಿ, ಖಾಸಗಿ ಸಂಸ್ಥೆಗಳ ಪ್ರತಿನಿಧಿಸುವ ತಂಡಗಳು ಪಾಲ್ಗೊಳ್ಳಬಹುದಾಗಿದೆ. ಹೆಸರು ನೋಂದಾಯಿಸಿಕೊಳ್ಳಲು ನ.10 ಕೊನೆ ದಿನಾಂಕ, ಹೆಚ್ಚಿನ ಮಾಹಿತಿಗೆ ದೂ. 93424 21021 ಅನ್ನು ಸಂಪರ್ಕಿಸಬಹುದಾಗಿದೆ ಎಂದರು. ಇದೇ ವೇಳೆ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಪಂದ್ಯಾವಳಿಯ ಪೋಸ್ಟರ್ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಮುಖಂಡರಾದ ದ್ಯಾವಪ್ಪನಾಯಕ, ಬಸವರಾಜು, ಮೋಹನ್‌ಕುಮಾರ್‌ಗೌಡ, ಸುನಿಲ್ ಕುಮಾರ್ ಹಾಗೂ ಇನ್ನಿತರರು ಹಾಜರಿದ್ದರು.

ಕುಲ್ಗಾಮ್‌ನಲ್ಲಿ ಸೇನಾ ವಾಹನ ಪಲ್ಟಿ; ಓರ್ವ ಯೋಧ ಸಾವು

ಕುಲ್ಗಾಮ್: ಜಮ್ಮು–ಕಾಶ್ಮೀರದ ಕುಲ್ಗಾಮ್ ಜಿಲ್ಲೆಯಲ್ಲಿ ಸೇನಾ ವಾಹನವೊಂದು ರಸ್ತೆಯಿಂದ ಸ್ಕಿಡ್ ಆಗಿ ಪಲ್ಟಿಯಾಗಿದ್ದು, ಘಟನೆಯಲ್ಲಿ ಓರ್ವ ಯೋಧ ಸಾವನ್ನಪ್ಪಿದ್ದಾರೆ ಮತ್ತು 9 ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಎಂದು ಹೇಳಿದ್ದಾರೆ. ಕುಲ್ಗಾಮ್‌ನ ಡಿ.ಎಚ್. ಪೋರಾ ಪ್ರದೇಶದಲ್ಲಿ ಶುಕ್ರವಾರ ರಾತ್ರಿ ಕಾರ್ಯಾಚರಣೆ ನಡೆಸುವಾಗ ಈ ಅಪಘಾತ ಸಂಭವಿಸಿದೆ ಎಂದು ಸೇನೆಯ ಶ್ರೀನಗರ ಮೂಲದ ಚಿನಾರ್ ಕಾರ್ಪ್ಸ್ ತಿಳಿಸಿದೆ. ಅಪಘಾತದಲ್ಲಿ ಒಬ್ಬ ಸಿಪಾಯಿ ತನ್ನ ಪ್ರಾಣ ಕಳೆದುಕೊಂಡಿದ್ದಾರೆ. ಇನ್ನೂ ಕೆಲವು ಸೈನಿಕರು ಗಾಯಗೊಂಡಿದ್ದು, ಅವರನ್ನು ವೈದ್ಯಕೀಯ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಎಲ್ಲಾ ಸೈನಿಕರ ಆರೋಗ್ಯ ಸ್ಥಿರವಾಗಿದೆ ಚಿನಾರ್ ಕಾರ್ಪ್ಸ್ ಹೇಳಿದೆ.

ಕಾರ್ಮಿಕರನ್ನು ಹತ್ತಿಕ್ಕಲು ಕೇಂದ್ರ ಕಾಯ್ದೆ ರೂಪಿಸುತ್ತಿದೆ

4ನೇ ರಾಜ್ಯಮಟ್ಟದ ಕಾರ್ಮಿಕ ಸಮ್ಮೇಳನದಲ್ಲಿ ಎಐಯುಟಿಯುಸಿ ರಾಷ್ಟ್ರೀಯ ಅಧ್ಯಕ್ಷ ಕೆ.ರಾಧಾಕೃಷ್ಣ ಆರೋಪ

ಮೈಸೂರು,ಅ.26(ಎಂಟಿವೈ)– ಕೇಂದ್ರ ಸರ್ಕಾರ ಉದ್ದೇಶಪೂರ್ವಕವಾಗಿಯೇ ಕಾರ್ಮಿಕರನ್ನು ಹತ್ತಿಕ್ಕಲು ಕಾಯ್ದೆ ರೂಪಿಸುತ್ತಿದ್ದು, ಕಾರ್ಮಿಕರ ಹಿತಕಾಯಲು ಕೇಂದ್ರ ಸರ್ಕಾರ ಇನ್ನಾದರೂ ಮುಂದಾಗದಿದ್ದರೆ ಕಾರ್ಮಿಕ ವಲಯದಲ್ಲಿ ಅಸಮಾಧಾನ ಸ್ಫೋಟವಾಗಿ ಉಗ್ರ ಹೋರಾಟ ನಡೆಯುವ ಕಾಲ ಸನ್ನಿಹಿತವಾಗುತ್ತಿದೆ ಎಂದು ಎಐಯುಟಿಯುಸಿ ಅಖಿಲ ಭಾರತ ಅಧ್ಯಕ್ಷ ಕೆ.ರಾಧಾಕೃಷ್ಣ ಕಿಡಿಕಾರಿದ್ದಾರೆ.

ಮೈಸೂರಿನ ಪುರಭವನದ ಆವರಣದಲ್ಲಿ ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್(ಎಐಯುಟಿಯುಸಿ) ವತಿಯಿಂದ ಆಯೋಜಿಸಿರುವ 4ನೇ ರಾಜ್ಯಮಟ್ಟದ ಕಾರ್ಮಿಕ ಸಮ್ಮೇಳನವನ್ನು ಉದ್ಘಾಟಿಸಿದ ಮಾತನಾಡಿದ ಅವರು, ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಖಾಯಂ ನೌಕರರನ್ನು ಖಾಯಂ ಆಗಿ ಮಾಯ ಮಾಡಲು ಏನೇನೂ ಮಾಡಬೇಕೋ, ಅದೆಲ್ಲವನ್ನು ಮಾಡುತ್ತಿದೆ. ದೇಶದಲ್ಲಿ ನಿರುದ್ಯೋಗ ಸಮಸ್ಯೆ ಉಲ್ಬಣಗೊಂಡಿದೆ ಎಂದರು.

ಕಳೆದ ಐದು ವರ್ಷಗಳಿಂದ ಆಗರ್ಭ ಶ್ರೀಮಂತರ ಸಂಖ್ಯೆ ಏರುತ್ತಲೇ ಇದೆ. ಸಂಪತ್ತು ದುಪಟ್ಟು ಆಗುತ್ತಿದೆ. ದೇಶದ 100 ಕೋಟಿಗೂ ಹೆಚ್ಚು ಜನ ಬಿಕಾರಿಗಳಾಗುತ್ತಿದ್ದಾರೆ. ಇದು ಕೇಂದ್ರ ಸರ್ಕಾರದ ಸಾಧನೆ ಎಂದು ಅವರು ಕಿಡಿಕಾರಿದರು.



ಪುರಭವನದ ಆವರಣದಲ್ಲಿ ನಡೆದ ಕಾರ್ಮಿಕ ಸಮ್ಮೇಳನದಲ್ಲಿ ಎಐಯುಟಿಯುಸಿ ರಾಜ್ಯ ಕಾರ್ಯದರ್ಶಿ ಕೆ.ಸೋಮಶೇಖರ್ ಮಾತನಾಡುತ್ತಿರುವುದು.

ಈ ಹಿಂದೆ ಇದ್ದ 44 ಕಾರ್ಮಿಕ ಕಾನೂನಿನಲ್ಲಿ ಈಗ ಕೇವಲ 29 ಕಾನೂನು ಮಾತ್ರ ಉಳಿದಿವೆ. ಇದನ್ನು 4 ಕಾರ್ಮಿಕ ಸಂಹಿತೆ ಎಂದು ಕೇಂದ್ರ ನಿಯಮ ರೂಪಿಸಲು ಮುಂದಾಗಿದೆ. ಗಿಗ್ ಫ್ಲಾಟ್ ಫಾರಂನ ಕಾರ್ಮಿಕರಾದ ಜ್ಯೊಮೆಟೊ, ಸ್ವಿಗ್ಗಿ ಇನ್ನಿತರ ಕಂಪನಿಗಳಲ್ಲಿ ನೌಕರರನ್ನು ಪಾಲುದಾರರು ಎಂದು ಹೇಳಿ ವಂಚಿಸಿದರು. ಇನ್ನೂ ಅನೇಕ ಕಂಪನಿಗಳಲ್ಲಿ ಕಾರ್ಮಿಕರಿಗೆ ಮಾನ್ಯತೆಯೇ ಇಲ್ಲ ಎಂದು ಹೇಳಿದರು.

ಎಐಯುಟಿಯುಸಿಯ ರಾಜ್ಯಾಧ್ಯಕ್ಷ ಕೆ.ಸೋಮಶೇಖರ್ ಮಾತನಾಡಿ, ಕಾರ್ಮಿಕರ ಹಕ್ಕುಗಳನ್ನು ಕಸಿಯಲು ಮೈಸೂರಿನಿಂದಲೇ ಪ್ರಯತ್ನ ಆರಂಭವಾಗಿದೆ. ಕಾರ್ಮಿಕರನ್ನು ಶೋಷಣೆ ಮಾಡುವಲ್ಲಿ ಬಿಜೆಪಿ–ಕಾಂಗ್ರೆಸ್‌ಗೂ ಯಾವುದೇ ವ್ಯತ್ಯಾಸವಿಲ್ಲ. ಆಶಾ ಕಾರ್ಯಕರ್ತೆಯರಿಗೆ ಹದಿನೈದು ಸಾವಿರ ವೇತನಕ್ಕಾಗಿ ಬೆಂಗಳೂರಿನಲ್ಲಿ ಹೋರಾಟ ನಡೆಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತು ಕೊಟ್ಟಿದ್ದು, ತಮ್ಮ ಮಾತನ್ನು ಉಳಿಸಿಕೊಳ್ಳಬೇಕು. ಇಲ್ಲವಾದರೆ ಕಾರ್ಮಿಕರು ತಿರುಗಿ ಬೀಳಲಿದ್ದಾರೆ ಎಂದು ಎಚ್ಚರಿಸಿದರು.

ಕಾರ್ಮಿಕ ಸಮ್ಮೇಳನದಲ್ಲಿ ಎಐಯುಟಿಯುಸಿಯ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಶಂಕರ್ ದಾಸಗುಪ್ತಾ, ರಾಜ್ಯ ಕಾರ್ಯದರ್ಶಿಗಳಾದ ಚಂದ್ರಶೇಖರ್ ಮೇಟಿ, ಕೆ.ಸೋಮಶೇಖರ್ ಯಾದಗಿರಿ, ತಮಿಳುನಾಡಿನ ಕಾರ್ಮಿಕ ಮುಖಂಡ ಶಿವಕುಮಾರ, ಸ್ವಾಗತ ಸಮಿತಿ ಅಧ್ಯಕ್ಷ ಉಗ್ರನರಸಿಂಹೇಗೌಡ, ನೈರುತ್ಯ ರೈಲ್ವೆ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ತಾಯಿದಾಸ್, ಆಶಾ ಕಾರ್ಯಕರ್ತೆಯರ ಸಂಘದ ರಾಜ್ಯ ಕಾರ್ಯದರ್ಶಿ ಡಿ.ನಾಗಲಕ್ಷ್ಮೀ, ನೃಪತುಂಗ ಶಾಲೆಯ ಸವಿತಾ ಪ.ಮಲ್ಲೇಶ್, ಸಕ್ಕರೆ ಕಾರ್ಖಾನೆ ಕಾರ್ಮಿಕರ ಮುಖಂಡ ಬಸವನಗೌಡ ಪಾಟೀಲ್, ಅಂಗನವಾಡಿ ಯೂನಿಯನ್ ರಾಜ್ಯ ಅಧ್ಯಕ್ಷೆ ಎಂ.ಉಮಾದೇವಿ, ಬೊಕ್ಕಳ್ಳಿ ನಂಜುಂಡಸ್ವಾಮಿ, ಎಸ್‌ಯುಸಿಐ ಜಿಲ್ಲಾ ಕಾರ್ಯದರ್ಶಿ ಬಿ.ರವಿ, ಪಿ.ಎಸ್.ಸಂಧ್ಯಾ, ಮುದ್ದುಕೃಷ್ಣ, ಚಂದ್ರಕಲಾ, ಚಾಮರಾಜನಗರ ಲೋಕಸಭಾ ಕ್ಷೇತ್ರದ ಪರಾಜಿತ ಅಭ್ಯರ್ಥಿ ಸುಮ, ಆಕಾಶ್ ಇನ್ನಿತರರು ಹಾಜರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಚಾಮರಾಜ ಕ್ಷೇತ್ರದಲ್ಲಿ 5 ಕೋಟಿ ರೂ. ಅಭಿವೃದ್ಧಿ ಕಾಮಗಾರಿಗೆ ಚಾಲನೆ

ರಸ್ತೆ, ಚರಂಡಿ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಆದ್ಯತೆ



ಮೈಸೂರಿನ ಲಷ್ಕರ್ ಮೊಹಲ್ಲಾದ ಗುಜರಿ ಆವರಣದಲ್ಲಿ 1.90 ಕೋಟಿ ರೂ. ವೆಚ್ಚದಲ್ಲಿ ರಸ್ತೆ ನಿರ್ಮಾಣ, ಚರಂಡಿ ಕಾಮಗಾರಿಗೆ ಶಾಸಕರಾದ ತನ್ವೀರ್ ಸೇಠ್ ಮತ್ತು ಕೆ.ಹರೀಶ್‌ಗೌಡ ಗುದ್ದಲಿ ಪೂಜೆ ನೆರವೇರಿಸಿದರು.

ಮೈಸೂರು, ಅ.26(ಜಿಎ)–ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ 5 ಕೋಟಿ ರೂ. ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಶನಿವಾರ ಚಾಲನೆ ನೀಡಿದರು.

ನಗರದ ಲಷ್ಕರ್ ಮೊಹಲ್ಲಾದ ಗುಜರಿ ಆವರಣದಲ್ಲಿ 1.90 ಕೋಟಿ ರೂ. ವೆಚ್ಚದಲ್ಲಿ ರಸ್ತೆ ನಿರ್ಮಾಣ, ಚರಂಡಿ ಕಾಮಗಾರಿಗೆ ಶಾಸಕರಾದ ತನ್ವೀರ್ ಸೇಠ್ ಮತ್ತು ಕೆ.ಹರೀಶ್‌ಗೌಡ ಗುದ್ದಲಿ ಪೂಜೆ ನೆರವೇರಿಸಿದರು. ನಂತರ 1 ಕೋಟಿ ರೂ. ವೆಚ್ಚದ ಮೇಟಗಳ್ಳಿಯ ಅಂಬೇಡ್ಕರ್ ಜ್ಞಾನಲೋಕದ ಬಳಿಯ ಅಲ್ಪಸಂಖ್ಯಾತರ ಬಡಾವಣೆಯ 1,2,3,4,7,8,9 ಮತ್ತು ಕರ ಕುಶಲನಗರದ 22 ಕ್ರಾಸ್ ಹಾಗೂ ಉದ್ಭವ ನವಶಕ್ತಿ ದುರ್ಗ ಪರಮೇಶ್ವರಿ ದೇವಸ್ಥಾನದ ರಸ್ತೆ ಅಭಿವೃದ್ಧಿಗೆ ಚಾಲನೆ ನೀಡಿದರು.

75 ಲಕ್ಷ ರೂ. ವೆಚ್ಚದಲ್ಲಿ ಕೈಲಾಸಪುರಂ ಜಗಜೀವನ್‌ರಾಮ್ ಉದ್ಯಾನವನ ಸುತ್ತಲಿನ ರಸ್ತೆಗಳ ಅಭಿವೃದ್ಧಿ, ವಾರ್ಡ್ ನಂ.25ರ ಎಂ.ಕೆ.ಡಿ.ಕೆ. ರಸ್ತೆ, ಸಾಡೆ ರಸ್ತೆಯ 10ನೇ ಕ್ರಾಸ್, ಹಮದರ್ದ್ ಕ್ಲಿನಿಕ್ ರಸ್ತೆ, ಅಂಜುಮಾನ್ ಲೈಬ್ರರಿ ರಸ್ತೆ, ಮುಸ್ತಫಾ ಉನಾನಿ ಫಾರ್ಮಸಿ ರಸ್ತೆಗಳನ್ನು 60 ಲಕ್ಷ ರೂ. ವೆಚ್ಚದಲ್ಲಿ ಹಾಗೂ ವಾರ್ಡ್ ನಂ.26ರ ಸಾಡೆ ರಸ್ತೆಯ ದಕ್ಷಿಣ ಕ್ರಾಸ್, ಕೆ.ಆರ್.ಪಾರ್ಕ್ ಕ್ರಾಸ್ ರಸ್ತೆ, ಸಹಿ ಮಸಜಿದ್ ರಸ್ತೆ, ರೈಲ್ವೆ ಗಲ್ಲಿ, ಸುನ್ನಿ ಚೌಕ ಶಾಲೆ ಹಿಂಭಾಗ ಹಾಗೂ ಕೆ.ಟಿ.ಸ್ಟ್ರೀಟ್ ಹಿಂಭಾಗದ ರಸ್ತೆಗಳನ್ನು 75 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಚಾಲನೆ ನೀಡಿದರು.

ಗುಜರಿ ಅಭಿವೃದ್ಧಿಗೆ ಚಾಲನೆ ನೀಡಿ ಮಾಧ್ಯಮಗಳೊಂದಿಗೆ ಮಾತನಾಡಿದ ಶಾಸಕ ಕೆ.ಹರೀಶ್‌ಗೌಡ, ಗುಜರಿಯ ವ್ಯಾಪಾರಸ್ಥರು ಹಾಗೂ ಶಾಸಕರಾದ ತನ್ವೀರ್ ಸೇಠ್ ಅವರ ಮನವಿಯಂತೆ ಇಲ್ಲಿನ ರಸ್ತೆ, ಚರಂಡಿ ನಿರ್ಮಾಣವನ್ನು 2 ಕೋಟಿ ರೂ. ವಿಶೇಷ ಅನುದಾನದಲ್ಲಿ ನಿರ್ಮಿಸಲಾಗುತ್ತಿದೆ. ಗುತ್ತಿಗೆದಾರರಿಗೆ ವ್ಯಾಪಾರಸ್ಥರು ಸಹಕಾರ ನೀಡಬೇಕು. ಇಲ್ಲಿ ಮೂಲಭೂತ ಸಮಸ್ಯೆಗಳಿದ್ದು, ಮುಂದಿನ ದಿನಗಳಲ್ಲಿ ಗುಜರಿಯ ಹಿರಿಯರೊಂದಿಗೆ ಚರ್ಚಿಸಿ, ಅವಶ್ಯಕತೆಗೆ ಅನುಗುಣವಾಗಿ ಹಂತ ಹಂತವಾಗಿ ಅವುಗಳನ್ನು ಪರಿಹರಿಸಲಾಗುವುದು ಎಂದರು.

ಶಾಸಕ ತನ್ವೀರ್ ಸೇಠ್ ಮಾತನಾಡಿ, ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಹಾಗೂ ನಮ್ಮ ತಂದೆ ಅಜೀಜ್ ಸೇಠ್ ಅವರ ಪ್ರಯತ್ನದಿಂದ ಇಲ್ಲಿ ಗುಜರಿ ಸ್ಥಾಪನೆಯಾಗಿದ್ದು, 169 ಮಳಿಗೆ ಇರುವ ಈ ಸ್ಥಳಕ್ಕೆ ಯಾವುದೇ ಅಭಿವೃದ್ಧಿ ಮಾಡಲು ಕಷ್ಟವಾಗಿತ್ತು. ಆದರೆ, ಶಾಸಕ ಹರೀಶ್‌ಗೌಡ ಅವರ ಪ್ರಯತ್ನದಿಂದ 2 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಆಗುತ್ತಿರುವುದರಿಂದ ಗುಜರಿ ವರ್ತಕರು ಹಾಗೂ ನಗರದ ಜನರ ಪರವಾಗಿ ನಾನು ಧನ್ಯವಾದ ತಿಳಿಸುತ್ತೇನೆ ಎಂದರು.

ನಗರದಲ್ಲಿ ಹೇಗೆ ಕಸ ವಿಲೇವಾರಿ ಮಾಡುವುದು ಎಷ್ಟು ಕಷ್ಟವಿದೆಯೋ ಹಾಗೇ ಮರು ಬಳಕೆ ಮಾಡುವುದು ಅಷ್ಟೇ ಕಷ್ಟ, ಆದರೆ, ಗುಜರಿಯಿಂದ ಸಾಕಷ್ಟು ಕೊಡುಗೆ ಇದೆ. ಇದನ್ನು ಮತ್ತಷ್ಟು ವಿಸ್ತರಣೆ ಮಾಡಬೇಕು ಎಂದು ಆಗ್ರಹಿಸಿದರು.

ಅರಮನೆಯ ಪ್ರವೇಶ ದರ ಕುರಿತು ಪ್ರತಿಕ್ರಿಯಿಸಿ, ಭಾರತವು ಇತರೆ ರಾಷ್ಟ್ರಗಳನ್ನು ನೋಡಿ ಪ್ರವಾಸೋದ್ಯಮ ನಿಯಮಾವಳಿಗಳನ್ನು ಬದಲಾಯಿಸಿಕೊಳ್ಳಬೇಕು. ವಿದೇಶಿ ಪ್ರವಾಸಿಗರಿಗೆ ಉತ್ತಮ ಸೌಲಭ್ಯ ನೀಡಬೇಕು. ಅವರ ಭಾಷೆಯಲ್ಲಿ ಮಾಹಿತಿ ನೀಡಲು ದರ ನಿಗದಿ ಮಾಡಲಿ. ಆದರೆ, ಮೈಸೂರು ಪ್ರವಾಸಿತಾಣ ನೋಡಲು ತಾರತಮ್ಯ ಬೇಡ. ಎಲ್ಲರಿಗೂ ಸಮಾನ ದರ ನಿಗದಿಗೊಳಿಸಬೇಕು ಎಂದು ಶಾಸಕ ತನ್ವೀರ್ ಸೇಠ್ ತಿಳಿಸಿದರು.

ಸಿ.ಪಿ.ಯೋಗೇಶ್ವರ್ ಜನರ ಮನಸ್ಸು ಗೆದ್ದಿದ್ದಾರೆ

“ಚನ್ನಪಟ್ಟಣ, ಸಂಡೂರು ಹಾಗೂ ಶಿಗ್ಗಾಂವಿ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ಮೂರು ಕ್ಷೇತ್ರದಲ್ಲಿ ಅಭ್ಯರ್ಥಿಗಳಿಗೆ ಉತ್ತಮ ಪ್ರತಿಕ್ರಿಯೆ ಬಂದಿದೆ. ಮೂರು ಕ್ಷೇತ್ರಗಳು ಮುಖ್ಯವಾಗಿದ್ದು, ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸುತ್ತೇನೆ. ಕುಮಾರಸ್ವಾಮಿ ಅವರಿಂದ ತೆರವುಗೊಂಡಿರುವ ಕ್ಷೇತ್ರಕ್ಕೆ ಚುನಾವಣೆ ನಡೆಯುತ್ತಿದೆ. ಆದರೆ, ನಾನು ಈ ಹಿಂದೆ ಹೇಳಿದಂತೆ ಬಿಜೆಪಿ, ಜೆಡಿಎಸ್‌ನ ಮೈತ್ರಿಯಲ್ಲಿ ಒಬ್ಬರ ಕೈಯಲ್ಲಿ ಹಾರೆ ಇದೆ. ಮತ್ತೊಬ್ಬರ ಕೈಯ್ಯಲಿ ಗುದ್ದಲಿ ಇದ್ದು, ಅವರೇ ಹಳ್ಳ ತೊಡಿಕೊಂಡು ಬೀಳುತ್ತಾರೆ. ಕ್ಷೇತ್ರದ ಮೇಲೆ ಸಿ.ಪಿ.ಯೋಗೇಶ್ವರ್‌ಗೆ ಹಿಡಿತವಿದೆ. ಜನರ ಮನಸ್ಸು ಗೆದ್ದಿದ್ದಾರೆ. ಆದ್ದರಿಂದ ಅವರಿಗೆ ಗೆಲುವು ಸುಲಭವಾಗಲಿದೆ. **–ತನ್ವೀರ್ ಸೇಠ್, ಶಾಸಕ**

ನೂರರಷ್ಟು ಗೆಲುವು ನಮ್ಮದೇ

“ಚನ್ನಪಟ್ಟಣ, ಸಂಡೂರು ಮತ್ತು ಶಿಗ್ಗಾಂವಿ ಉಪಚುನಾವಣೆಯಲ್ಲಿ ಶೇ.100ರಷ್ಟು ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸುತ್ತಾರೆ. ಅಧಿಕಾರದಲ್ಲಿ ನಮ್ಮ ಸರ್ಕಾರ ಇದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಡಳಿತ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಂಘಟನಾ ಚತುರತೆಯಿಂದ ನಮಗೆ ಗೆಲುವು ಖಚಿತ, ಜನತೆ ಕಾಂಗ್ರೆಸ್ ಪರವಿದ್ದಾರೆ. **–ಕೆ.ಹರೀಶ್‌ಗೌಡ, ಶಾಸಕ**

ಉಚಿತ ಆರೋಗ್ಯ ತಪಾಸಣೆ ಶಿಬಿರ

ಮೈಸೂರು,ಅ.26–ವಿಶ್ವ ಆಯುರ್ವೇದ ದಿನಾಚರಣೆ ಅಂಗವಾಗಿ ದಟ್ಟಗಳ್ಳಿಯಲ್ಲಿರುವ ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರದಲ್ಲಿ ಅ.29 ಮತ್ತು 30ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಅನುಭವಿ ಆಯುರ್ವೇದ ವೈದ್ಯರೊಂದಿಗೆ ಸಮಾಲೋಚನೆ ಸೇರಿದಂತೆ ಸಮಗ್ರ ಆರೋಗ್ಯ ತಪಾಸಣೆಯನ್ನು ಉಚಿತವಾಗಿ ನೀಡಲಾಗುವುದು. ಸಾಮಾನ್ಯ ಆರೋಗ್ಯ ಪರಿಸ್ಥಿತಿಗಳನ್ನು ನಿರ್ವಹಿಸುವುದು, ಒಟ್ಟಾರೆ ಯೋಗಕ್ಷೇಮವನ್ನು ಕಾಪಾಡಿಕೊಳ್ಳುವುದು ಮತ್ತು ಆಯುರ್ವೇದ ತತ್ವಗಳ ಮೂಲಕ ಸಲಹೆ ಪಡೆಯಬಹುದು. ಈ ಸೌಲಭ್ಯಗಳ ಸದುಪ ಯೋಗವನ್ನು ಪಡೆದುಕೊಂಡು ಆರೋಗ್ಯವಂತರಾಗಿ ಸ್ವಸ್ಥ ಸಮಾಜ ನಿರ್ಮಿಸಲು ಸಹಕರಿಸುವಂತೆ ಕೋರಲಾಗಿದೆ. ಮಾಹಿತಿಗೆ ಮೊ. +91 8277888524 / 525 / 526 /527 ಅನ್ನು ಸಂಪರ್ಕಿಸಬಹುದು.

ಪಿಎಚ್.ಡಿ ಪದವಿ



ಮೈಸೂರು,ಅ.26–ಡಾ.ಆರ್.ತಿಮ್ಮರಾಯಪ್ಪ ಅವರ ಮಾರ್ಗದರ್ಶನದಲ್ಲಿ ಜಿ. ಆನಂದ ಕುಮಾರ್ ಅವರು ವಾಣಿಜ್ಯ ಶಾಸ್ತ್ರ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮಾಜಿ ಮುಖ್ಯಮಂತಿ ಎಸ್.ಬಂಗಾರಪ್ಪ ಹುಟ್ಟುಹಬ್ಬ ಆಚರಣೆ



ಮೈಸೂರಿನ ಕಾಂಗ್ರೆಸ್ ಭವನದ ಆವರಣದಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುವ ನಾಗರಾಜ್ ಅವರನ್ನು ಸನ್ಮಾನಿಸುವ ಮೂಲಕ ಹಿಂದುಳಿದ ವರ್ಗಗಳ ನಾಯಕರೂ ಆದ ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪನವರ 92ನೇ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಈ ವೇಳೆ ನಗರ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್, ಓಬಿಸಿ ಘಟಕದ ಎಂಎಲ್ ಗೋಪಾಲ್, ಲಕ್ಷ್ಮೀನಾರಾಯಣ, ಕೇಶವ, ಆರ್ ಕೆ ರವಿ, ಹರೀಶ್ ರೆಡ್ಡಿ, ರಾಜು, ವೆಂಕಟೇಶ್ ಗುಂಡ, ಮಹೇಶ್, ಆಟೋ ವೆಂಕಟೇಶ್, ಮಹೇಂದ್ರ ಕಾಗಿನೆಲೆ, ಶಂಕರ್, ಸಂತೋಷ್ ಕಿರಾಣ್, ರಾಜು ರೆಡ್ಡಿ ಇನ್ನಿತರರಿದ್ದರು.

ಬಿಜೆಪಿ ಸದಸ್ಯತ್ವ ಅಭಿಯಾನ



ಚಾಮುಂಡೇಶ್ವರಿ ಕ್ಷೇತ್ರದ ಆಲನಹಳ್ಳಿಯಲ್ಲಿ ಸದಸ್ಯತ್ವ ಅಭಿಯಾನವನ್ನು ಮಂಡಲ ಅಧ್ಯಕ್ಷ ಪೈ.ಟಿ.ರವಿ ಲಕ್ಷ್ಮೀಪುರ ನೇತೃತ್ವದಲ್ಲಿ ನಡೆಸಲಾಯಿತು. ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಆಲನಹಳ್ಳಿ ಮಹದೇವಸ್ವಾಮಿ, ಮಹಿಳಾ ಮೋರ್ಚಾ ಅಧ್ಯಕ್ಷೆ ಸವಿತಾಗೌಡ, ಶಾಲಿನಿ , ಶ್ರುತಿ, ಖುಷಿ, ಇಂದಿರಾ, ರೇಖಾ, ಬಸವರಾಜು, ಗ್ರಾಮಸ್ಥರು ಹಾಜರಿದ್ದರು.

ಕಲೆಮನೆ ಕಲಾಶ್ರೀ ವಾರ್ಷಿಕ ಪ್ರಶಸ್ತಿ ಪ್ರದಾನ



ಮೈಸೂರಿನ ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರದ 45ನೇ ನಿರಂತರ ಕಲೆಮನೆ ಉತ್ಸವದಲ್ಲಿ ಸಾಧಕರಾದ ಎಸ್.ಎಂ.ಶರತ್, ಆನಂದರಾಜೇ ಅರಸ್, ಮಾರುತಿ ಬಡಿಗೇರ್, ಅಂಶಿ ಪ್ರಸನ್ನಕುಮಾರ್, ಪದ್ಮಶ್ರೀ, ಕೆ.ಎಸ್.ಶೈಲಾ ಅವರಿಗೆ ಕಲೆಮನೆ ಕಲಾಶ್ರೀ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ವಿದ್ವಾನ್ ನಂಜುಂಡಸ್ವಾಮಿ, ಡಾ.ಕೆ.ಕುಮಾರ್, ಡಾ.ಜಿ.ಮಾಲತಿ, ಕೆ.ಎಂ.ಲೇಖಾ, ಕೆ.ಎಂ.ನಿಧಿ ಇದ್ದರು.

ಗ್ರಂಥಾಲಯಕ್ಕೆ ಆರ್ಥಿಕ ನೆರವು



ಮೈಸೂರಿನ ಉದಯಗಿರಿಯಲ್ಲಿರುವ ಸೈಯ್ಯದ್ ಇಸಾಕ್ ಅವರ ಗ್ರಂಥಾಲಯ ನಿರ್ವಹಣೆಗೆ ಆರ್ಥಿಕ ಸಂಕಷ್ಟ ಉಂಟಾಗಿದ್ದ ಹಿನ್ನೆಲೆಯಲ್ಲಿ ಜೀವಧಾರ ರಕ್ತನಿಧಿ ಕೇಂದ್ರದಿಂದ ಆರ್ಥಿಕ ನೆರವು ನೀಡಲಾಯಿತು. ಈ ವೇಳೆ ಕೇಂದ್ರ ನಿರ್ದೇಶಕ ಗಿರೀಶ್, ಜಿ.ರಾಘವೇಂದ್ರ, ವಿಕ್ರಂ ಅಯ್ಯಂಗಾರ್, ಮಹಾನ್ ಶ್ರೇಯಸ್ ಇದ್ದರು.

ಮೈಸೂರಲ್ಲಿ ಗ್ರಾಮ ಆಡಳಿತ ಅಧಿಕಾರಿ ಹುದ್ದೆಗೆ ಲಿಖಿತ ಪರೀಕ್ಷೆ ಆರಂಭ

ಮೈಸೂರು, ಅ.26(ಆರ್‌ಕೆ)– ಮೈಸೂರಿನ 57 ಕೇಂದ್ರಗಳಲ್ಲಿ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮ ಆಡಳಿತ ಅಧಿಕಾರಿ ಹುದ್ದೆಗಳ ಭರ್ತಿಗಾಗಿ ಇಂದಿನಿಂದ ಎರಡು ದಿನಗಳ ಲಿಖಿತ ಪರೀಕ್ಷೆಗಳು ಆರಂಭವಾಗಿವೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಇಂದು ಮಧ್ಯಾಹ್ನ 2.30ರಿಂದ ಸಂಜೆ 4.30 ಗಂಟೆವರೆಗೆ ನಡೆಸಿದ ಕನ್ನಡ ಭಾಷೆ ಪರೀಕ್ಷೆಗೆ 3,684 ಮಂದಿ ಹಾಜರಾಗಿದ್ದರು. ನಾಳೆ (ಭಾನುವಾರ) ಬೆಳಗ್ಗೆ 10.30ರಿಂದ ಮಧ್ಯಾಹ್ನ 12.30 ಮತ್ತು ಮಧ್ಯಾಹ್ನ 2.30ರಿಂದ ಸಂಜೆ 4.30 ಗಂಟೆವರೆಗೆ ನಡೆಯಲಿರುವ ಪರೀಕ್ಷೆಗಳಿಗೆ ಒಟ್ಟು 23,406 ಮಂದಿ ನೋಂದಾಯಿಸಿಕೊಂಡಿದ್ದಾರೆ.

ಡಿ.ಬನುಮಯ್ಯ, ಟೆರೇಷಿಯನ್, ಮಹಾರಾಜ, ಮಾತೃ ಮಂಡಳಿ, ದೇವರಾಜ, ಶಾರದಾ ವಿಲಾಸ, ಸೆಂಟ್ ಫಿಲೋಮಿನಾ, ಮರಿಮಲ್ಲಪ್ಪ, ವಿದ್ಯಾವರ್ಧಕ ಸೇರಿದಂತೆ ಸರ್ಕಾರಿ ಮತ್ತು ಖಾಸಗಿ ಪಿಯು ಕಾಲೇಜುಗಳ 57 ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯುತ್ತಿದ್ದು, ಕೇಂದ್ರಗಳ ಸುತ್ತ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023ರ ಕಲಂ 163 ರೀತ್ಯಾ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆಯಲ್ಲದೆ, ಜೆರಾಕ್ಸ್ ಅಂಗಡಿ ಬಂದ್ ಮಾಡುವಂತೆ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಆದೇಶ ಹೊರಡಿಸಿದ್ದಾರೆ.

ಎಲ್ಲಾ ಪರೀಕ್ಷಾ ಕೇಂದ್ರಗಳ ಬಳಿ ಆಯಾ ಠಾಣೆಯ ಪೊಲೀಸರನ್ನು ಭದ್ರತೆಗಾಗಿ ನಿಯೋಜಿಸಲಾಗಿದೆ. ಸ್ಥಳದಲ್ಲಿ ಕುಡಿಯುವ ನೀರು, ಸಿಸಿ ಕ್ಯಾಮರಾ ಕಣ್ಗಾವಲು ಸೇರಿ ಸೌಲಭ್ಯ ಹಾಗೂ ಅಕ್ರಮ ತಡೆಯಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

ಎನ್‌ಡಿಎ ಅಭ್ಯರ್ಥಿ ನಿಖಿಲ್ ನಾಮಪತ್ರ ವೇಳೆ ಪಾಲ್ಗೊಂಡವರಿಗೆ ನೋಟಿಸ್

ಆಡಳಿತಾರೂಢ ಕಾಂಗ್ರೆಸ್‌ನಿಂದ ದಬ್ಬಾಳಿಕೆ

ಬೆಂಗಳೂರು, ಅ.26(ಕೆಎಂಶಿ)– ವಿಧಾನಸಭೆ ಉಪ ಚುನಾವಣೆಯಲ್ಲಿ ಆಡಳಿತಾರೂಢ ಕಾಂಗ್ರೆಸ್ ವಿರೋಧ ಪಕ್ಷಗಳ ಮೇಲೆ ದಬ್ಬಾಳಿಕೆ ನಡೆಸುತ್ತಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆರೋಪ ಮಾಡಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ಚನ್ನಪಟ್ಟಣದಲ್ಲಿ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ನಾಮಪತ್ರ ಸಲ್ಲಿಸಿದ ಸಂದರ್ಭದಲ್ಲಿ ಕ್ಷೇತ್ರದ ಕಾರ್ಯಕರ್ತರು, ಸಾರ್ವಜನಿಕರು, ಮೈತ್ರಿಕೂಟದ ನಾಯಕರು ದೊಡ್ಡ ಪ್ರಮಾಣದಲ್ಲಿ ಸೇರಿದ್ದರು. ಇದು ಐತಿಹಾಸಿಕ ಸಭೆಯಾಗಿದ್ದು, ಕಾಂಗ್ರೆಸ್ ನಾಯಕರ ಕಣ್ಣು ಕುಕ್ಕಿದೆ ಎಂದರು.

ರಾಜ್ಯ ಸರ್ಕಾರ ದಬ್ಬಾಳಿಕೆ ನಡೆಸುತ್ತಿದೆ. ನಿಖಿಲ್ ನಾಮಪತ್ರ ಸಲ್ಲಿಕೆ ನಂತರ ನೋಟೀಸ್ ಕೊಟ್ಟಿದ್ದಾರೆ. ರೋಡ್ ಶೋಗೆ ಬಂದವರ ಮೇಲೆ ಕೇಸ್ ಹಾಕಿ ಚುನಾವಣೆ ನಡೆಸಲು ಹೊರಟಿದ್ದಾರೆ. ನಮ್ಮ ಪಕ್ಷದ ಅಧ್ಯಕ್ಷರಿಗೆ ನೋಟೀಸ್ ಕೊಟ್ಟಿದ್ದಾರೆ. ಇದಕ್ಕೆಲ್ಲಾ ನಾವು ಹೆದರುವ ಪ್ರಶ್ನೆ ಇಲ್ಲ. ಜನರ ಬಳಿ ನಾವು ಮತ ಕೇಳುತ್ತೇವೆ, ಅವರೇ ತೀರ್ಪು ಕೊಡುತ್ತಾರೆ ಎಂದು ಗುಡುಗಿದರು.

ಈ ಕಾರ್ಯಕ್ರಮಕ್ಕೆ ಬಂದ ವಾಹನಗಳಿಗೆ ನೋಟೀಸ್ ನೀಡಲಾಗಿದೆ, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಚನ್ನಪಟ್ಟಣಕ್ಕೆ ಬಂದಿದ್ದರಲ್ಲ, ಅವರ ಸಭೆಗಳಿಗೆ ಬಂದ ಜನರಿಗೆ ವಾಹನದ ವ್ಯವಸ್ಥೆ ಮಾಡಿರಲಿಲ್ಲವೇ ಎಂದು ಖಾರವಾಗಿ ಪ್ರಶ್ನಿಸಿದರು. ಶನಿವಾರ ನಮ್ಮ ಕಾರ್ಯಕ್ರಮಕ್ಕೆ ಬಂದವರ ವಿಡಿಯೊ ಮಾಡಿ, ಅಧಿಕಾರಿಗಳಿಗೆ ಹೇಳಿ, ಕೇಸ್ ಹಾಕಿಸಿ, ಯಾವ ಚುನಾವಣೆ ನಡೆಸಲು ಹೊರಟಿದ್ದಾರೆ. ಸರ್ಕಾರ ಅಧಿಕಾರ ದುರುಪಯೋಗ ಮಾಡುತ್ತಿದೆ. ಇದೆಲ್ಲವನ್ನೂ ನಾವು ಮೊದಲೇ ನಿರೀಕ್ಷೆ ಮಾಡಿದ್ದೆವು.



ಚನ್ನಪಟ್ಟಣ, ಸಂಡೂರು, ಶಿಗ್ಗಾಂವಿ ಸೇರಿದಂತೆ ಮೂರೂ ಕ್ಷೇತ್ರಗಳಲ್ಲೂ ನಮ್ಮ ಅಭ್ಯರ್ಥಿಗಳು ದೊಡ್ಡ ಅಂತರದಲ್ಲಿ ಗೆಲುವು ಸಾಧಿಸುತ್ತಾರೆ. ಮೂರೂ ಕ್ಷೇತ್ರ ಗೆದ್ದಾಗಿದೆ ಎಂದು ಮುಖ್ಯಮಂತ್ರಿ ಹೇಳುತ್ತಿದ್ದಾರೆ. ಕುಮಾರಸ್ವಾಮಿ ಅವರ ಭಾವನಾತ್ಮಕ ಮಾತು ಮತ್ತು ಕಣ್ಣೀರು ಜನರಿಗೆ ಬೇಸರವಾಗಿ ಹೋಗಿದೆ ಎಂದಿದ್ದಾರೆ, ಪಾಪ.., ಇವರು ಜನರ ಮುಂದೆ ಕಣ್ಣೀರೇ ಹಾಕಿಲ್ಲವೇ. ಹೌದು, ನಾನು ಜನರ ಕಷ್ಟ ನೋಡಿ ಕಣ್ಣೀರು ಹಾಕ್ತಿದ್ದೇನೆ. ಇವರು ಅಧಿಕಾರ, ಹಣದ ದುರ್ಬಳಕೆಯಿಂದ ಗೆದ್ದಾಗಿದೆ ಎಂದು ಬೀಗುತ್ತಿದ್ದಾರೆ, ಇವರಿಗೆ ಚನ್ನಪಟ್ಟಣದಲ್ಲಿ ನಿಲ್ಲಿಸೋಕೆ ಕಾಂಗ್ರೆಸ್‌ನಿಂದ ಒಬ್ಬ ಅಭ್ಯರ್ಥಿ ಸಿಗಲಿಲ್ಲ. ಬಿಜೆಪಿಯಿಂದ ಅಭ್ಯರ್ಥಿ ಹೈಜಾಕ್ ಮಾಡಿಕೊಂಡು ಹೋಗಿದ್ದಾರೆ. ಇಷ್ಟಾದರೂ ಕುತಂತ್ರ ಮಾಡುತ್ತಿದ್ದಾರೆ. ಎಲ್ಲವನ್ನೂ ಜನ ಗಮನಿಸುತ್ತಿದ್ದಾರೆ, ನಾನು ಯಾರ ಬಗ್ಗೆಯೂ ಟೀಕೆ ಮಾಡಲ್ಲ, ನನ್ನ ಕೆಲಸದ ಆಧಾರದಲ್ಲಿ ಮತ ಕೇಳುತ್ತೇನೆ. ಕುಮಾರಸ್ವಾಮಿ ಮಂಡ್ಯಕ್ಕೆ ಮಾತ್ರ ಸೀಮಿತರಾಗಿದ್ದಾರೆ ಎಂದಿರುವ ಮುಖ್ಯಮಂತ್ರಿ ಕಳೆದ ನಾಲ್ಕು ತಿಂಗಳ ನನ್ನ ಪ್ರವಾಸ ಕಾರ್ಯಕ್ರಮ ನೋಡಿದ್ದೀರಾ, ಇಲಾಖೆಗೆ ಸಂಬಂಧಿಸಿದಂತೆ ಹಲವು ರಾಜ್ಯಗಳಿಗೆ ಭೇಟಿ ನೀಡಿದ್ದೇನೆ.

ನಾಗಾಲ್ಯಾಂಡ್, ಅರುಣಾಚಲ ಪ್ರದೇಶ, ಅಸ್ಸಾಂ, ಛತ್ತೀಸಗಢ, ಆಂಧ್ರ ಪ್ರದೇಶ, ತೆಲಂಗಾಣ, ತಮಿಳುನಾಡಿಗೆ ಹೋಗಿದ್ದೇನೆ. ನಾನು ಎಷ್ಟು ರಾಜ್ಯಗಳಿಗೆ ಹೋಗಿದ್ದೀನಿ ಗೊತ್ತಿದೆಯಾ ಅವರಿಗೆ. ದೆಹಲಿಯಲ್ಲಿ ಸಮಯ ವ್ಯರ್ಥ ಮಾಡದೇ ಕೆಲಸ ಮಾಡುತ್ತಿದ್ದೇನೆ. ಇವರಿಂದ ನಾನು ಸರ್ಟಿಫಿಕೇಟ್ ತೆಗೆದುಕೊಳ್ಳುವ ಅಗತ್ಯ ಇಲ್ಲ. ನಾನು, ಕರ್ನಾಟಕಕ್ಕೆ ಬರಲೇಬಾರದಾ, ನನ್ನನ್ನು ಗೆಲ್ಲಿಸಿದ ಜನರ ಕಷ್ಟ ಕೇಳಲು ಬರಲೇಬಾರದಾ, ನಾನು ಕರ್ನಾಟಕಕ್ಕೆ ಬಂದರೆ ಇವರು ನಿದ್ದೆಗೆಡುತ್ತಾರೆ. ನಗರದಲ್ಲಿ ಹೆಚ್‌ಎಂಟಿ ಕಂಪನಿಗೆ ಸೇರಿದ 5 ಎಕರೆ ಭೂಮಿಯನ್ನು ರಾಜ್ಯ ಅರಣ್ಯ ಇಲಾಖೆ ವಶಕ್ಕೆ ಪಡೆದಿದೆ. ಇದರ ವಿರುದ್ಧ ಕಾನೂನು ಹೋರಾಟ ಮಾಡಲಾಗುವುದು. ರಾಜ್ಯ ಸರ್ಕಾರಕ್ಕೆ ಹಿನ್ನಡೆ ಆಗುವುದು ಖಚಿತ.

ಶ್ರೀನಿವಾಸಪುರದಲ್ಲಿ ಮಾಜಿ ಸ್ಪೀಕರ್ ಒಬ್ಬರು ನೂರಾರು ಎಕರೆ ಅರಣ್ಯ ಭೂಮಿ ಲೂಟಿ ಹೊಡೆದಿದ್ದಾರೆ, ಮೊದಲು ಅದರ ಬಗ್ಗೆ ಸಚಿವ ಈಶ್ವರ್ ಖಂಡ್ರೆ ಕ್ರಮ ಕೈಗೊಳ್ಳಲಿ. ನ್ಯಾಯಾಲಯ ಕೊಟ್ಟಿರುವ ತೀರ್ಪನ್ನೇ ಕುರ್ಚಿ ಕೆಳಗೆ ಹಾಕಿಕೊಂಡು ಕುಳಿತಿದ್ದಾರೆ, ಎಷ್ಟು ಎಕರೆ ಲೂಟಿ ಆಗಿದೆಯೋ ಅಲ್ಲಿ ನೋಡಲಿ, ಹೆಚ್‌ಎಂಟಿಯ 5 ಎಕರೆಗೆ ಬಲವಂತವಾಗಿ ಬೇಲಿ ಹಾಕಿದ್ದಾರೆ. ಕೋರ್ಟ್ ಆದೇಶ ಗಳಿಗೆ ಹೆಚ್‌ಎಂಟಿ ಹಾಗೂ ಅಧಿಕಾರಿಗಳು ತಲೆ ಬಾಗಬೇಕಾಗುತ್ತದೆ ಎಂದರು.

ಕರೋಕೆ ಗಾಯನ ಪ್ರತಿಭಾ ಶೋಧ ಸ್ಪರ್ಧೆ

ಮೈಸೂರು,ಅ.26(ಎಂಟಿವೈ)– ಮೈಸೂರು ಜಿಲ್ಲೆಯ ವಿವಿಧೆಡೆ ಕುಹೂ ಕುಹೂ ಸಂಸ್ಥೆ ವತಿಯಿಂದ 6 ದಿನಗಳ ಕಾಲಗಳ 'ಕುಹೂ ಕುಹೂ ಕರೋಕೆ ಗಾಯನ ಪ್ರತಿಭಾ ಶೋಧ ಸ್ಪರ್ಧೆ' ಆಯೋಜಿಸಲಾಗಿದೆ ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗಾಯನ ಕ್ಷೇತ್ರದಲ್ಲಿ ಹೊಸ ಪ್ರತಿಭೆಗಳನ್ನು ಗುರುತಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ನಡೆಸಲಾಗುತ್ತಿದ್ದು, ನ.9ರಂದು ಮುಕ್ತ ವಿವಿ ಗಂಗಾ ಸಭಾಂಗಣ, ನ.17ರಂದು ಪಿರಿಯಾಪಟ್ಟಣದ ದೇವರಾಜ ಅರಸು ಕಲಾಭವನದಲ್ಲಿ, ನ.23ರಂದು ಹುಣಸೂರಿನ ಆರ್ಯ ವೈಶ್ಯ ಕಲ್ಯಾಣ ಮಂಟಪದಲ್ಲಿ, ನ.30ರಂದು ಮುಕ್ತ ವಿವಿ ಗಂಗಾ ಸಭಾಂಗಣ, ಡಿ.7ರಂದು ಹಾಗೂ ಡಿ.14ರಂದು ಮುಕ್ತ ವಿವಿ ಗಂಗಾ ಸಭಾಂಗಣದಲ್ಲಿ ಕನ್ನಡ ಕರೋಕೆ ಗಾಯನ ಪ್ರತಿಭಾ ಶೋಧ ಸ್ಪರ್ಧೆ ನಡೆಯಲಿದೆ ಎಂದರು.

ಡಿ.15ರಂದು ಮಧ್ಯಾಹ್ನ 3.30ಕ್ಕೆ ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಗ್ರ್ಯಾಂಡ್ ಫಿನಾಲೆ ನಡೆಯಲಿದೆ. ಸ್ಪರ್ಧಿಗಳಿಗೆ 10 ಕರೋಕೆ ಟ್ರ್ಯಾಕ್ ಉಚಿತವಾಗಿ ನೀಡಲಾಗುವುದು. ಮಾಹಿತಿಗೆ ಮೊ. 9448436 388, 9380715414 ಸಂಪರ್ಕಿಸಬಹುದು. ವಿಜೇತರಿಗೆ 'ಮೈಸೂರು ಕೋಗಿಲೆ ಪುನೀತ್ ರಾಜ್‌ಕುಮಾರ್ ಪ್ರಶಸ್ತಿ' ಪ್ರದಾನ ಮಾಡಲಾಗುವುದು ಎಂದರು. ಗೋಷ್ಠಿಯಲ್ಲಿ ನಿರ್ದೇಶಕ ಸುರೇಶ್‌ಬಾಬು, ಸುಮಾ ರಾಜ್‌ಕುಮಾರ್, ಮಂಜುನಾಥ್, ರವಿ, ವಸಂತ, ಫಾಲಾಕ್ಷ ಗೌಡ ಇನ್ನಿತರರು ಇದ್ದರು.

ಇಂದು ಮೈಸೂರಿನಲ್ಲಿ ಸಾಂಸ್ಕೃತಿಕ ಕಲಾ ಸಂಭ್ರಮ; ಪ್ರಶಸ್ತಿ ಪ್ರದಾನ ಸಮಾರಂಭ

ಮೈಸೂರು, ಅ.26– ಕುವೆಂಪು ಕಲಾನಿಕೇತನ ಸಂಸ್ಥೆ ಮತ್ತು ಸ್ನೇಹ ಶ್ರೀರಕ್ಷಾ ಸಂಗೀತ ನೃತ್ಯ ಸಾಂಸ್ಕೃತಿಕ ಅಕಾ ಡೆಮಿ ವತಿಯಿಂದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 141ನೆಯ ಜಯಂತಿ ಪ್ರಯುಕ್ತ ಕರ್ನಾಟಕ ಸಾಂಸ್ಕೃತಿಕ ಕಲಾ ಸಂಭ್ರಮ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವು ನಾಳೆ (ಅ.27) ಸಂಜೆ 5.30 ಗಂಟೆಗೆ ನಗರದ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ನಡೆಯಲಿದೆ. ಕುಂಚಿಟಿಗ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ಡಾ. ಹನುಮಂತನಾಥ ಸ್ವಾಮೀಜಿ ದಿವ್ಯ ಸಾನಿಧ್ಯದಲ್ಲಿ ನಡೆಯಲಿರುವ ಸಮಾರಂಭವನ್ನು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಉದ್ಘಾಟಿಸಲಿದ್ದು, ಶಾಸಕ ಕೆ.ಹರೀಶ್‌ಗೌಡರು ಅಧ್ಯಕ್ಷತೆ ವಹಿಸುವರು. ಕುವೆಂಪು ಕಲಾನಿಕೇತನ ಸಂಸ್ಥೆಯ ಅಧ್ಯಕ್ಷ ಡಿ.ಪ್ರಕಾಶ್ ಪ್ರಾಸ್ತಾವಿಕ ನುಡಿಗಳನ್ನಾಡುವರು ಎಂದು ಪ್ರಕಟಣೆ ತಿಳಿಸಿದೆ.

ಕನ್ನಡ ರಾಜ್ಯೋತ್ಸವ: ಎಲ್ಲಾ ಅಧಿಕಾರಿ, ಸಿಬ್ಬಂದಿ ಭಾಗವಹಿಸುವಂತೆ ಸೂಚನೆ

ಮೈಸೂರು, ಅ.26–ನವೆಂಬರ್ 1ರಂದು ಓವೆಲ್ ಮೈದಾನದಲ್ಲಿ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಆಚರಿಸಲಾಗುತ್ತಿದ್ದು, ಅಂದು ಬೆಳಿಗ್ಗೆ 9 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವರು ಧ್ವಜಾರೋಹಣ ನೆರವೇರಿಸುವರು. ಮೈಸೂರು ನಗರದಲ್ಲಿರುವ, ಎಲ್ಲಾ ಜಿಲ್ಲಾ ಮಟ್ಟದ ಸರ್ಕಾರಿ ಕಚೇರಿಯ ಅಧಿಕಾರಿಗಳು । ಸಿಬ್ಬಂದಿ (ಮಂಡಳಿ, ನಿಗಮ, ಸ್ವಾಯತ್ತ ಸಂಸ್ಥೆಗಳು ಸೇರಿದಂತೆ) ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕಾಗಿದ್ದು, ಪ್ರತಿಯೊಂದು ಜಿಲ್ಲಾ ಮಟ್ಟದ ಅಧಿಕಾರಿಯು ತಮ್ಮ ಅಧೀನ ಸಿಬ್ಬಂದಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಸೂಚನೆ / ಕಚೇರಿ ಆದೇಶ ಹೊರಡಿಸತಕ್ಕದ್ದು ಮತ್ತು ಅವರ ಹಾಜರಿಯನ್ನು ಗಮನಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಸಹಕಾರ ಶಿಕ್ಷಣ ನಿಧಿಯ ಚೆಕ್ ಹಸ್ತಾಂತರ...



ಮೈಸೂರು ಗಾಂಧಿ ಚೌಕದ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ವತಿಯಿಂದ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲಕ್ಕೆ 2023–2024ನೇ ಸಾಲಿನ ಸಹಕಾರ ಶಿಕ್ಷಣ ನಿಧಿಯ ಚೆಕ್ ಅನ್ನು ಬ್ಯಾಂಕ್‌ನ ಅಧ್ಯಕ್ಷೆ ಪಿ.ರಾಜೇಶ್ವರಿ ಹಾಗೂ ಉಪಾಧ್ಯಕ್ಷರಾದ ಪಿ.ಸವಿತಾ ಅವರು ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್‌ನ ಭಾನುಪ್ರಕಾಶ್ ಹಾಗೂ ಪೃಥ್ವಿ ರಾಜ್ ಅವರಿಗೆ ಹಸ್ತಾಂತರಿಸಿದರು. ನಿರ್ದೇಶಕರಾದ ಆರ್.ರವಿಕುಮಾರ್ (ರಾಜಕೀಯ), ಜೆ.ಯೋಗೇಶ್, ಎಸ್.ಅರವಿಂದ, ಪಡುವಾರಹಳ್ಳಿಯ ಎಂ.ರಾಮಕೃಷ್ಣ, ಸಿ.ರೇವಣ್ಣ, ಸಿ.ಎಸ್.ರಾಮಕೃಷ್ಣಯ್ಯ, ಸಿಇಓ ಹರ್ಷಿತ್‌ಗೌಡ ಉಪಸ್ಥಿತರಿದ್ದರು.

ಹೆಣ್ಣುಭ್ರೂಣ ಹತ್ಯೆ ತಡೆಗೆ ಕಾನೂನು ಮತ್ತಷ್ಟು ಬಿಗಿಯಾಗಬೇಕು

ಮಹಾಜನ ಕಾನೂನು ಕಾಲೇಜಿನಲ್ಲಿ ಅಭಿವಿನ್ಯಾಸ ಕಾರ್ಯಕ್ರಮದಲ್ಲಿ ನ್ಯಾಯಾಧೀಶ ಪಿ.ಜೆ. ಸೋಮಶೇಖರ್ ಅಭಿಮತ

ಮೈಸೂರು, ಅ. 26– ಪ್ರಸ್ತುತ ನಡೆಯುತ್ತಿರುವ ಹೆಣ್ಣು ಭ್ರೂಣ ಹತ್ಯೆ ತಡೆಗೆ ಕಾನೂನು ಮತ್ತಷ್ಟು ಬಿಗಿಯಾಗಬೇಕು ಎಂದು ಆರನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಪಿ.ಜೆ. ಸೋಮಶೇಖರ್ ಅಭಿಪ್ರಾಯಪಟ್ಟರು.

ಮಹಾಜನ ಕಾನೂನು ಕಾಲೇಜಿನಲ್ಲಿ ಶನಿವಾರ ಅಭಿವಿನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪುರುಷ ಪ್ರಧಾನ ಸಮಾಜದಲ್ಲಿ ಎಲ್ಲರಿಗೂ ಗಂಡು ಮಗುವೇ ಬೇಕು. ಒಂದೇ ಮಗು ಬೇಕು. ಹೆಣ್ಣು ಮಗು ಬೇಡ ಎಂಬ ಭಾವನೆ ಇದೆ. ಇದು ಸರಿಯಲ್ಲ ಎಂದರು.

ಭ್ರೂಣ ಪತ್ತೆ ಮಾಡುವ ಯಂತ್ರಗಳನ್ನು ಕಂಡ ಕಂಡಲ್ಲಿ ಇಟ್ಟುಕೊಂಡಿರುವುದು ಬೆಳಕಿಗೆ ಬಂದಿದೆ. ಈ ರೀತಿಯ ವರ್ತನೆಗಳನ್ನು ತಡೆಯಬೇಕಾದರೆ ಕಾನೂನು ಮತ್ತಷ್ಟು ಬಿಗಿಯಾಗಬೇಕು ಎಂದರು.

ಸಾಮಾನ್ಯ ಜ್ಞಾನದ ಮೇಲೆ ಕಾನೂನು ನಿಂತಿದೆ. ಎಲ್ಲರೂ ನುಡಿದಂತೆ ನಡೆದರೆ ಕಾನೂನಿನ ಅವಶ್ಯಕತೆ ಇರುವುದಿಲ್ಲ. ನುಡಿದಂತೆ ನಡೆಯದಿರುವುದರಿಂದಲೇ ಕಾನೂನು ಅನಿವಾರ್ಯತೆ ಉಂಟಾಗಿದೆ ಎಂದು ನ್ಯಾಯಾಧೀಶರು ಹೇಳಿದರು.

ಮೊಬೈಲ್ ಅನ್ನು ಎಷ್ಟು ಬೇಕೋ ಅಷ್ಟು ಮಾತ್ರ ಬಳಸಬೇಕು. ಹೆಚ್ಚು ಕಾಲ ಮೊಬೈಲ್‌ನಲ್ಲಿ ಮುಳುಗದೇ ಗ್ರಂಥಾಲಯಗಳಿಗೆ ಭೇಟಿ ನೀಡಬೇಕು. ಆ ಮೂಲಕ ಶಿಲ್ಪಿಯು ಕಲ್ಲಿನಿಂದ ವಿಗ್ರಹ ರೂಪಿಸುವಂತೆ ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು. ಏಳಿ, ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ ಎಂಬ ವಿವೇಕಾನಂದರ ವಾಣಿಯಂತೆ ಸಾಗಿ ಭವಿಷ್ಯ ರೂಪಿಸಿಕೊಳ್ಳಬೇಕು. ತಂದೆ– ತಾಯಿಗೆ ಗೌರವ ನೀಡಬೇಕು. ಬೇಕರಿ ಐಟಂಗಳಿಗೆ ಮಾರು ಹೋಗದೇ ಮನೆಯಲ್ಲಿ ಮಾಡುವ ಆಹಾರ ಪದಾರ್ಥಗಳನ್ನು ಸೇವಿಸಬೇಕು ಎಂದರು.



ಮೈಸೂರಿನ ಮಹಾಜನ ಕಾನೂನು ಕಾಲೇಜಿನಲ್ಲಿ ಏರ್ಪಡಿಸಿದ್ದ ಅಭಿವಿನ್ಯಾಸ ಕಾರ್ಯಕ್ರಮವನ್ನು ಆರನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಪಿ.ಜೆ.ಸೋಮಶೇಖರ್ ಉದ್ಘಾಟಿಸಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲೆ ಸೌಮ್ಯಾ ಸಹಾಯಕ ಪ್ರಾಧ್ಯಾಪಕಿಯರಾದ ರಶ್ಮಿ, ಭವ್ಯಾ ಉಪಸ್ಥಿತರಿದ್ದಾರೆ.

ಮುಖ್ಯಅತಿಥಿಯಾಗಿದ್ದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಪತ್ರಿಕೆಗಳಲ್ಲಿ ಕಾನೂನು ವಿಚಾರಗಳನ್ನು ಓದಿ, ಮನನ ಮಾಡಿಕೊಂಡು ಪ್ರತಿಕ್ರಿಯೆ ನೀಡಬೇಕು. ಬಿಡುವಿದ್ದಾಗ ನ್ಯಾಯಾಲಯಗಳಿಗೆ ಭೇಟಿ ನೀಡಿ, ಕಾರ್ಯಕಲಾಪ ವೀಕ್ಷಿಸಬೇಕು. ಅಣಕು ನ್ಯಾಯಾಲಯ, ವಿಚಾರ ಸಂಕಿರಣ, ಕಾರ್ಯಾಗಾರಗಳಲ್ಲಿ ಭಾಗವಹಿಸಬೇಕು. ಉತ್ತಮ ವಕೀಲರ ಬಳಿ ತರಬೇತಿ ಪಡೆಯಬೇಕು. ಮುಂದೆ ಏನಾಗಬೇಕು ಎಂಬುದನ್ನು ಆರಂಭದಲ್ಲಿಯೇ ನಿರ್ಧರಿಸಬೇಕು ಎಂದರು.

ಸರ್ವೋಚ್ಛ ನ್ಯಾಯಾಲಯಗಳ ಹಳೆಯ ತೀರ್ಪುಗಳನ್ನು ಓದಬೇಕು. ಸಂವಿಧಾನ, ಕಾನೂನು ತಿದ್ದುಪಡಿಗಳನ್ನು ಗಮನಿಸಬೇಕು. ಉಚಿತ ಕಾನೂನು ನೆರವನ್ನು ತಳಮಟ್ಟದ ಸಮುದಾಯಗಳಿಗೂ ತಲುಪಿಸಬೇಕು. ಎನ್‌ಎಸ್‌ಎಸ್ ಸೇರಿದಂತೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ವ್ಯಕ್ತಿತ್ವ ವಿಕಸನ ಮಾಡಿಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಮಹಾಜನ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್ ಮಾತನಾಡಿ, ಮುಂದಿನ ವರ್ಷದಿಂದ ಬಿಬಿಎ, ಎಲ್‌ಎಲ್‌ಬಿ ಕೋರ್ಸ್ ಆರಂಭಿಸಲಾಗುವುದು. ಕಾಲೇಜಿನಲ್ಲಿ ಇರುವ ಗ್ರಂಥಾಲಯ ಸೌಲಭ್ಯ, ಕಂಪ್ಯೂಟರ್ ಲ್ಯಾಬ್ ಪ್ರಯೋಜನ ಪಡೆಯಬೇಕು. ಆಗಾಗ ಅಣುಕು ನ್ಯಾಯಾಲಯ ಸ್ಪರ್ಧೆ, ಗುಂಪು ಚರ್ಚೆ ನಡೆಸಬೇಕು ಎಂದು ಸಲಹೆ ನೀಡಿದರು. ಕಾಲೇಜಿನ ಆಡಳಿತ ಮಂಡಳಿ ಸದಸ್ಯೆ ತೇಜಸ್ವಿನಿ ಇದ್ದರು. ಪ್ರಾಂಶುಪಾಲೆ ಕೆ.ಸೌಮ್ಯಾ ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕಿ ಎಂ ಭವ್ಯಾ ನಿರೂಪಿಸಿದರು. ಸಹಾಯಕ ಪ್ರಾಧ್ಯಾಪಕಿ ರಶ್ಮಿ ವಂದಿಸಿದರು. ನೇಹಾ, ಪೂಜಾ ಮತ್ತು ತಂಡದವರು ಪ್ರಾರ್ಥಿಸಿದರು.

ಮೈಸೂರಿನ ಎನ್‌ಎಸ್‌ಎಸ್ ವಿದ್ಯಾರ್ಥಿ ನೀರು ಪಾಲು

• ಪಾಂಡವಪುರದ ಬಳಿ ಸ್ನಾನಕ್ಕೆ ಹೋದಾಗ ದುರಂತ • 25 ಲಕ್ಷ ರೂ. ಪರಿಹಾರಕ್ಕೆ ಒತ್ತಾಯ



ಪಾಂಡವಪುರ: ಎನ್‌ಎಸ್‌ಎಸ್ ಶಿಬಿರದಲ್ಲಿ ಭಾಗ ವಹಿಸಿದ್ದ ಮೈಸೂರಿನ ವಿದ್ಯಾರ್ಥಿಯೊಬ್ಬ ಕೆರೆಯಲ್ಲಿ ಸ್ನಾನ ಮಾಡಲು ಹೋಗಿ ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ತಾಲೂಕಿನ ಚಂದ್ರೆ ಗ್ರಾಮದ ಹೊರವಲಯದ ಕೆರೆಯಲ್ಲಿ ಶನಿವಾರ ಮಧ್ಯಾಹ್ನ ಸಂಭವಿಸಿದೆ.

ಮೈಸೂರು ತಾಲೂಕಿನ ಇಲವಾಲ ಹೋಬಳಿಯ ನಾಗವಾಲ ಗ್ರಾಮದ ಚನ್ನರಾಯ ಎಂಬುವರ ಪುತ್ರ ಗಜೇಂದ್ರ(17) ಮೃತ ವಿದ್ಯಾರ್ಥಿ. ಗಜೇಂದ್ರ ಪಟ್ಟಣದ ಆರ್‌ಎಸ್‌ಎಸ್ ಕಚೇರಿಯಲ್ಲಿ ವಾಸ್ತವ್ಯಹೂಡಿ, ಪಾಂಡವಪುರ ಪಟ್ಟಣದ ವಿಜಯ ಕಾಲೇಜಿನಲ್ಲಿ ವಾಣಿಜ್ಯ ವಿಭಾಗದಲ್ಲಿ ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿದ್ದ. ವಿಜಯ ಕಾಲೇಜಿನ ಎನ್‌ಎಸ್‌ಎಸ್ ಘಟಕದಿಂದ ಪಾಂಡವಪುರ ಚಂದ್ರೆ ಗ್ರಾಮದಲ್ಲಿ ಎನ್‌ಎಸ್‌ಎಸ್ ಶಿಬಿರವನ್ನು ಏರ್ಪಡಿಸಿದ್ದು, ಅದರಲ್ಲಿ ಭಾಗವಹಿಸಿದ್ದ. ಅ.25ರಿಂದ ಆರಂಭಗೊಂಡಿದ್ದ ಶಿಬಿರದಲ್ಲಿ ಭಾಗವಹಿಸಿ ಶನಿವಾರ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೂ ಶ್ರಮದಾನ ನಡೆಸಿ ಬಳಿಕ ಸ್ನೇಹಿತರೊಂದಿಗೆ ಸ್ನಾನ ಮಾಡಲು ಚಂದ್ರೆ ಗ್ರಾಮದ ಹೊರವಲಯದಲ್ಲಿರುವ ಚಂದ್ರೆ ಕೆರೆಯ ಬಳಿ ತೆರಳಿದ್ದಾನೆ. ಸ್ನೇಹಿತರೊಂದಿಗೆ ಹೋಗುತ್ತಿದ್ದ ಗಜೇಂದ್ರ ಎಲ್ಲರಿಗಿಂತ ನಾನೆ ಮೊದಲು ಹೋಗಬೇಕೆಂದು ಓಡಿ ಹೋಗಿ ಕೆರೆಯ ಆಳ ತಿಳಿಯದೆ ಸ್ನಾನ ಮಾಡಲೆಂದು ಕೆರೆಗೆ ಹಾರಿದ್ದಾನೆ.



ಆಸ್ಪತ್ರೆಯ ಬಳಿ ಸಂಬಂಧಿಕರು ಡಿಡಿಪಿಐ ಅವರನ್ನು ತರಾಟೆಗೆ ತೆಗೆದುಕೊಂಡಿರುವುದು.

ಕೆರೆಗೆ ಹಾರಿದ ವಿದ್ಯಾರ್ಥಿ ಗಜೇಂದ್ರ ಮೇಲೆ ಬಾರದ ಹಿನ್ನೆಲೆಯಲ್ಲಿ, ಹಿಂದೆ ಬರುತ್ತಿದ್ದ ವಿದ್ಯಾರ್ಥಿಗಳು ಓಡಿ ಹೋಗಿ ಕೆರೆಗೆ ಇಳಿದು ಗಜೇಂದ್ರನನ್ನು ಮೇಲೆತ್ತಲು ಪ್ರಯತ್ನಿಸಿದ್ದಾರೆ. ಆದರೆ ಕೆರೆ ಆಳ ಇದ್ದ ಪರಿಣಾಮ ನೀರಿಗೆ ಇಳಿಯದೆ ವಾಪಸ್ಸಾಗಿದ್ದಾರೆ. ನಂತರ ಎನ್‌ಎಸ್‌ಎಸ್ ಅಧಿಕಾರಿ ಚಲುವೇಗೌಡ ಸಹ ಕೆರೆ ಬಳಿ ಓಡಿಬಂದು ಗಜೇಂದ್ರನನ್ನು ಹುಡುಕಲು ಎಷ್ಟೇ ಪ್ರಯತ್ನಿಸಿದರೂ ಯಾವುದೇ ಪ್ರಯೋಜನವಾಗಲಿಲ್ಲ.

ಸ್ಥಳೀಯರು ಪೊಲೀಸರಿಗೆ ವಿಷಯ ಮುಟ್ಟಿಸಿದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಆಗಮಿಸಿದ ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ನಂತರ ಅಗ್ನಿಶಾಮಕ ದಳದ ಸಿಬ್ಬಂದಿಯನ್ನು ಸ್ಥಳಕ್ಕೆ ಕರೆಸಿ ಸುಮಾರು ಅರ್ಧ ಗಂಟೆಗೂ ಹೆಚ್ಚು ಕಾಲ ಕಾರ್ಯಾಚರಣೆ ನಡೆಸಿ ಮೃತ ದೇಹವನ್ನು ಕೆರೆಯಿಂದ ಹೊರಕ್ಕೆ ತೆಗೆದರು. ನಂತರ ಮೃತ ದೇಹವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಶವಗಾರಕ್ಕೆ ರವಾನಿಸಿದ್ದಾರೆ.

ಸಂಬಂಧಿಕರಿಂದ ಆಕ್ರೋಶ: ವಿಷಯ ತಿಳಿದ ಪಟ್ಟಣದ ಶವಗಾರದ ಬಳಿ ಬಂದ ಮೃತನ ಸಂಬಂಧಿಕರು ಕಾಲೇಜಿನ ಆಡಳಿತ ಮಂಡಳಿ, ಎನ್‌ಎಸ್‌ಎಸ್ ಅಧಿಕಾರಿ ಹಾಗೂ ಉಪನ್ಯಾಸಕರ ವಿರುದ್ಧ ಆಕ್ರೋಶ ಹೊರಹಾಕಿದರು. ಸ್ಥಳಕ್ಕೆ ಆಗಮಿಸಿದ ಡಿಡಿಪಿಐ ಅವರನ್ನು ಸಹ ತರಾಟೆಗೆ ತೆಗೆದುಕೊಂಡರು.

ಮೃತ ದೇಹವನ್ನು ಆಸ್ಪತ್ರೆಗೆ ರವಾನಿಸಿ ಎರಡು ಮೂರು ಗಂಟೆಯಾದರು ಕಾಲೇಜಿನ ಆಡಳಿತ ಮಂಡಳಿ, ಎನ್‌ಎಸ್‌ಎಸ್ ಅಧಿಕಾರಿಗಳು ಆಗಮಿಸದೆ ಬೇಜವಾಬ್ದಾರಿ ತೋರುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೆ ಘಟನೆ ಮಧ್ಯಾಹ್ನ ನಡೆದರೂ ಪೋಷಕರಿಗೆ ಮಾಹಿತಿ ನೀಡದೆ ಮೃತ ದೇಹವನ್ನು ಏಕೆ ಆಸ್ಪತ್ರೆಯ ಶವಗಾರಕ್ಕೆ ರವಾನಿಸಿದ್ದೀರಿ ಎಂದು ಉಪನ್ಯಾಸಕರು, ಎನ್‌ಎಸ್‌ಎಸ್ ಅಧಿಕಾರಿಗಳ ವಿರುದ್ಧ ಹರಿಹಾಯ್ದರು. ಎನ್‌ಎಸ್‌ಎಸ್ ಅಧಿಕಾರಿಗಳ ಬೇಜಬ್ದಾರಿಯಿಂದಲೇ ಘಟನೆ ಸಂಭವಿಸಿದೆ ಎಂದು ಆರೋಪಿಸಿದರು.

25 ಲಕ್ಷ ಪರಿಹಾರಕ್ಕೆ ಬೇಡಿಕೆ: ಪ್ರಕರಣ ಸಂಬಂಧ ಆಡಳಿತ ಮಂಡಳಿಯಿಂದ 25 ಲಕ್ಷಕ್ಕೆ ಮೃತರ ಸಂಬಂಧಿಕರು ಬೇಡಿಕೆ ಇಟ್ಟರು. ಇದಕ್ಕೆ ಪ್ರತಿಕ್ರಿಯಿಸಿದ ಸಂಸ್ಥೆ ನಿರ್ದೇಶಕಿ ಹಾಗೂ ರೈತ ನಾಯಕಿ ಸುನೀತ ಪುಟ್ಟಣ್ಣಯ್ಯ ಅವರು ಸಂಸ್ಥೆ ಆಡಳಿತ ಮಂಡಳಿಯವರು ವಿದೇಶ ಪ್ರವಾಸಕ್ಕೆ ತೆರಳಿದ್ದಾರೆ. ದೂರವಾಣಿ ಸಂಪರ್ಕಕ್ಕೂ ಸಿಗುತ್ತಿಲ್ಲ. ಅವರು ವಿದೇಶದಿಂದ ಬಂದ ಬಳಿಕ ಚರ್ಚಿಸಿ ಪರಿಹಾರ ಕೊಡಿಸಲಾಗುವುದು. ಸದ್ಯಕ್ಕೆ ಎನ್‌ಎಸ್‌ಎಸ್ ಅಧಿಕಾರಿ ಹಾಗೂ ಉಪನ್ಯಾಸಕರಿಂದ 1 ಲಕ್ಷ, ಡಿಡಿಪಿಐ ಕಚೇರಿಯಿಂದ 50 ಸಾವಿರ ಹಾಗೂ ಎನ್‌ಎಸ್‌ಎಸ್ ಕೇಂದ್ರ ಕಚೇರಿಯಿಂದ 1 ಲಕ್ಷ ಪರಿಹಾರ ಕೊಡಿಸಲಾಗುವುದು ಎಂದು ಭರವಸೆ ನೀಡಿದರು. ಇದಕ್ಕೆ ಒಪ್ಪದ ಮೃತರ ಸಂಬಂಧಿಕರು ಪ್ರಕರಣ ಸಂಬಂಧ 25 ಲಕ್ಷ ಪರಿಹಾರ ನೀಡಬೇಕು. ಸ್ಥಳದಲ್ಲಿಯೇ 5 ಲಕ್ಷ ನೀಡಬೇಕು, ಉಳಿದ ಹಣವನ್ನು ನಂತರ ನೀಡಬೇಕು ಎಂದು ಒತ್ತಾಯಿಸಿದರು. ಘಟನೆ ಪಾಂಡವಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ರಾತ್ರಿಯವರೆಗೂ ಯಾವುದೇ ದೂರು ದಾಖಲಾಗಿಲ್ಲ.

ಅಗ್ರಹಾರ ಬಾಚಹಳ್ಳಿಯಲ್ಲಿ ಬಿಜೆಪಿ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಚಾಲನೆ



ತಾಲ್ಲೂಕಿನ ಅಗ್ರಹಾರ ಬಾಚಹಳ್ಳಿ ಗ್ರಾಮದಲ್ಲಿ ಮಾಜಿ ಸಚಿವ ಕೆ.ಸಿ.ನಾರಾಯಣಗೌಡ ಹಾಗೂ ಗ್ರಾಮ ಪಂಚಾಯಿತಿ ಅಧ್ಯಕ್ಷ ಎ.ಸಿ.ದಿವಿಕುಮಾರ್ ನೇತೃತ್ವದಲ್ಲಿ ಮೊಬೈಲ್ ಆಪ್ ಮೂಲಕ ಬಿಜೆಪಿ ಸದಸ್ಯತ್ವ ನೋಂದಣಿ ಅಭಿಯಾನ ಕಾರ್ಯಕ್ರಮ ನಡೆಯಿತು.

ಕೆ.ಆರ್.ಪೇಟೆ,ಅ.26–ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದಲ್ಲಿ ಮಾಜಿ ಸಚಿವ ಕೆ.ಸಿ.ನಾರಾಯಣಗೌಡ ಹಾಗೂ ಗ್ರಾಮ ಪಂಚಾಯಿತಿ ಅಧ್ಯಕ್ಷ ಎ.ಸಿ.ದಿವಿಕುಮಾರ್ ನೇತೃತ್ವದಲ್ಲಿ ಬಿಜೆಪಿ ಸದಸ್ಯತ್ವ ನೋಂದಣಿ ಅಭಿಯಾನ ಕಾರ್ಯಕ್ರಮ ನಡೆಯಿತು.

ಮೊಬೈಲ್ ಮೂಲಕ ರೈತರೊಬ್ಬರಿಗೆ ಸದಸ್ಯತ್ವ ನೀಡುವ ಮೂಲಕ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಮಾಜಿ ಸಚಿವ ಕೆ.ಸಿ.ನಾರಾಯಣಗೌಡರು ಕಳೆದ 11 ವರ್ಷಗಳಿಂದ ದೇಶದ ಸಮಗ್ರ ಅಭಿವೃದ್ಧಿ ಶ್ರಮಿಸುತ್ತಿರುವ ವಿಶ್ವನಾಯಕ ನಮ್ಮೆಲ್ಲರ ಹೆಮ್ಮೆಯ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಜಿ ಅವರ ಜನಪರವಾದ ದಕ್ಷ ಆಡಳಿತಕ್ಕೆ ಶಕ್ತಿ ತುಂಬಲು, ಕೇಂದ್ರ ಸರ್ಕಾರದ ಜನಪರ ಕಾರ್ಯಕ್ರಮಗಳನ್ನು ಶ್ರೀಸಾಮಾನ್ಯರಿಗೆ ತಲುಪಿಸಲು ಅನುಕೂಲವಾಗುವಂತೆ ತಾಲೂಕಿನ ಪ್ರತಿಯೊಬ್ಬರೂ ಬಿಜೆಪಿ ಸದಸ್ಯತ್ವ ಪಡೆಯಬೇಕು. ಈ ಮೂಲಕ ಬಲಿಷ್ಠ ಭಾರತಕ್ಕಾಗಿ ಹಗಲು ರಾತ್ರಿ ದುಡಿಯುತ್ತಿರುವ ನರೇಂದ್ರಮೋದಿ ಅವರ ಕೈಬಲ ಪಡಿಸಬೇಕು ಎಂದು ಮನವಿ ಮಾಡಿದರು.


ರೈತರಿಗೆ ಫಸಲ್ ಭೀಮಾ ಯೋಜನೆ, ಪಿ.ಎಂ. ಕಿಸಾನ್ ಯೋಜನೆ, ಸೇರಿದಂತೆ ಹತ್ತು ಹಲವು ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದಾರೆ. ವಾರ್ಷಿಕ ಕೇವಲ 12ರೂ.ಗಳನ್ನು ನೀಡಿ ಬ್ಯಾಂಕ್ ಉಳಿತಾಯ ಖಾತೆ ಮೂಲಕ ವಿಮೆ ಮಾಡಿಸಿದರೆ 2ಲಕ್ಷ ರೂ. ಅಪಘಾತ ವಿಮೆ ಪರಿಹಾರ ಸಿಗುತ್ತದೆ. ಅದೇ ಉಳಿತಾಯ ಖಾತೆ ಮೂಲಕ ವಾರ್ಷಿಕ 350ರೂ ವಿಮಾ ಕಂತು ಪಾವತಿಸಿದರೆ ಸ್ವಾಭಾವಿಕ ಮರಣಕ್ಕೂ ಎರಡು ಲಕ್ಷ ರೂ ನಾಮಿನಿದಾರರಿಗೆ ವ್ಯಕ್ತಿ ಮೃತಪಟ್ಟ ಒಂದು ವಾರದೊಳಗೆ ನೀಡಲಾಗುತ್ತದೆ. ಇಂತಹ ವಿಮಾ ಸೌಲಭ್ಯ ವಿಶ್ವದಲ್ಲಿ ಯಾವುದೇ ದೇಶವೂ ನೀಡುತ್ತಿಲ್ಲ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಅಗ್ರಹಾರಬಾಚಹಳ್ಳಿ ಗ್ರಾ.ಪಂ.ಸದಸ್ಯ ನಗರೂರು ನಂಜೇಗೌಡ, ಬಿಜೆಪಿ ಮುಖಂಡರಾದ ಆರ್.ಜಗದೀಶ್, ಕೆ.ವಿನೋದ್, ಅರೆಬೊಪ್ಪನಹಳ್ಳಿ ಸುನಿಲ್, ಬಿ.ಕುಮಾರ್, ಎ.ಎಸ್.ಶ್ರೀನಿವಾಸ್, ಎ.ಎಸ್.ಸುರೇಶ್, ಕೈಗೋನಹಳ್ಳಿ ಕುಮಾರ್, ಎ.ಎಸ್.ವಾಸು, ಕೆ.ಸುನಿಲ್, ಚನ್ನೇಗೌಡ, ತಾಲೂಕು ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಕರೋಠಿ ಅನಿಲ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ಅ.30ರವರೆಗೆ ಮ್ಯಾನ್ಯುಯಲ್ ಸ್ಕ್ಯಾವೆಂಜರ್, ಅನೈರ್ಮಲ್ಯ ಶೌಚಾಲಯಗಳ ಸಮೀಕ್ಷೆ

ಮಂಡ್ಯ, ಅ.26– ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:324/2020ರ ತೀರ್ಪಿನ ಅನ್ವಯ ರಾಜ್ಯದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಮೀಕ್ಷೆಯನ್ನು ಕೇಂದ್ರ ಸರ್ಕಾರದ NAMASTE ಪೋರ್ಟಲ್‌ನ MS Survey APP ಮೂಲಕ ಕೈಗೊಳ್ಳಲಾಗಿದೆ.

ಮಾಲ್ ಆಗಿರುವ ವಿಧಾನ ಸೌಧ



ಮಂಡ್ಯ, ಅ.26– ಕೆಂಗಲ್ ಹನುಮಂತಯ್ಯ ಅವರು ಕಟ್ಟಿಸಿರುವ ವಿಧಾನಸೌಧದಲ್ಲಿ ಅನುಭವ ಸಿಗುವುದಿಲ್ಲ ಏಕೆಂದರೆ ಅದು 'ಮಾಲ್' ಆಗಿ ಹೋಗಿದೆ, ಅನುಭವ ಇರುವ ವ್ಯಕ್ತಿಗಳ ಮಾತು ಕೇಳುವ ಕಿವಿಗಳು ಸಹ ಅಲ್ಲಿ ಸಿಗುವುದಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ವ್ಯಂಗ್ಯವಾಡಿದರು.

ನಗರದ ಕರ್ನಾಟಕ ಸಂಘದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಮೈಸೂರು ಚಲೋ ಅಥವಾ ಅರಮನೆ ಚಲೋ ಚಳವಳಿ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಮಾಜಿ ಸಚಿವ ಟಿ.ಮರಿಯಪ್ಪ ನೆನಪಿನ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದ ಅವರು, ಕೊಲ್ಲೂರು ಮಲ್ಲಪ್ಪ ಅವರು ಡಿ.ದೇವರಾಜು ಅರಸು ಅವರಿಗೆ ಅವಕಾಶ ಕೊಟ್ಟವರು, ಇಂದಿರಾಗಾಂಧಿ ಮಗುವಾಗಿದ್ದಾಗ ತೊಡೆ ಮೇಲೆ ಆಡಿಸಿದವರು, ಹೀಗಿರುವಾಗ ನಮ್ಮ ಸಮುದಾಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಮ್ಮದೇ ಸಮುದಾಯದ ಕೊಲ್ಲೂರು ಮಲ್ಲಪ್ಪ, ಟಿ.ಮರಿಯಪ್ಪ ಅವರ ಹೆಸರನ್ನು ಇಲ್ಲಿವರೆಗೂ ಹೇಳಿಲ್ಲ, ಏಕೆಂದರೆ ಅವರ ಹೆಸರು ಹೇಳಿದರೆ ಅವರ ಇಮೇಜ್ ಕಡಿಮೆ ಆಗುತ್ತದೆ ಎಂಬ ಭಾವನೆಯಿಂದ ಹೇಳುವುದಿಲ್ಲ, ಇದು ನಮ್ಮ ಸಮುದಾಯಕ್ಕೆ ಕೊಡುವ ಬೆಲೆಯೇ ಎಂದು ವ್ಯಂಗ್ಯವಾಡಿದರು.

ಸ್ವಾತಂತ್ರ್ಯ ಬಂದ ನಂತರದ ಕಾಲದಲ್ಲಿ ಸರ್ಕಾರವು ಭೂಮಿ ನೀಡಿ ಬೆಳೆ ಬೆಳೆಯುವಂತೆ ಜನರಿಗೆ ಹೇಳುತ್ತಿದ್ದರು, ಈಗ ಎರಡು ರೂಪಾಯಿಗೆ ಅಕ್ಕಿ ತೆಗೆದುಕೊಳ್ಳಿ ಎಂದು ಜನರಿಗೆ ಹೇಳುತ್ತಾರೆ, ಆಗಿನ ನಾಯಕತ್ವಕ್ಕೂ ಹೀಗಿನ ನಾಯಕತ್ವಕ್ಕೂ ಹಜಗಜಾಂತರ ವ್ಯತ್ಯಾಸವಿದೆ. ಮಂಡ್ಯ ಜಿಲ್ಲೆಯ ಕೆ.ವಿ.ಶಂಕರಗೌಡ ಸೇರಿದಂತೆ ಹಲವು ಮಹನೀಯರನ್ನು ನೋಡಿದರೆ ಕೈಮುಗಿಯಬೇಕೆನ್ನಿಸುತ್ತದೆ ಆದರೆ ಈಗಿನ ಮಂತ್ರಿಗಳನ್ನು ನೋಡಿದರೆ ಉಗಿಯಬೇಕು ಎನ್ನಿಸುತ್ತದೆ ಎಂದರು.

ಎಲ್.ಆರ್.ಶಿವರಾಮೇಗೌಡ ಬಿಜೆಪಿಗೆ ಗುಡ್‌ಬೈ

ಶೀಘ್ರದಲ್ಲೆ ಕಾಂಗ್ರೆಸ್‌ಗೆ ಸೇರ್ಪಡೆ

ನಾಗಮಂಗಲ: ಮಾಜಿ ಸಂಸದ ಎಲ್.ಆರ್.ಶಿವರಾಮೇಗೌಡರು ಬಿಜೆಪಿಗೆ ಗುಡ್‌ಬೈ ಹೇಳಿ ಕಾಂಗ್ರೆಸ್ ಸೇರಲು ತೀರ್ಮಾನಿಸಿದ್ದಾರೆ.

ಈ ವಿಷಯ ತಿಳಿಸಿದ ಅವರು ನಾನು ಯೋಗೇಶ್ವರ್ ರೀತಿ ಜಂಪಿಂಗ್ ಸ್ಟಾರ್, ಮೂಲ ನಾನು ಕಾಂಗ್ರೆಸ್ ಪಕ್ಷದಲ್ಲೇ ಇದ್ದವನು. ನಮ್ಮ ತವರು ಮನೆಗೆ ನಾನು ತೆರಳುತ್ತಿದ್ದೇನೆ, ಪಕ್ಷ ಸೇರ್ಪಡೆ ವಿಚಾರವಾಗಿ ಪಕ್ಷದ ವರಿಷ್ಠರ ಜೊತೆ ಚರ್ಚಿಸಿದ್ದೇನೆ ಎಂದರು.

ಬಿಜೆಪಿ ರಾಜ್ಯಾಧ್ಯಕ್ಷರಿಗೆ ಪಕ್ಷ ತೊರೆಯುವುದಾಗಿ ರಾಜೀನಾಮೆ ಪತ್ರ ತಲುಪಿಸಿದ್ದೇನೆ ಎಂದು ಸ್ಪಷ್ಟ ಪಡಿಸಿದ ಅವರು. ಚನ್ನಪಟ್ಟಣದ ಜನ ದಡ್ಡರೇನಲ್ಲ. ಸಿ.ಪಿ.ಯೋಗೇಶ್ವರ್ ಕಾಂಗ್ರೆಸ್ ಸೇರ್ಪಡೆ ಆದ ಮೇಲೆ ನಿಖಿಲ್ ಅಲ್ಲ ಕುಮಾರಸ್ವಾಮಿ ಬಂದರು ಏನು ಪ್ರಯೋಜನವಿಲ್ಲ. ಅಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಕಳೆದ ಚುನಾವಣೆಯಲ್ಲಿ ಕುಮಾರಸ್ವಾಮಿ ಗೆಲುವನ್ನು ಕಂಡಿದ್ದಾರೆ. ಕಳೆದ ಬಾರಿ ಚುನಾವಣೆಯಲ್ಲಿ ನಾನು ಮೂರು ಲಕ್ಷಕ್ಕೂ ಅಧಿಕ ಮತಗಳ ಲೀಡ್ ಪಡೆದುಕೊಂಡು ಗೆದ್ದಿದ್ದೇನೆ ಎಂದರು.



ನನ್ನ ಗೆಲುವಿಗೆ ಕುಮಾರಸ್ವಾಮಿ, ಸಿದ್ದರಾಮಯ್ಯ, ಡಿಕೆ ಶಿವಕುಮಾರ್ ಹಾಗೂ ದೇವೇಗೌಡರ ಆಶೀರ್ವಾದವೇ ಕಾರಣ. ಅಷ್ಟೇ ಆಶೀರ್ವಾದ ನಿಖಿಲ್ ಅವರ ಮೇಲು ಕೂಡ ಇತ್ತಲ್ಲ. ಯಾಕೇ ಸೋಲನ್ನು ಕಂಡರು. ಇದರಿಂದಲೇ ತಿಳಿಯುತ್ತೆ ಜನರೇನು ದಡ್ಡರಲ್ಲ ಈ ಬಾರಿಯ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸುತ್ತಾರೆ ಎಂದರು. ಅತಿ ಶೀಘ್ರದಲ್ಲೇ ನಾನು ಹಾಗೂ ನನ್ನ ಪುತ್ರ ಚೇತನ್ ಗೌಡ ಸೇರಿದಂತೆ ನಮ್ಮ ಕಾರ್ಯಕರ್ತರು ಕಾಂಗ್ರೆಸ್ ಸೇರುತ್ತೇವೆ ಈ ಬಗ್ಗೆ ಸಚಿವ ಚಲುವರಾಯ ಸ್ವಾಮಿ ಜೊತೆ ಚರ್ಚಿಸಿದ್ದೇನೆ ಎಂದ ಅವರು ಕುಮಾರಸ್ವಾಮಿಯನ್ನು ಮಂಡ್ಯದ ಜನತೆ ಗೆಲ್ಲಿಸಿ ಜಿಲ್ಲೆಯ ಒಳಗೆ ಬಿಟ್ಟು ಕೊಂಡಿದ್ದೆ ತಪ್ಪಾಯಿತು ಎಂದು ವಾಗ್ದಾಳಿ ನಡೆಸಿದರು. ಕುಮಾರಸ್ವಾಮಿ ಕೇಂದ್ರದ ಮಂತ್ರಿ ಸ್ಥಾನ ಪಡೆದು ದೇಶಾದ್ಯಂತ ಜನಪರ ಕೆಲಸವನ್ನು ಮಾಡದೆ, ಮೂರು ದಿನ ಮಂಡ್ಯದಲ್ಲಿ ಮೂರು ದಿನ ಬೆಂಗಳೂರಿನಲ್ಲಿ ಸುತ್ತುತ್ತಿದ್ದಾರೆ ಎಂದರು.

ಭಾರೀ ಮಳೆಗೆ ಮನೆ ಕುಸಿತ



ಕೆ.ಆರ್.ಪೇಟೆ,ಅ.26– ತಾಲೂಕಿನ ಹೊಸಹೊಳಲು ಗ್ರಾಮದ 21ನೇ ವಾರ್ಡಿನ ವಿಜಯನಗರ ಬಡಾವಣೆಯ ವಾಸಿ ಡ್ರೈವರ್ ಸತೀಶ್ ಅವರ ವಾಸದ ಮನೆಯ ಗೋಡೆ ಮತ್ತು ಮೇಲ್ಛಾವಣಿ ಮಂಗಳವಾರ ರಾತ್ರಿ ಸುರಿದ ಭಾರಿ ಮಳೆಗೆ ಕುಸಿದು ಲಕ್ಷಾಂತರ ರೂ ನಷ್ಟ ಉಂಟಾಗಿದೆ.

ಕಡುಬಡವರಾಗಿರುವ ಸತೀಶ್ ಅವರ ಕುಟುಂಬವು ಮಳೆಯ ಕಾರಣ ಮನೆಯ ಹಿಂಬದಿಯಲ್ಲಿ ಇರುವ ಜಾಗದಲ್ಲಿ ಮಲಗಿದ್ದರಿಂದ ಅದೃಷ್ಟವಶಾತ್ ಯಾರಿಗೂ ಸಹ ಯಾವುದೇ ತೊಂದರೆ ಆಗಿಲ್ಲ. ಸ್ಥಳಕ್ಕೆ ಪುರಸಭಾ ಸದಸ್ಯ ಹೆಚ್.ಆರ್.ಲೋಕೇಶ್, ಕಸಬಾ ಹೋಬಳಿ ರಾಜಸ್ವ ನಿರೀಕ್ಷಕ ಜ್ಞಾನೇಶ್, ಗ್ರಾಮ ಆಡಳಿತ ಅಧಿಕಾರಿ ಜಗದೀಶ್ ಭೇಟಿ ನೀಡಿ ಸರಕಾರದಿಂದ ಸೂಕ್ತ ಅನುದಾನ ಕೊಡಿಸಲಾಗುವುದು ಎಂದು ತಿಳಿಸಿದರು.

ಈ ಬಗ್ಗೆ ತಾಲೂಕು ಆಡಳಿತಕ್ಕೂ ಸಹ ಮನೆ ಹಾನಿ ಆಗಿರುವ ಬಗ್ಗೆ ಮಾಹಿತಿ ಒದಗಿಸಿ ಸಂಕಷ್ಟಕ್ಕೆ ಒಳಗಾಗಿರುವ ಸತೀಶ್ ಕುಟುಂಬಕ್ಕೆ ವೈಜ್ಞಾನಿಕ ಪರಿಹಾರ ಬಿಡುಗಡೆ ಮಾಡಬೇಕು. ಜೊತೆ ಆಶ್ರಯ ಯೋಜನೆ ಅಡಿಯಲ್ಲಿ ಮನೆ ಮಂಜೂರು ಮಾಡಿಸಿಕೊಡಬೇಕು ಎಂದು ಪುರಸಭಾ ಸದಸ್ಯ ಹೆಚ್.ಆರ್.ಲೋಕೇಶ್ ತಾಲೂಕು ತಹಸೀಲ್ದಾರ್ ಕೆಯು.ಅಶೋಕ್ ಅವರಿಗೆ ಮನವಿ ಮಾಡಿದ್ದಾರೆ.

ಎಸ್‌ಸಿ, ಎಸ್ಟಿ ರೈಲ್ವೆ ನೌಕರರ ಸಂಘದ ರಾಷ್ಟ್ರೀಯ ಹೆಚ್ಚುವರಿ ಪ್ರಧಾನ ಕಾರ್ಯದರ್ಶಿಯಾಗಿ ಮೈಸೂರಿನ ಎಂ. ಮೋಹನ್ ಆಯ್ಕೆ



ಎಂ.ಮೋಹನ್

ಮೈಸೂರು, ಅ. 26– ಅಖಿಲ ಭಾರತ ಎಸ್‌ಸಿ, ಎಸ್ಟಿ ರೈಲ್ವೆ ನೌಕರರ ಸಂಘದ ರಾಷ್ಟ್ರೀಯ ಹೆಚ್ಚುವರಿ ಪ್ರಧಾನ ಕಾರ್ಯದರ್ಶಿಯಾಗಿ ಮೈಸೂರಿನ ಎಂ.ಮೋಹನ್ ಆಯ್ಕೆಯಾಗಿದ್ದಾರೆ.

ನವದೆಹಲಿಯಲ್ಲಿ ಅ. 22ರಂದು ನಡೆದ ಸಂಘದ ಕೇಂದ್ರ ಕಾರ್ಯಕಾರಣಿಯಲ್ಲಿ ರಾಷ್ಟ್ರೀಯ ಅಧ್ಯಕ್ಷರಾಗಿ ಜೈಪುರದ ಬಿ.ಎಲ್. ಭೈರ್ವಾ, ಪ್ರಧಾನ ಕಾರ್ಯದರ್ಶಿಯಾಗಿ ನವದೆಹಲಿಯ ಅಶೋಕ್‌ಕುಮಾರ್, ಕಾರ್ಯಾಧ್ಯಕ್ಷರಾಗಿ ಚೆನ್ನೈನ ಎ. ಜ್ಞಾನಶೇಖರನ್, ಉಪಾಧ್ಯಕ್ಷರಾಗಿ ಕೊಲ್ಕತ್ತಾದ ಪ್ರೇಮ್‌ಚಂದ್ ಮುರ್ಮು, ಹೆಚ್ಚುವರಿ ಪ್ರಧಾನ ಕಾರ್ಯದರ್ಶಿಯಾಗಿ ಮೈಸೂರಿನ ಎಂ. ಮೋಹನ್ ಖಜಾಂಚಿಯಾಗಿ ನವದೆಹಲಿಯ ಎಂ. ಪ್ರೇಮ್‌ಸಿಂಗ್ ಆಯ್ಕೆಯಾಗಿದ್ದಾರೆ. ಮೋಹನ್ ಅವರು ಕರ್ನಾಟಕದಿಂದ ಈ ಹುದ್ದೆಗೆ ಆಯ್ಕೆಯಾದ ಮೊದಲಿಗರಾಗಿದ್ದು, ಮೈಸೂರು ವಿಭಾಗ, ಮೈಸೂರು ರೈಲ್ವೇ ಕಾರ್ಯಗಾರ, ಬೆಂಗಳೂರು ವಿಭಾಗ, ಬೆಂಗಳೂರು ಕಾರ್ಯಗಾರ, ಹುಬ್ಬಳ್ಳಿ ವಿಭಾಗ, ಹುಬ್ಬಳ್ಳಿ ಕಾರ್ಯಗಾರದ ನೌಕರರು ವಿಜಯೋತ್ಸವ ಆಚರಿಸಿದ್ದಾರೆ.

ಒಂದನೇ ಪುಟದಿಂದ

ಮಳೆ ಹಾನಿಗೆ ಪರಿಹಾರ ಕಲ್ಪಿಸಿ

ತಹಶೀಲ್ದಾರ್ ಖಾತೆಯಲ್ಲಿ 115.71 ಕೋಟಿ ರೂ. ಸೇರಿದಂತೆ ಒಟ್ಟು 666.96 ಕೋಟಿ ರೂ. ಲಭ್ಯವಿದ್ದು ಸಮರ್ಪಕ ಬಳಕೆ ಮಾಡುವಂತೆ ಸೂಚಿಸಿದರು.

ಕೆರೆಗಳ ಒತ್ತುವರಿ ತೆರವುಗೊಳಿಸಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಗಡುವು ವಿಧಿಸಲಾಗಿತ್ತು, ಬೆಂಗಳೂರು ಸುತ್ತಮುತ್ತ ಬಹುತೇಕ ಕೆರೆಗಳು ಕೇವಲ ಶೇ.30ರಷ್ಟು ಮಾತ್ರ ತುಂಬಿದ್ದು, ಇದನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳಬೇಕು.

ಕೆರೆಗಳ ಒತ್ತುವರಿ ತೆರವುಗೊಳಿಸಿ, ಹೂಳೆತ್ತುವುದು ಸೇರಿದಂತೆ ಅಭಿವೃದ್ಧಿ ಕಾರ್ಯಗಳನ್ನು ಆದ್ಯತೆ ಮೇರೆಗೆ ಕೈಗೊಳ್ಳಬೇಕು, ಇದಕ್ಕಾಗಿ ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕ ಬಳಸಿಕೊಳ್ಳಬೇಕು. ಹೆಚ್ಚುವರಿ ಬಿತ್ತನೆ ಬೀಜ ಬೇಡಿಕೆ ಪೂರೈಸಲು ಕ್ರಮ ಕೈಗೊಳ್ಳಬೇಕು, ರೈತರಿಗೆ ಪರ್ಯಾಯ ಬೆಳೆ ಬೆಳೆಯಲು ಬಿತ್ತನೆ ಬೀಜ ಮತ್ತು ಗೊಬ್ಬರ ಸಾಕಷ್ಟು ಪ್ರಮಾಣದಲ್ಲಿ ಸಿಗುವಂತೆ ನೋಡಿಕೊಳ್ಳಬೇಕು ಎಂದರು.

7 ವರ್ಷ ಕಠಿಣ ಜೈಲು ಶಿಕ್ಷೆ

ರೂಪಾಯಿ ಮೌಲ್ಯದ 11,312 ಮೆಟ್ರಿಕ್ ಟನ್ ಕಬ್ಬಿಣದ ಅದಿರನ್ನು 2010ರಲ್ಲಿ ಬೇಲಿಕೇರಿ ಬಂದರಿನಲ್ಲಿ ಸಂಗ್ರಹಿಸಿ ಇಡಲಾಗಿತ್ತು. ಆದರೆ, ಆರೋಪಿಗಳು ಅಧಿಕಾರಿಗಳೊಂದಿಗೆ ಶಾಮೀಲಾಗಿ ಚೀನಾಗೆ ಕಳ್ಳಸಾಗಣೆ ಮಾಡಿದ್ದಾರೆ.

ಬಂದರುಗಳ ಉಪ ಸಂರಕ್ಷಣಾಧಿಕಾರಿ ಮಹೇಶ್ ಜೆ ಬಿಳಿಯೆ, ಆಶಾಪುರ ಮಿನೆಚೆಮ್ ಎಂಡಿ ಚೇತನ್ ಶಾ, ಕೆವಿ ನಾಗರಾಜ್ ಅಲಿಯಾಸ್ ಸ್ವಸ್ತಿಕ್ ನಾಗರಾಜ್, ಕೆವಿಎನ್ ಗೋವಿಂದರಾಜ್, ವೆಂಕಟೇಶ್ವರ ಮಿನರಲ್ಸ್ ಪಾಲುದಾರ ಕರಪುಡಿ ಮಹೇಶ್ ಕುಮಾರ್ ಮತ್ತು ಲಾಲ್ ಮಹಲ್ ಲಿಮಿಟೆಡ್ ಎಂಡಿ ಪ್ರೇಮ್ ಚಂದ್ ಗಾರ್ಗ್ ಅವರು ಪ್ರಕರಣದ ಇತರ ಅಪರಾಧಿಗಳಾಗಿದ್ದಾರೆ.

ವಿಶ್ವಾಸ ದ್ರೋಹ ಮತ್ತು ಪಿತೂರಿಗಾಗಿ ತಪ್ಪಿತಸ್ಥನೆಂದು ಕಂಡುಬಂದ ಬಿಳಿಯೆಗೆ ಏಳು ವರ್ಷಗಳ ಜೈಲು ಶಿಕ್ಷೆಯನ್ನು ವಿಧಿಸಲಾಯಿತು, ಪ್ರಾಥಮಿಕ ಪ್ರಕರಣದಲ್ಲಿ ನ್ಯಾಯಾಲಯವು ಆರು ಕೋಟಿ ರೂಪಾಯಿ ದಂಡವನ್ನು ವಿಧಿಸಿತು. ಸಂಬಂಧಿತ ಕಳ್ಳತನ ಪ್ರಕರಣದಲ್ಲಿ, ಅಪರಾಧಿಗಳಿಗೆ ಹೆಚ್ಚುವರಿ ಮೂರು ವರ್ಷಗಳ ಶಿಕ್ಷೆ ವಿಧಿಸಲಾಯಿತು ಮತ್ತು ನ್ಯಾಯಾಲಯವು ದಂಡದ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಸರ್ಕಾರಕ್ಕೆ ಆದೇಶಿಸಿತು.

ಎರಡನೇ ಪ್ರಕರಣದಲ್ಲಿ, ನ್ಯಾಯಾಲಯವು ಸೈಲ್‌ಗೆ ಇನ್ನೂ ಏಳು ವರ್ಷಗಳ ಶಿಕ್ಷೆ ಮತ್ತು ಆರು ಕೋಟಿ ರೂಪಾಯಿ ದಂಡವನ್ನು ವಿಧಿಸಿತು. ಮೂರನೇ ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲಾ ಆರೋಪಿಗಳಿಗೆ ಐದು ವರ್ಷ ಜೈಲು ಶಿಕ್ಷೆ ಹಾಗೂ 20 ಸಾವಿರ ರೂ.ಗಳ ದಂಡದ ಜೊತೆಗೆ ವಂಚನೆ ಮಾಡಿದ್ದಕ್ಕಾಗಿ ಒಟ್ಟು 9.36 ಕೋಟಿ ರೂ. ದಂಡವನ್ನು ವಿಧಿಸಿತು. ನಾಲ್ಕನೇ ಪ್ರಕರಣದಲ್ಲಿ ಸೈಲ್, ಬಿಳಿಯೆ ಮತ್ತು ನಾಗರಾಜ್ ಅವರಿಗೆ ವಂಚನೆಗಾಗಿ ಐದು ವರ್ಷ ಮತ್ತು ಏಳು ವರ್ಷಗಳ ಶಿಕ್ಷೆ ವಿಧಿಸಲಾಗಿದ್ದು, ಹೆಚ್ಚುವರಿ 9.54 ಕೋಟಿ ರೂ. ದಂಡವನ್ನು ವಿಧಿಸಿತು. ಒಟ್ಟಾರೆ 44 ಕೋಟಿ ರೂಪಾಯಿಗೂ ಹೆಚ್ಚಿನ ಮೊತ್ತದ ದಂಡವನ್ನು ಕೋರ್ಟ್ ವಿಧಿಸಿದೆ. ತೀರ್ಪು ಪ್ರಕಟಿಸಿದ ನಂತರ, ಪ್ರಕರಣದ ತನಿಖೆ ನಡೆಸಿದ ಸಿಬಿಐ ಅವರನ್ನು ಮತ್ತು ಇತರ ಇಬ್ಬರನ್ನು ಬಂಧಿಸಿತ್ತು.

ಎಐಸಿಸಿ ಅಧ್ಯಕ್ಷರಾಗಿ 2 ವರ್ಷ ಪೂರ್ಣಗೊಳಿಸಿದ ಮಲ್ಲಿಕಾರ್ಜುನ ಖರ್ಗೆ

ನವದೆಹಲಿ: ಎಐಸಿಸಿ ಅಧ್ಯಕ್ಷರಾಗಿ ಮಲ್ಲಿಕಾರ್ಜುನ ಖರ್ಗೆ ಶನಿವಾರ ಎರಡು ವರ್ಷ ಪೂರ್ಣಗೊಳಿಸಿದ್ದು, ಪಕ್ಷದ ಬಲವರ್ಧನೆಗಾಗಿ ಅವರ ಕೊಡುಗೆಯನ್ನು ರಾಹುಲ್ ಗಾಂಧಿ ನೇತೃತ್ವದಲ್ಲಿನ ಪಕ್ಷದ ನಾಯಕರು ಗುಣಗಾನ ಮಾಡಿದ್ದಾರೆ. ಖರ್ಗೆ ಅವರು ಕಾಂಗ್ರೆಸ್ ಅಧ್ಯಕ್ಷರಾಗಿ ಅಕ್ಟೋಬರ್ 26, 2022 ರಂದು ಅಧಿಕಾರ ಸ್ವೀಕರಿಸಿದ್ದರು. ಅವರು 24 ವರ್ಷಗಳಲ್ಲಿ ಈ ಹುದ್ದೆಗೆ ಆಯ್ಕೆಯಾದ ಮೊದಲ ಗಾಂಧಿಯೇತರ ನಾಯಕರಾಗಿದ್ದಾರೆ.

ರಾಷ್ಟ್ರ ರಾಜಧಾನಿಯಲ್ಲಿನ ತಮ್ಮ ನಿವಾಸದಲ್ಲಿ ಕೇಕ್ ಕತ್ತರಿಸುವ ಮೂಲಕ 82 ವರ್ಷದ ಖರ್ಗೆ ಅವರು ಸಂಭ್ರಮಿಸಿದ್ದಾರೆ. ರಾಹುಲ್ ಗಾಂಧಿ, ಅಜಯ್ ಮಾಕೇನ್, ಜೈರಾಮ್ ರಮೇಶ್, ಕುಮಾರಿ ಶೆಲ್ಜಾ ಮತ್ತಿತರ ನಾಯಕರು ಖರ್ಗೆ ಅವರಿಗೆ ಶುಭ ಕೋರಿದ್ದಾರೆ. ಖರ್ಗೆ ಅವರ ಎರಡು ವರ್ಷಗಳ ಅಧಿಕಾರವಧಿಯಲ್ಲಿ 2024ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 99 ಸ್ಥಾನಗಳಲ್ಲಿ ಗೆಲುವು ಸಾಧಿಸುವ ಮೂಲಕ ಸುಧಾರಣೆ ಕಂಡಿದೆ. 2019ರ ಚುನಾವಣೆಯಲ್ಲಿ 52 ಕ್ಷೇತ್ರಗಳಲ್ಲಿ ಮಾತ್ರ ಗೆಲುವು ಸಾಧಿಸಿತ್ತು. ಅಲ್ಲದೇ ಹಿಮಾಚಲ ಪ್ರದೇಶ, ಕರ್ನಾಟಕ, ತೆಲಂಗಾಣದಲ್ಲಿ ಪಕ್ಷ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಿದೆ. ಜಮ್ಮು– ಕಾಶ್ಮೀರದಲ್ಲಿ ಮೈತ್ರಿ ಸರ್ಕಾರದ ಭಾಗವಾಗಿದೆ. ಆದಾಗ್ಯೂ, ಛತ್ತೀಸ್‌ಗಢ, ರಾಜಸ್ಥಾನ, ಹರಿಯಾಣ ಮತ್ತು ಮಧ್ಯಪ್ರದೇಶದಲ್ಲಿ ಅಧಿಕಾರ ಹಿಡಿಯುವಲ್ಲಿ ವಿಫಲವಾಗಿದೆ.

ಪಕ್ಷದ ನಾಯಕರಿಂದ ಅಭಿನಂದನೆ



ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಖರ್ಗೆ ಅವರಿಗೆ ಶುಭ ಕೋರಿ ಪೋಸ್ಟ್ ಮಾಡಿರುವ ರಾಹುಲ್ ಗಾಂಧಿ, ನಿಮ್ಮ ನಾಯಕತ್ವ ಜನರ ಸೇವೆ ಮಾಡುವ ಪಕ್ಷದ ಸಂಕಲ್ಪವನ್ನು ಬಲಪಡಿಸಿದೆ. ನಿಮ್ಮ ಹೋರಾಟ ಮತ್ತು ಅನುಭವ ನಮಗೆ ಸ್ಫೂರ್ತಿಯಾಗಿದೆ. ಸಂವಿಧಾನ ಮತ್ತು ಸಾರ್ವಜನಿಕ ಹಿತಾಸಕ್ತಿಗಳನ್ನು ರಕ್ಷಿಸುವಲ್ಲಿ ನ್ಯಾಯದ ಪ್ರತಿಯೊಬ್ಬ ಯೋಧರಿಗೂ ನಿಮ್ಮ ಮಾರ್ಗದರ್ಶನ ಮೌಲ್ಯಯುತವಾಗಿದೆ ಎಂದು ಬರೆದುಕೊಂಡಿದ್ದಾರೆ.

ಬಡ ದಲಿತ ಕುಟುಂಬದಲ್ಲಿ ಜನಿಸಿದ ಖರ್ಗೆ ಅವರು ಪಕ್ಷದಲ್ಲಿ ಸಾಕಷ್ಟು ಉನ್ನತ ಹುದ್ದೆ ಅಲಂಕರಿಸಿದ್ದಾರೆ. 1996 ರಿಂದ 1999 ರವರೆಗೆ ಕರ್ನಾಟಕ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದರು. 2005 ರಿಂದ 2008 ರವರೆಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದರು. 2021 ರಲ್ಲಿ ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದರು. 2009ರ ಸಾರ್ವತ್ರಿಕ ಚುನಾವಣೆಯಲ್ಲಿ ಗುಲ್ಬರ್ಗಾದಿಂದ ಗೆದ್ದು ಮೊದಲ ಬಾರಿಗೆ ಸಂಸತ್ ಪ್ರವೇಶಿಸಿದ್ದರು.

2020ರಿಂದ ಕರ್ನಾಟಕದಿಂದ ರಾಜ್ಯಸಭಾ ಸದಸ್ಯರಾಗಿದ್ದಾರೆ. 2016 ರಿಂದ 2019 ರವರೆಗೆ 16 ನೇ ಲೋಕಸಭೆಯಲ್ಲಿ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷರಾಗಿದ್ದರು.ಯುಪಿಎ 2 ಸರ್ಕಾರದ ಅವಧಿಯಲ್ಲಿ 2013 ರಿಂದ 2014ರವರೆಗೆ ರೈಲ್ವೆ ಸಚಿವರಾಗಿ ಮತ್ತು 2009 ರಿಂದ 2013 ರವರೆಗೆ ಕೇಂದ್ರ ಸಚಿವ ಸಂಪುಟದಲ್ಲಿ ಕಾರ್ಮಿಕ ಮತ್ತು ಉದ್ಯೋಗ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ.ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯೂ ಆಗಿದ್ದ ಅವರು 2018ರಿಂದ 2020 ರವರೆಗೆ ಮಹಾರಾಷ್ಟ್ರದ ಉಸ್ತುವಾರಿ ಆಗಿದ್ದರು. 1972 ರಿಂದ 2008 ರವರೆಗೆ ಗುರ್ ಮಿಠ್ಕಲ್ ವಿಧಾನಸಭಾ ಕ್ಷೇತ್ರದಿಂದ ಮತ್ತು 2008 ರಿಂದ 2009 ರವರೆಗೆ ಚಿತ್ತಾಪುರ ವಿಧಾನಸಭಾ ಕ್ಷೇತ್ರದಿಂದ ಕರ್ನಾಟಕ ವಿಧಾನಸಭೆಯ ಸದಸ್ಯರಾಗಿದ್ದ ಖರ್ಗೆ ಅವರು ಕರ್ನಾಟಕ ಸರ್ಕಾರದಲ್ಲಿ ಸಚಿವರಾಗಿಯೂ ಸೇವೆ ಸಲ್ಲಿಸಿದ್ದಾರೆ. 2019ರ ಲೋಕಸಭಾ ಚುನಾವಣೆ ಹೊರತುಪಡಿಸಿದರೆ ಉಳಿದೆಲ್ಲಾ ಚುನಾವಣೆಯಲ್ಲೂ ತನ್ನ ವಿರೋಧಿ ಅಭ್ಯರ್ಥಿಗಳನ್ನು ಸೋಲಿಸಿದ ದಾಖಲೆ ಬರೆದಿದ್ದಾರೆ.

ವಿದ್ಯಾರ್ಥಿಗಳು, ರಂಗಾಸಕ್ತರಿಗೆ ಪ್ರಸಾಧನ, ಮುಖವಾಡ ತಯಾರಿಕಾ ಕಾರ್ಯಾಗಾರ



ಮೈಸೂರು ವಿವಿ ಲಲಿತ ಕಲಾ ಕಾಲೇಜಿನಲ್ಲಿ ಶನಿವಾರ ನಡೆದ ಪ್ರಸಾಧನ ಹಾಗೂ ಮುಖವಾಡ ತಯಾರಿಕಾ ಕಾರ್ಯಾಗಾರದಲ್ಲಿ ಯುವತಿಗೆ ವೃದ್ಧೆಯ ಮುಖವರ್ಣಿಕೆ ಮಾಡಿ, ವಿದ್ಯಾರ್ಥಿಗಳಿಗೆ ಪ್ರಸಾಧನದ ಬಗ್ಗೆ ಮಾಹಿತಿ ನೀಡಲಾಯಿತು.

ಮೈಸೂರು, ಅ.26(ಎಸ್‌ಬಿಡಿ)– ಮೈಸೂರು ವಿಶ್ವವಿದ್ಯಾನಿಲಯದ ಲಲಿತಾ ಕಲಾ ಕಾಲೇಜು ಹಾಗೂ ಶ್ರೀ ಗುಬ್ಬಿ ವೀರಣ್ಣ ಪೀಠದ ಸಹಯೋಗದಲ್ಲಿ ಕಾಲೇಜು ವಿದ್ಯಾರ್ಥಿಗಳು ಹಾಗೂ ರಂಗಾಸಕ್ತರಿಗೆ ಒಂದು ದಿನದ ಪ್ರಸಾಧನ ಹಾಗೂ ಮುಖವಾಡ ತಯಾರಿಕಾ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಲಲಿತಾ ಕಲಾ ಕಾಲೇಜು ಆವರಣದಲ್ಲಿ ನಡೆದ ಈ ಕಾರ್ಯಾಗಾರದಲ್ಲಿ ರಂಗಾಯಣದ ಹಿರಿಯ ಕಲಾವಿದ ಸಂತೋಷ್ ಕುಮಾರ್ ಕುಸನೂರ ಅವರು ವಿವಿಧ ರೀತಿಯ ಮುಖವರ್ಣಿಕೆ ಬಗ್ಗೆ ಪ್ರಾಯೋಗಿಕವಾಗಿ ಮಾಹಿತಿ ನೀಡಿದರು. ಅಲ್ಲದೆ ಕಾಗದ ಮತ್ತು ಪಿಓಪಿ ಬಳಸಿ ಮುಖವಾಡಗಳನ್ನು ತಯಾರಿಸುವ ವಿಧಾನವನ್ನು ತಿಳಿಸಿಕೊಟ್ಟರು. ಇದೇ ವೇಳೆ ವಿದ್ಯಾರ್ಥಿಗಳೂ ಮುಖವಾಡಗಳನ್ನು ತಯಾರಿಸಿ, ಪ್ರದರ್ಶನಕ್ಕಿಟ್ಟರು.

ಈ ವೇಳೆ ಶ್ರೀ ಗುಬ್ಬಿ ವೀರಣ್ಣ ಪೀಠದ ರಂಗತಜ್ಞ ಅರಸೀಕೆರೆ ಯೋಗಾನಂದ ಮಾತನಾಡಿ, ವಿದ್ಯಾರ್ಥಿಗಳು ಪ್ರಾಯೋಗಿಕವಾಗಿ ಕಲಿಯುವುದು ಬಹಳ ಮುಖ್ಯ. ಈ ನಿಟ್ಟಿನಲ್ಲಿ ಇಂತಹ ಕಾರ್ಯಾಗಾರಗಳನ್ನು ನಡೆಸುವ ಅಗತ್ಯವಿದೆ. ಮುಂದೆ ಪ್ರತಿ ಶನಿವಾರ ಅಭಿನಯ, ವಾಚಿಕ, ರಂಗಸಂಗೀತ, ವಸ್ತ್ರಾಲಂಕಾರ ಇನ್ನಿತರ ವಿಷಯಗಳ ಕುರಿತು ಕಾರ್ಯಾಗಾರಗಳನ್ನು ನಡೆಸಲಾಗುವುದು ಎಂದು ತಿಳಿಸಿದರು.

ಲಲಿತ ಕಲಾ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಅನಿಟ ವಿಮ್ಲ ಬ್ರಾಗ್ಸ್ ಮಾತನಾಡಿ, ಲಲಿತ ಕಲಾ ಕಾಲೇಜು 60ನೇ ವರ್ಷಕ್ಕೆ ಕಾಲಿಟ್ಟಿದೆ. ವಜ್ರ ಮಹೋತ್ಸವದ ಸಂಭ್ರಮಾಚರಣೆ ನಡುವೆ ಇಂದಿನ ಕಾರ್ಯಾಗಾರದಲ್ಲಿ 80ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡು ಪ್ರಯೋಜನ ಪಡೆದುಕೊಂಡಿದ್ದಾರೆ. ಪ್ರಾಯೋಗಿಕ ಕಲಿಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಈ ರೀತಿಯ ಕಾರ್ಯಾಗಾರಗಳು ನೆರವಾಗುತ್ತವೆ ಎಂದರು.

ಕಾಲೇಜಿನ ಅಧ್ಯಾಪಕರಾದ ಸುಬ್ಬುಲಕ್ಷ್ಮಿ, ಗೀತಾ, ಸೂರ್ಯಪ್ರಭ, ಮೇಘ ಸಮೀರ, ನಾಗೇಂದ್ರ, ರಂಗಕರ್ಮಿಗಳಾದ ಶ್ರೀನಿವಾಸ ಪಾಲಹಳ್ಳಿ, ಕೆಂಪರಾಜು, ನಿಂಗರಾಜ ಚಿತ್ತಣ್ಣ ಮತ್ತಿತರರು ಭಾಗವಹಿಸಿದ್ದರು.

ಕೋಮುದ್ವೇಷ ಹರಡುವಂತಹ ಹೇಳಿಕೆ ಆರೋಪ; ಬಿಜೆಪಿ ನಾಯಕರ ವಿರುದ್ಧ ಪೊಲೀಸರಿಗೆ ದೂರು



ಮೈಸೂರು ಜಿಲ್ಲಾ ಕಾಂಗ್ರೆಸ್ ಅಲ್ಪ ಸಂಖ್ಯಾತರ ಘಟಕದ ವತಿಯಿಂದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಹಾಗೂ ವಾಗ್ಮಿ ಚಕ್ರವರ್ತಿ ಸೂಲಿಬೆಲೆ ವಿರುದ್ಧ ಮೈಸೂರು ಜಿಲ್ಲಾ ಪೊಲೀಸ್ ಹೆಚ್ಚುವರಿ ಅಧೀಕ್ಷಕ(ಎಎಸ್‌ಪಿ) ಎಲ್.ನಾಗೇಶ್ ಅವರಿಗೆ ದೂರು ಸಲ್ಲಿಸಲಾಯಿತು.

ಮೈಸೂರು, ಅ.26(ಎಸ್‌ಬಿಡಿ)– ಮುಸ್ಲಿಂ ಸಮುದಾಯವನ್ನು ಗುರಿಯಾಗಿಸಿಕೊಂಡು ಸಮಾಜದಲ್ಲಿ ಕೋಮು ದ್ವೇಷ ಹರಡುವಂತಹ ಹೇಳಿಕೆಗಳನ್ನು ನೀಡುತ್ತಿದ್ದಾರೆಂದು ಆರೋಪಿಸಿ ಬಿಜೆಪಿ ನಾಯಕರೂ ಸೇರಿದಂತೆ ಮೂವರ ವಿರುದ್ಧ ಮೈಸೂರು ಜಿಲ್ಲಾ ಕಾಂಗ್ರೆಸ್ ಅಲ್ಪ ಸಂಖ್ಯಾತರ ಘಟಕದ ವತಿಯಿಂದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ಶನಿವಾರ ದೂರು ಸಲ್ಲಿಸಲಾಯಿತು.

ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಹಾಗೂ ವಾಗ್ಮಿ ಚಕ್ರವರ್ತಿ ಸೂಲಿಬೆಲೆ ವಿರುದ್ಧ ಎಎಸ್‌ಪಿ ಎಲ್. ನಾಗೇಶ್ ಅವರಿಗೆ ದೂರು ಸಲ್ಲಿಸಿ, ಕೂಡಲೇ ಈ ಮೂವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಲಾಯಿತು.

ಈ ವೇಳೆ ಜಿಲ್ಲಾ ಕಾಂಗ್ರೆಸ್ ಅಲ್ಪ ಸಂಖ್ಯಾತರ ಘಟಕದ ಅಧ್ಯಕ್ಷ ಮೋಸಿನ್ ಖಾನ್ ಮಾತನಾಡಿ, ಈ ಮೂವರು ಮುಸ್ಲಿಂ ಸಮುದಾಯವನ್ನು ಗುರಿಯಾಗಿಸಿಕೊಂಡು ಹೇಳಿಕೆ ನೀಡುವ ಮೂಲಕ ರಾಜ್ಯದಲ್ಲಿ ಕೋಮು ಸೌಹಾರ್ದತೆಯನ್ನು ಹಾಳು ಮಾಡುವ ಪ್ರಯತ್ನ ನಡೆಸಿದ್ದಾರೆ. ಸಮಾಜದ ಶಾಂತಿ ಕದಡುವಂತಹ ಹೇಳಿಕೆಗಳನ್ನು ನೀಡುತ್ತಿರುವ ಇವರ ವಿರುದ್ಧ ಕೂಡಲೇ ಎಫ್‌ಐಆರ್ ದಾಖಲಿಸಿ, ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಘಟಕದ ಜಿಲ್ಲಾ ಉಪಾಧ್ಯಕ್ಷರಾದ ನಾಸೀರ್ ಖಾನ್, ಅಲ್ತಾಫ್ ಪಾಷಾ, ಚಾಮುಂಡೇಶ್ವರಿ ಬ್ಲಾಕ್ ಅಧ್ಯಕ್ಷ ಆರೀಫ್ ಪಾಷಾ, ಹೆಚ್.ಡಿ.ಕೋಟೆ ಬ್ಲಾಕ್ ಅಧ್ಯಕ್ಷ ಶಫಿ ಕೋಟೆ ಮತ್ತಿತರರಿದ್ದರು.

ಮಾಜಿ ಪ್ರಧಾನಿ ದೇವೇಗೌಡರ ನಿವಾಸಕ್ಕೆ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ದಂಪತಿ ಭೇಟಿ

ಗೌಡರ ಪತ್ನಿ ಚನ್ನಮ್ಮರ ಆರೋಗ್ಯ ವಿಚಾರಣೆ



ಬೆಂಗಳೂರು,ಅ.26(ಕೆಎಂಶಿ) – ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು, ಧರ್ಮಪತ್ನಿ ಸುದೇಶ್ ಧನಕರ್ ಅವರೊಂದಿಗೆ ಇಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ನಿವಾಸಕ್ಕೆ ಭೇಟಿ ನೀಡಿ, ಆರೋಗ್ಯ ವಿಚಾರಿಸಿದರು.

ಬೆಳಗ್ಗೆ 9 ಗಂಟೆಗೆ ಆಗಮಿಸಿದ ಉಪ ರಾಷ್ಟ್ರಪತಿ ಒಂದು ಗಂಟೆಗೂ ಹೆಚ್ಚು ಕಾಲ ಇದ್ದು, ದೇವೇಗೌಡ ಅವರ ಪತ್ನಿ ಚನ್ನಮ್ಮ ಅವರ ಆರೋಗ್ಯದ ಬಗ್ಗೆ ವಿಚಾರಿಸಿದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಚನ್ನಮ್ಮ ಅವರು ಆದಷ್ಟು ಬೇಗ ಗುಣಮುಖರಾಗಲಿ ಎಂದು ಹಾರೈಸಿದ ಉಪರಾಷ್ಟ್ರಪತಿಗಳು, ನಂತರ ಅವರನ್ನು ದೆಹಲಿಗೆ ಕರೆದುಕೊಂಡು ಬನ್ನಿ ಎಂದು ದೇವೇಗೌಡರಿಗೆ ತಿಳಿಸಿದರು.

ಉಪ ರಾಷ್ಟ್ರಪತಿಗಳ ಮಾತಿಗೆ ಸಮ್ಮತಿಸಿದ ದೇವೇಗೌಡ ಅವರು, ತಮ್ಮ ಮೇಲೆ ಇಟ್ಟಿರುವ ಪ್ರೀತಿ, ವಿಶ್ವಾಸ, ಅಭಿಮಾನಕ್ಕೆ ಹೃದಯ ತುಂಬಿ ಬಂದಿದೆ. ತಮ್ಮ ಆಗಮನ ನಮ್ಮ ಇಡೀ ಕುಟುಂಬಕ್ಕೆ ಬಹಳ ಸಂತೋಷ ಉಂಟು ಮಾಡಿದೆ ಎಂದು ಕೃತಜ್ಞತೆ ಸಲ್ಲಿಸಿದರು.

ಉಪರಾಷ್ಟ್ರಪತಿ ಜಗದೀಪ್ ಧನಕರ್ ದಂಪತಿ, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಜತೆ ಉಪಾಹಾರ ಸೇವಿಸಿ ದರು. ಬಳಿಕ ಕುಟುಂ ಬದ ಎಲ್ಲಾ ಸದಸ್ಯರ ಕುಶಲೋಪರಿ ವಿಚಾರಿಸಿ, ಪುಟ್ಟ ಮಕ್ಕಳೊಂದಿಗೆ ಉಪ ರಾಷ್ಟ್ರಪತಿ ಗಳು ಕೆಲಕಾಲ ಕಳೆದರು.

ಇದಕ್ಕೂ ಮುನ್ನ ನಿವಾಸಕ್ಕೆ ಆಗಮಿಸಿದ ಉಪರಾಷ್ಟ್ರಪತಿ ಅವರನ್ನು ಕೇಂದ್ರ ಸಚಿವ ಕುಮಾರಸ್ವಾಮಿ ಬರಮಾಡಿಕೊಂಡರು. ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರನ್ನು ಬೀಳ್ಕೊಟ್ಟ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಹೆಚ್.ಡಿ.ಕುಮಾರಸ್ವಾಮಿ, ಉಪರಾಷ್ಟ್ರಪತಿ ಹಾಗೂ ದೇವೇಗೌಡರ ನಡುವೆ ಸ್ನೇಹಪೂರ್ವಕ ಬಾಂಧವ್ಯ ಇದೆ. ಇಬ್ಬರೂ ಪರಸ್ಪರ ಗೌರವಭಾವ ಇರಿಸಿಕೊಂಡಿದ್ದಾರೆ ಎಂದರು.

ಇಬ್ಬರೂ ರೈತ ಕುಟುಂಬದ ಹಿನ್ನೆಲೆಯಿಂದ ಬಂದವರು. ಹೀಗಾಗಿ ಇಬ್ಬರ ಚರ್ಚೆ ಬಹುತೇಕ ಕೃಷಿ ಕೇಂದ್ರಿತವಾಗಿತ್ತು. ರೈತರ ಹಾಗೂ ರಾಷ್ಟ್ರದ ಅಭಿವೃದ್ಧಿ ಬಗ್ಗೆ ಅನೇಕ ಮಹತ್ವದ ವಿಚಾರಗಳನ್ನು ಹಂಚಿಕೊಂಡರು. ಉಪರಾಷ್ಟ್ರಪತಿಗಳು ಹಲವು ಬಾರಿ ಬೆಂಗಳೂರಿಗೆ ಬಂದಾಗ ದೇವೇಗೌಡರ ನಿವಾಸಕ್ಕೆ ಭೇಟಿ ನೀಡುವ ಇಂಗಿತ ವ್ಯಕ್ತಪಡಿಸಿದ್ದರು. ಇಂದು ಭೇಟಿ ನೀಡಿದ್ದು, ನಮ್ಮ ತಾಯಿ ಚನ್ನಮ್ಮ ಅವರ ಆರೋಗ್ಯದ ಬಗ್ಗೆ ವಿಚಾರಿಸಿದರು. ಅವರ ಪ್ರೀತಿ, ವಿಶ್ವಾಸ, ಅಭಿಮಾನಕ್ಕೆ ನಮ್ಮ ಕುಟುಂಬ ಚಿರಋಣಿ ಆಗಿರುತ್ತದೆ ಎಂದರು.

ಪಿಎಚ್.ಡಿಗಿಂತಲೂ ದೊಡ್ಡ ಸಂಸ್ಕೃತಿ ಕಲಿಸಲಿದೆ ರಂಗಭೂಮಿ

ಮಾತಿನ ಮನೆ, ಕಲಾವಿದರೊಂದಿಗೆ ತಿಂಗಳ ಮಾತುಕತೆ ಕಾರ್ಯಕ್ರಮದಲ್ಲಿ ಹಿರಿಯ ರಂಗಭೂಮಿ ಕಲಾವಿದೆ ಜುಲೇಖಾ ಬೇಗಂ ಅಭಿಪ್ರಾಯ

ಮೈಸೂರು, ಅ.26(ಜಿಎ)– ಪಿಎಚ್.ಡಿ ಪಡೆದವರಿಂತಲೂ ದೊಡ್ಡ ಸಂಸ್ಕೃತಿಯನ್ನು ರಂಗಭೂಮಿ ಕಲಿಸಿಕೊಡುತ್ತದೆ. ಇದರಿಂದ ಸಿಗುವ ಒಳ್ಳೆಯ ಬುದ್ಧಿ ಬೇರೆಲ್ಲಿಯೂ ಸಿಗುವುದಿಲ್ಲ. ಕಲಾವಿದರಿಗೆ ಅಹಂಕಾರ ಇರಬಾರದು. ಅಹಂ ಆತನ ಅಧಃಪತನಕ್ಕೆ ಕಾರಣವಾಗುತ್ತದೆ ಎಂದು ಹಿರಿಯ ರಂಗಭೂಮಿ ಕಲಾವಿದೆ ಜುಲೇಖಾ ಬೇಗಂ ತಿಳಿಸಿದರು.



ಮೈಸೂರಿನ ರಂಗಾಯಣದ ವತಿಯಿಂದ ಭೂಮಿಗೀತದಲ್ಲಿ ಶನಿವಾರ ಆಯೋಜಿಸಿದ್ದ ಮಾತಿನ ಮನೆ, ಕಲಾವಿದರೊಂದಿಗೆ ತಿಂಗಳ ಮಾತುಕತೆ ಕಾರ್ಯಕ್ರಮವನ್ನು ನಾಟಕಕಾರ ಕೋಟಿಗಾನಹಳ್ಳಿ ರಾಮಯ್ಯ ಉದ್ಘಾಟಿಸಿದರು.

ಮೈಸೂರಿನ ರಂಗಾಯಣದ ವತಿಯಿಂದ ಭೂಮಿಗೀತದಲ್ಲಿ ಶನಿವಾರ ಆಯೋಜಿಸಿದ್ದ ಮಾತಿನ ಮನೆ, ಕಲಾವಿದರೊಂದಿಗೆ ತಿಂಗಳ ಮಾತುಕತೆ ಕಾರ್ಯಕ್ರಮದಲ್ಲಿ ತಮ್ಮ ರಂಗಭೂಮಿಯ ಅನುಭವವನ್ನು ಹಂಚಿಕೊಂಡರು.

ನಟನೆಯಲ್ಲಿ ಆತ ತಿರಸ್ಕಾರ ಮನೋಭಾವ ಹೊಂದಿದ್ದರೆ ತಕ್ಕ ಬೆಲೆ ಸಿಗುತ್ತದೆ. ಕಲಾವಿದ ಹಸಿವು, ಹಿಂಸೆ ಸಹಿಸಿಕೊಂಡೇ ಪಾತ್ರಕ್ಕೆ ಜೀವ ತುಂಬಬೇಕು ಎಂದು ಕಲಾವಿದರಿಗೆ ಸಲಹೆ ನೀಡಿದರು.

ಕಲಾವಿದನಿಗೆ ಜಾತಿ, ಮತ, ಧರ್ಮ ಇಲ್ಲ. ಆತನ ಜೀವನದಲ್ಲಿ ಕಷ್ಟಗಳು ಒಂದಾದ ಮೇಲೆ ಒಂದರಂತೆ ಬರುತ್ತವೆ. ಕಲಾವಿದ ಶಾಪಗ್ರಸ್ಥ ಗಂಧರ್ವ ಇದ್ದಂತೆ. ಮನೆಗೊಬ್ಬ ಕಲಾವಿದ ಇರಬೇಕು, ಮನೆಗೊಬ್ಬ ಕಲಾವಿದ ಇದ್ದರೆ ಆ ಮನೆಯ ಸಂಸ್ಕೃತಿ ಸುಧಾರಿಸುತ್ತದೆ ಎಂದ ಅವರು, ನನ್ನ ಮಗು ಜನಿಸಿ ನಾಲ್ಕು ದಿನಗಳಿರುವಾಗಲೇ ಅಭಿನಯಿಸಿದ್ದೆ. ಏಕೆಂದರೆ ಕರ್ತವ್ಯಕ್ಕೆ ಕರುಣೆ ಇಲ್ಲ. 8 ದಿವಸ ಕೆಲವೊಮ್ಮೆ 4 ದಿನಗಳಲ್ಲಿಯೇ ಕ್ಯಾಂಪ್ ಮುಗಿಯುತ್ತಿದ್ದವು. ಆ ವೇಳೆಯಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವುದು ದೊಡ್ಡ ಸವಾಲಾಗಿತ್ತು. ಮಕ್ಕಳು ಕಲಾವಿದರಾಗುವುದು ಒಂದು ಕಡೆ, ಆದರೆ ಮಕ್ಕಳಿಗೆ ವಿದ್ಯೆ ಬೇಕೆ ಬೇಕು. ಎಷ್ಟೋ ಸಲ ಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದೆ ಎಂದು ರಂಗಭೂಮಿಯ ಏರಿಳಿತದ ಅನುಭವ ಹಂಚಿಕೊಂಡರು.

ಕಾರ್ಯಕ್ರಮ ಉದ್ಘಾಟಿಸಿದ ನಾಟಕಕಾರ ಕೋಟಿಗಾನಹಳ್ಳಿ ರಾಮಯ್ಯ ಮಾತನಾಡಿ, ಅನೇಕರ ಜೊತೆ ಗಡಿಗಳನ್ನು ನಾವು ಹಂಚಿಕೊಂಡಿದ್ದೇವೆ. ಗಡಿಗಳನ್ನು ಹಂಚಿಕೊಳ್ಳುವುದಕ್ಕಿಂತ ಸುಂದರ ಯಾವುದೂ ಇಲ್ಲ. ಆದರೆ ಇಂದಿನ ದಿನಗಳಲ್ಲಿ ಸುಂದರ ಯಾವುದು ಅಸುಂದರ ಯಾವುದು, ಸಂಸ್ಕೃತಿ, ವಿಕೃತಿ, ನಾಗರಿಕ, ಅನಾಗರಿಕ ಯಾವುದು ಎಂಬ ಗಡಿಗಳು ಮಾಸಿ ಹೋಗುತ್ತಿವೆ ಎಂದರು.

ಇತಿಹಾಸದಲ್ಲಿ ನನ್ನಂತಹವರು, ಕಲಾವಿದರು ಗೋಚರಕ್ಕೆ ಸಿಗದೇ ಇರುವುದಕ್ಕೆ ಕಾರಣಗಳು ಸಾಂಸ್ಕೃತಿಕ ರಾಜಕಾರಣದ ಫಲಿತಗಳಾಗಿರುತ್ತದೆ. ಇನ್ನರ್ ಲೈವ್ಸ್ ಸಿನಿಮಾದಲ್ಲಿರುವಂತೆ ಕಲಾವಿದನಿಗೆ ತನ್ನ ಸೃಜನಶೀಲತೆ, ಅಭಿವ್ಯಕ್ತಿಗೆ ಅವಕಾಶ ಸಿಗದೇ ಇದ್ದಾಗ ರಂಗ ನಿರ್ದೇಶಕ ಏಕಾಂತಕ್ಕೆ ದೂಡಲ್ಪಡುತ್ತಾನೆ. ಸೃಜನಶೀಲತೆಗೆ ಸರ್ಕಾರ ಸಹಾಯ ಮಾಡದೇ ಇದ್ದಾಗ ಆತ ಆತ್ಮಹತ್ಯೆಗೆ ಶರಣಾಗುತ್ತಾನೆ. ಇಂದಿನ ಪ್ರಭುತ್ವಕ್ಕೆ ಇದಕ್ಕೆ ಸಾಕ್ಷಿಯಾಗಿದೆ ಎಂದು ಹೇಳಿದರು.

ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು ಮಾತನಾಡಿ, ಅಳಿವಿನ ಅಂಚಿನಲ್ಲಿರುವ ಕಲೆ ಹಾಗೂ ಕಲಾವಿದರ ಸ್ಮೃತಿಯಲ್ಲಿರುವ ಕಥನಗಳು ಮುಂದಿನ ದಿನಗಳಲ್ಲಿ ಪಠ್ಯವಾಗಬೇಕು, ಕಲೆಯ ನಿಜ ವಾರಸುದಾರರನ್ನು ಗುರುತಿಸಿ ಮನ್ನಣೆ ನೀಡುವ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಇದರಿಂದ ಅಜ್ಞಾತವಾಗಿರುವ ಕಲೆಗಳು ಹೊರ ಬರಲು ಸಾಧ್ಯ ಎಂದರು. ಈ ವೇಳೆ ಕಥೆಗಾರ ಅಬ್ದುಲ್ ರಶೀದ್ ಕಾರ್ಯಕ್ರಮ ನಡೆಸಿಕೊಟ್ಟರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೈಸೂರು ವಿಭಾಗದ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ, ರಂಗಾಯಣ ಉಪನಿರ್ದೇಶಕ ಎಂ.ಡಿ.ಸುದರ್ಶನ್ ಉಪಸ್ಥಿತರಿದ್ದರು.

ಬಿ.ಕೆ.ಹರಿಪ್ರಸಾದ್ ಕ್ಷಮೆಗೆ ಮೈಸೂರು ಬ್ರಾಹ್ಮಣ ಸಂಘ; ತುಳು ಶಿವಳ್ಳಿ ಬ್ರಾಹ್ಮಣ ಸಂಘ ಆಗ್ರಹ

ಮೈಸೂರು, ಅ.26–ಉಡುಪಿ ಪೇಜಾವರ ಮಠಾಧೀಶ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರ ವಿರುದ್ಧ ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರು ಲಘುವಾಗಿ ಮಾತನಾಡಿದ್ದನ್ನು ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘ ಹಾಗೂ ತುಳು ಶಿವಳ್ಳಿ ಬ್ರಾಹ್ಮಣ ಸಂಘ ತೀವ್ರವಾಗಿ ಖಂಡಿಸಿದೆ.

ಪತ್ರಿಕಾ ಹೇಳಿಕೆಯಲ್ಲಿ ಮೈಸೂರು ಜಿಲ್ಲಾ ಹಾಗೂ ನಗರ ಬ್ರಾಹ್ಮಣ ಸಂಘದ ನಗರ ಅಧ್ಯಕ್ಷ ಡಿ.ಟಿ.ಪ್ರಕಾಶ್ ಹಾಗೂ ತುಳು ಶಿವಳ್ಳಿ ಬ್ರಾಹ್ಮಣ ಸಂಘದ ಅಧ್ಯಕ್ಷ ರವಿಶಾಸ್ತ್ರಿ ಜಾತಿ ಗಣತಿ ವಿಚಾರದಲ್ಲಿ ಪೇಜಾವರ ಶ್ರೀಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇದರ ಬಗ್ಗೆ ಹರಿಪ್ರಸಾದ್ ಸ್ವಾಮಿಗಳ ಬಗ್ಗೆ ಅತ್ಯಂತ ಲಘುವಾಗಿ ಮಾತನಾಡಿದ್ದು ಅವರ ಹಿರಿತನದ ರಾಜಕೀಯ ನಾಯಕತ್ವಕ್ಕೆ ಕುಂದು ತಂದಿದೆ ಎಂದರು.

ದೇಶದೆಲ್ಲೆಡೆ ನಮ್ಮ ಬ್ರಾಹ್ಮಣ ಸಮಾಜ ಎಲ್ಲರಿಗೂ ಹಿತವನ್ನು ಬಯಸುವ ಮತ್ತು ಎಲ್ಲರ ಜತೆ ಬೆರೆಯುವ ಒಂದು ಹೃದಯವಂತಿಕೆಯ ಸಮಾಜವಾಗಿದೆ. ಸಮಾಜದ ಒಂದು ಉನ್ನತ ಪೀಠದ ಸ್ವಾಮಿಗಳಿಗೆ ತಮ್ಮ ರಾಜಕೀಯ ಲಾಭಕ್ಕೆ ಕ್ಷುಲ್ಲಕ ಹೇಳಿಕೆ ನೀಡುತ್ತಿದ್ದು ಇದು ಒಂದು ದಿನ ಅವರ ವೈಯಕ್ತಿಕ ಘನತೆಗೆ ಮತ್ತು ಪಕ್ಷಕ್ಕೆ ದೊಡ್ಡ ಹೊಡೆತ ಬೀಳುತ್ತದೆ ಎಂದು ಅವರು ಎಚ್ಚರಿಸಿದರು.

ಕೂಡಲೇ ಹರಿಪ್ರಸಾದ್ ಅವರು ಸ್ವಾಮಿಗಳ ಮತ್ತು ಬ್ರಾಹ್ಮಣ ಸಮಾಜಕ್ಕೆ ಕ್ಷಮೆ ಕೇಳಬೇಕು. ಇಲ್ಲವಾದರೆ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಭಕ್ತವೃಂದದಿಂದ ಹಾಗೂ ಸಮಾಜದ ಎಲ್ಲರ ಜತೆಗೂಡಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಶಬ್ದ, ವಾಯುಮಾಲಿನ್ಯ ಉಂಟು ಮಾಡುವ ಪಟಾಕಿ ನಿಯಂತ್ರಿಸಲು ಕ್ರಮ

ಮೈಸೂರು,ಅ.26(ಆರ್‌ಕೆ)– ದೀಪಾವಳಿ ವೇಳೆ ಶಬ್ದ, ವಾಯುಮಾಲಿನ್ಯ



ಉಂಟು ಮಾಡುವ ಪಟಾಕಿ ಸಿಡಿಸದಂತೆ ಮೈಸೂರು ಮಹಾನಗರಪಾಲಿಕೆ ಕ್ರಮಕ್ಕೆ ಮುಂದಾಗಿದೆ. ಈ ಸಂಬಂಧ ಪಾಲಿಕೆ ಕಚೇರಿ ಸಭಾಂಗಣದಲ್ಲಿ ಪಟಾಕಿ ಮಾರಾಟಗಾರರ ಸಭೆ ನಡೆಸಿದ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಸುಪ್ರೀಂಕೋರ್ಟ್ ಆದೇಶವನ್ನು ಅನುಷ್ಠಾನಗೊಳಿಸಲು ಶಬ್ದ, ವಾಯುಮಾಲಿನ್ಯ ಉಂಟು ಮಾಡುವ ಪಟಾಕಿಗಳ ದಾಸ್ತಾನು ಮತ್ತು ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ಅದಕ್ಕಾಗಿ ಜಿಲ್ಲಾ ಅಗ್ನಿಶಾಮಕ ಪಡೆ, ಸ್ಥಳೀಯ ಸಂಸ್ಥೆ ಮುಖ್ಯಸ್ಥರು, ಆರೋಗ್ಯ ಇಲಾಖೆ ಅಧಿಕಾರಿಗಳು, ತಹಸೀಲ್ದಾರರು, ಪರಿಸರ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ಸರ್ಕಾರೇತರ ಸಂಘ–ಸಂಸ್ಥೆಗಳ ಪ್ರತಿನಿಧಿಗಳನ್ನೊಳಗೊಂಡ ಕಾರ್ಯಪಡೆಗಳನ್ನು ರಚಿಸಲಾಗಿದ್ದು, ಪಟಾಕಿ ಮಾರಾಟಗಾರರ ಗೋದಾಮುಗಳನ್ನು ಪರಿಶೀಲಿಸಿ ಹಸಿರು ಪಟಾಕಿಯಲ್ಲದ, ನಿಷೇಧಿತ ಪಟಾಕಿಗಳನ್ನು ದಾಸ್ತಾನು ಮಾಡಿದ್ದಲ್ಲಿ ಇಡೀ ಗೋದಾಮನ್ನು ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೆ, ಮಾಲೀಕರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.



ಈ ಕುರಿತು ಅ. 23ರಂದು ಸರ್ಕಾರ ಸುತ್ತೋಲೆ ಹೊರಡಿಸಿದೆ. ಪ್ರಮಾಣೀಕರಿಸಿದ ಹಸಿರು ಪಟಾಕಿಗಳ ಪ್ಯಾಕೆಟ್ ಮೇಲೆ ಸಿಎಸ್‌ಐಆರ್ ಲೋಗೋ, ಕ್ಯೂಆರ್ ಕೋಡ್ ಅನ್ನು ಮುದ್ರಿಸಲಾಗಿದೆ. ಈ ಚಿಹ್ನೆಗಳಿಲ್ಲದ ಪಟಾಕಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಎಂದು ಪಾಲಿಕೆ ಆಯುಕ್ತು ತಿಳಿಸಿದ್ದಾರೆ.

ಹಸಿರು ಪಟಾಕಿಗಳನ್ನು ಮಾತ್ರ ಬಳಸಬೇಕು, ಪ್ರಾಣಿ, ಪಕ್ಷಿಗಳು, ಮಕ್ಕಳು ಹಾಗೂ ವೃದ್ಧರಿಗೆ ತೊಂದರೆಯಾಗದಂತೆ ಜಾಗೃತೆ ವಹಿಸಬೇಕು, ಆಸ್ಪತ್ರೆ, ಶಿಕ್ಷಣ ಸಂಸ್ಥೆಗಳ ಸುತ್ತ ಯಾವುದೇ ರೀತಿಯ ಪಟಾಕಿಗಳನ್ನು ಸಿಡಿಸುವಂತಿಲ್ಲ. 2024ರ ಅಕ್ಟೋಬರ್ 31ರಿಂದ ನವೆಂಬರ್ 2ರವರೆಗೆ ಪ್ರತೀದಿನ ರಾತ್ರಿ 8ರಿಂದ 10ರವರೆಗೆ ಮಾತ್ರ ಹಸಿರು ಪಟಾಕಿಗಳನ್ನು ಸಿಡಿಸಬೇಕೆಂದೂ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ತಿಳಿಸಿದ್ದಾರೆ.

ಶಿವಪ್ರಕಾಶ್‌ಗೆ ಸನ್ಮಾನ...



ಮೈಸೂರು ಜಯಲಕ್ಷ್ಮಿಪುರಂ ವಾರ್ಡ್ ನಂ.19ರ ಅಧ್ಯಕ್ಷ ಹಾಗೂ ಕೆ.ಆರ್.ಬ್ಯಾಂಕ್ ನೂತನ ನಿರ್ದೇಶಕ ಶಿವಪ್ರಕಾಶ್ ಅವರನ್ನು ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ಸನ್ಮಾನಿಸಲಾಯಿತು. ಚಿತ್ರದಲ್ಲಿ ಹಿರಿಯ ಮುಖಂಡ ಹಿಮಾಂಶು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಸುಶೀಲಾ ಮರಿಗೌಡ, ಜಯಲಕ್ಷ್ಮಿ, ವಾರ್ಡಿನ ಮೋಹನ್, ಕೇಶವ ಮತ್ತು ರವಿರಾಘವ್ ಇನ್ನಿತರರನ್ನು ಕಾಣಬಹುದು.

ವಿಚಾರ ಸಂಕಿರಣ ಉದ್ಘಾಟನೆ...



ಮೈಸೂರಿನ ಗಾಂಧಿಚೌಕ ಬಳಿಯಿರುವ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನ ಮುಖ್ಯ ಕಚೇರಿಯಲ್ಲಿ ಬ್ಯಾಂಕಿನ ಸದಸ್ಯರು, ಇತರೆ ಪಟ್ಟಣ ಸಹಕಾರ ಬ್ಯಾಂಕ್‌ಗಳ ಅಧ್ಯಕ್ಷರು, ಉಪಾಧ್ಯಕ್ಷರು, ಸಿಇಓಗಳಿಗೆ ಇತ್ತೀಚೆಗೆ ಆಯೋಜಿಸಿದ್ದ ವಿಚಾರ ಸಂಕಿರಣವನ್ನು ಜ್ಯೋತಿ ಬೆಳಗಿಸಿ, ಉದ್ಘಾಟಿಸಲಾಯಿತು. ಈ ವೇಳೆ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ದಿ ರೈಲ್ವೆ ಕೋ–ಪರೇಟಿವ್ ಬ್ಯಾಂಕ್, ದಿ ಗ್ರಾಜ್ಯುಯೇಟ್ಸ್ ಕೋ–ಆಪರೇಟಿವ್ ಬ್ಯಾಂಕ್, ಶ್ರೀ ಕನ್ನಿಕಾ ಪರಮೇಶ್ವರಿ ಕೋ–ಆಪರೇಟಿವ್ ಬ್ಯಾಂಕ್, ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್, ದಿ ಮಹಿಳಾ ಕೋ–ಆಪರೇಟಿವ್ ಬ್ಯಾಂಕ್, ನವನಗರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್, ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್, ಶ್ರೀ ಕೃಷ್ಣರಾಜೇಂದ್ರ ಕೋ–ಆಪರೇಟಿವ್ ಬ್ಯಾಂಕ್‌ನ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಉಪಸ್ಥಿತರಿದ್ದರು.

ಉಚಿತ ತಪಾಸಣೆ; ವಿಶೇಷ ಚಿಕಿತ್ಸಾ ಶಿಬಿರ

ಮೈಸೂರು, ಅ.26–ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ವತಿಯಿಂದ 9ನೇ ಆಯುರ್ವೇದ ದಿನದ ಪ್ರಯುಕ್ತ ಹೊರರೋಗಿ ವಿಭಾಗದ ಸಂಖ್ಯೆ 11ರಲ್ಲಿ ಡಿಸೆಂಬರ್ 25ರವರೆಗೆ ಮುಟ್ಟಿನ ತೊಂದರೆಗಳ ಕುರಿತು ಉಚಿತ ಸಲಹೆ ಮತ್ತು ಚಿಕಿತ್ಸೆ ಶಿಬಿರವನ್ನು ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಸಹ ಪ್ರಾಧ್ಯಾಪಕಿ, ಪ್ರಸೂತಿ ತಂತ್ರ ಸ್ತ್ರೀರೋಗ ವಿಭಾಗದ ಮುಖ್ಯಸ್ಥೆ ಡಾ.ಸುನಿತಾ ಅವರನ್ನು ಸಂಪರ್ಕಿಸಬಹುದು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಅ.26(ಆರ್‌ಕೆ)–ಸಹಕಾರ ಸಪ್ತಾಹದ ಅಂಗವಾಗಿ ಹೋಟೆಲು ಮಾಲೀಕರ ಪತ್ತಿನ ಸಹಕಾರ ಸಂಘವು ಸಾಧನೆಗೈದ ಹೋಟೆಲ್ ಮಾಲೀಕರ ಮಕ್ಕಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಿದೆ. ವೈದ್ಯಕೀಯ, ಇಂಜಿನಿಯರಿಂಗ್, ಸಿಎ, ಎಲ್‌ಎಲ್‌ಬಿ, ಕ್ರೀಡೆ, ಚಲನಚಿತ್ರ, ಸಂಗೀತ, ನೃತ್ಯ, ಪತ್ರಿಕೋದ್ಯಮ, ರಾಜಕೀಯ, ಹೋಟೆಲ್ ಉದ್ಯಮ, ಸಮಾಜ ಸೇವೆ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಹೋಟೆಲು ಉದ್ಯಮಿಗಳ ಮಕ್ಕಳು ಅಕ್ಟೋಬರ್ 31ರೊಳಗೆ ಕೃಷ್ಣಮೂರ್ತಿಪುರಂನಲ್ಲಿರುವ ಸಂಘದ ಕಚೇರಿಗೆ ಅರ್ಜಿ ಸಲ್ಲಿಸಬಹುದೆಂದು ಸಂಘದ ಅಧ್ಯಕ್ಷ ನಾರಾಯಣ ವಿ. ಹೆಗಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ನವೆಂಬರ್ 16ರಂದು ಸಂಜೆ 5 ಗಂಟೆಗೆ ಯಾದವಗಿರಿಯಲ್ಲಿರುವ ದಾಸ್‌ಪ್ರಕಾಶ್ ಪ್ಯಾರಡೈಸ್ ಹೋಟೆಲ್ ಸಭಾಂಗಣದಲ್ಲಿ ನಡೆಯಲಿರುವ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಪ್ರತಿಭಾ ಪುರಸ್ಕಾರ ವಿತರಿಸಲಿದ್ದು, ಸಹಕಾರ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಇಬ್ಬರು ಗಣ್ಯರನ್ನೂ ಸನ್ಮಾನಿಸಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿನಿ ರಕ್ಷಿತಾಗೆ ಸನ್ಮಾನ...



ಮೈಸೂರಿನ ಎನ್.ಆರ್.ಮೊಹಲ್ಲಾದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಹೆಚ್ಚು ಅಂಕ ಗಳಿಸಿ ಉತ್ತಮ ಸಾಧನೆ ಮಾಡಿರುವ ಸೆಕ್ರೆಟರಿಯೇಟ್ ಪ್ರಾಕ್ಟೀಸ್ ವಿಭಾಗದ ವಿದ್ಯಾರ್ಥಿನಿ ಎಸ್.ರಕ್ಷಿತಾ ಅವರನ್ನು ಸನ್ಮಾನಿಸಲಾಯಿತು. ತರಬೇತಿ ಸಂಸ್ಥೆಯ ಪ್ರಭಾರ ಉಪಪ್ರಾಂಶುಪಾಲ ಬೋಪಯ್ಯ, ತರಬೇತಿ ಅಧಿಕಾರಿ ನಾಗೇಶ್, ಹಿರಿಯ ತರಬೇತಿ ಅಧಿಕಾರಿ ಜಿ.ಎಸ್.ಸುಮತಿ ಅವರನ್ನು ಚಿತ್ರದಲ್ಲಿದ್ದಾರೆ.

ಮೈಸೂರು ದಸರಾ ಸುಧಾರಣೆಗಿದು ಸೂಕ್ತ ಸಮಯ

ಮೈಸೂರು, ಅ.26(ಎಸ್‌ಬಿಡಿ)– ಪಾರಂಪರಿಕ ಹಾಗೂ ಚಾರಿತ್ರಿಕ ಹಿನ್ನೆಲೆಯುಳ್ಳ ಮೈಸೂರು ದಸರಾ ಮಹೋತ್ಸವದ ಪಾವಿತ್ರ್ಯತೆ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಮುಂದಾಗಬೇಕು. ದಸರಾ ಪ್ರಾಧಿಕಾರ ಸೇರಿದಂತೆ ಕೆಲವು ಸುಧಾರಣಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಮಾಜಿ ಮೇಯರ್ ಸಂದೇಶ್ ಸ್ವಾಮಿ ಮನವಿ ಮಾಡಿದ್ದಾರೆ.

ಪಾರಂಪರಿಕ ದಸರಾ, ತಾಯಿ ಚಾಮುಂಡೇಶ್ವರಿ ಕೃಪೆಯಿಂದ ವೈಭವೋಪೇತವಾಗಿ ನಡೆದು ಬಂದಿದೆ. ಈ ಬಾರಿ ಹೆಚ್ಚು ಸಂಖ್ಯೆಯ ಜನ ದಸರಾ ಕಣ್ತುಂಬಿಕೊಂಡಿದ್ದಾರೆ. ಆದರೆ ಹಲವು ನ್ಯೂನತೆಗಳು, ವೈಫಲ್ಯಗಳಿಂದಾಗಿ ಜನರ ದಸರಾ ಆಗಲಿಲ್ಲ. ಅರಮನೆ ಆವರಣದಲ್ಲಿ ಆಸನ ವ್ಯವಸ್ಥೆಯಲ್ಲಿನ ಅಧ್ವಾನಕ್ಕೆ ಪರಿಹಾರವಾಗಿಲ್ಲ. ಆರೂವರೆ ಸಾವಿರ ರೂ. ಪಾವತಿಸಿ ಗೋಲ್ಡ್ ಕಾರ್ಡ್ ಪಡೆದವರು, ಟಿಕೆಟ್ ಕೊಂಡವರು, ಉಚಿತ ಪಾಸ್ ಇದ್ದವರು ಅರಮನೆ ಆವರಣದಲ್ಲಿ ದಸರಾ ನೋಡುತ್ತಾರೆ. ಆದರೆ ಸಾಮಾನ್ಯ ಜನ ಮೆರವಣಿಗೆ ಸಾಗುವ ಮಾರ್ಗದಲ್ಲಾದರೂ ಕುಳಿತು ನೆಮ್ಮದಿಯಿಂದ ಜಂಬೂಸವಾರಿ ಕಣ್ತುಂಬಿಕೊಳ್ಳುವಂತಹ ವ್ಯವಸ್ಥೆ ಕಲ್ಪಿಸುವ ಚಿಂತನೆಯೇ ಇಲ್ಲವಾಗಿದೆ ಎಂದು ಪ್ರಕಟಣೆಯಲ್ಲಿ ಬೇಸರ ವ್ಯಕ್ತಪಡಿಸಿದ್ದಾರೆ.

ಮೆರವಣಿಗೆ ಮಾರ್ಗದುದ್ದಕ್ಕೂ ಬೆಳಗ್ಗೆಯಿಂದಲೇ ಜನ ಜಮಾಯಿಸಿರುತ್ತಾರೆ. ಮಹಿಳೆಯರು, ಮಕ್ಕಳು,



ಸಂದೇಶ್ ಸ್ವಾಮಿ

ಹಿರಿಯ ನಾಗರಿಕರು, ವಿಶೇಷಚೇತನರು ಜನದಟ್ಟಣೆಯಲ್ಲಿ ಸಿಲುಕಿ ನಲುಗುತ್ತಾರೆ. ಕುಡಿಯಲು ನೀರಿಲ್ಲದೆ, ಶೌಚಾಲಯಕ್ಕೂ ಹೋಗಲಾಗದೆ ಪರಿತಪಿಸುತ್ತಾರೆ. ಅಂಬಾರಿ ಹೊತ್ತ ಆನೆ ಬರುತ್ತಿದ್ದಂತೆ ನೂಕು ನುಗ್ಗಲು ಹೆಚ್ಚಾಗುತ್ತದೆ. ಒಬ್ಬರ ಮೇಲೊಬ್ಬರು ಬೀಳುತ್ತಾರೆ. ಇದರಿಂದ ಹೆಣ್ಣು ಮಕ್ಕಳು ನರಕಯಾತನೆ ಅನುಭವಿಸುತ್ತಾರೆ. ಚಿಕ್ಕಮಕ್ಕಳ ದುಸ್ಥಿತಿ ಹೇಳತೀರದ್ದಾಗಿರುತ್ತದೆ. ಆ ವೇಳೆ ಪೊಲೀಸರೂ ಅಸಹಾಯಕರಾಗಿರುತ್ತಾರೆ ಎಂದು ತಿಳಿಸಿದ್ದಾರೆ.

ನಮ್ಮ ದಸರಾ ಮಹಾ ಉತ್ಸವದ ವೈಭವವನ್ನು ಕಾಪಾಡಿಕೊಳ್ಳುವುದರ ಜೊತೆಗೆ ವ್ಯವಸ್ಥಿತವಾಗಿ ವೀಕ್ಷಣೆ ಮಾಡಲು ಒಂದಷ್ಟು ಸುಧಾರಣಾ ಕ್ರಮಗಳನ್ನು ಕೈಗೊಳ್ಳುವ ಅನಿವಾರ್ಯತೆ ಇದೆ. ಪುರಭವನ ಆವರಣ ಮಾದರಿಯಲ್ಲಿ ಕೆ.ಆರ್.ಆಸ್ಪತ್ರೆ ಆವರಣದಲ್ಲೂ ಬಹು ಹಂತಗಳ ಆಸನ ವ್ಯವಸ್ಥೆ ಮಾಡಿ, ಹಿರಿಯನಾಗರಿಕರು, ಮಹಿಳೆಯರು, ಮಕ್ಕಳಿಗೆ ದಸರಾ ವೀಕ್ಷಣೆಗೆ ಅವಕಾಶ ಮಾಡಿಕೊಡಬೇಕಿದೆ. ಖಾಸಗಿ ಸಂಘ–ಸಂಸ್ಥೆಗಳ ಸಹಯೋಗದೊಂದಿಗೆ ಚಾಮರಾಜ ಒಡೆಯರ್ ವೃತ್ತದಿಂದ ಬನ್ನಿಮಂಟಪದವರೆಗೂ ಫುಟ್‌ಪಾತ್‌ನಲ್ಲಿ ಆಸನ ವ್ಯವಸ್ಥೆಯೊಂದಿಗೆ ಮಹಿಳೆಯರು–ಮಕ್ಕಳು, ಹಿರಿಯರು, ವಿದೇಶಿ ಪ್ರವಾಸಿಗರಿಗೆ ಪ್ರತ್ಯೇಕ ಗ್ಯಾಲರಿಯನ್ನೂ ಕಾಯ್ದಿರಿಸಬೇಕಿದೆ. ಅಲ್ಲಲ್ಲಿ ಶುದ್ಧ ಕುಡಿಯುವ ನೀರು, ತಾತ್ಕಾಲಿಕ ಶೌಚಾಲಯ, ವೈದ್ಯಕೀಯ ಸೇವೆ, ಪೊಲೀಸ್ ಭದ್ರತೆ ಕಲ್ಪಿಸಿ, ಯಾವುದೇ ಗೊಂದಲ–ಗೋಜಲಿಲ್ಲದೆ ದಸರಾ ವೀಕ್ಷಣೆಗೆ ಅನುವು ಮಾಡಿಕೊಡಬೇಕು ಎಂದು ಮನವಿ ಮಾಡಿದ್ದಾರೆ.

ವಿಜಯದಶಮಿಯಂದು ಬೆಳಗ್ಗೆ 10ರಿಂದ ರಾತ್ರಿ 10ರವರೆಗೂ ರಾಜಪಥದಲ್ಲಿ ಕಾರ್ಯಕ್ರಮ ಪ್ರದರ್ಶನಕ್ಕೂ ಚಿಂತನೆ ನಡೆಸಬಹುದು. ಜಂಬೂಸವಾರಿ ಬನ್ನಿ ಮಂಟಪ ತಲುಪಿ ಪಂಜಿನಕವಾಯತು ಮುಗಿದ ನಂತರ, ಗಜಪಡೆಯೊಂದಿಗೆ ಅಶ್ವಾರೋಹಿ ದಳ, ಮಿಲಿಟರಿ ಪೊಲೀಸರ ಬೈಕ್ ಸವಾರಿ ಇನ್ನಿತರ ಕಲಾತಂಡಗಳು ಅರಮನೆವರೆಗೆ ವಾಪಸ್ಸಾದರೆ ಲಕ್ಷಾಂತರ ಜನ ವೀಕ್ಷಿಸುತ್ತಾರೆ. ದಸರಾ ಹೊಸ್ತಿಲಲ್ಲಿ ಸಿದ್ಧತೆಗೆ ತಿಣುಕಾಡುವ ಬದಲು ದಸರಾ ಪ್ರಾಧಿಕಾರ ರಚಿಸಿದರೆ ಒಳ್ಳೆಯದು. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಪ್ರತೀ ತಿಂಗಳೂ ಅಧಿಕಾರಿಗಳ ಸಭೆ ನಡೆಸಿ, ಪ್ರವಾಸೋದ್ಯಮ, ವಾಣಿಜ್ಯೋದ್ಯಮದ ಮೂಲಕ ಒಂದು ತಿಂಗಳಲ್ಲಿ ವರ್ಷದ ಆರ್ಥಿಕ ಸಂಪನ್ಮೂಲ ಕ್ರೋಢೀಕರಿಸುವ ನಿಟ್ಟಿನಲ್ಲಿ ಯೋಜನೆ ರೂಪಿಸಬೇಕು ಎಂದು ಸಲಹೆ ನೀಡಿದ್ದಾರೆ.

ಸೇವಾ ಕಾರ್ಯಗಳೊಂದಿಗೆ ನಾಳೆ ಜೆಪಿ ಹುಟ್ಟುಹಬ್ಬ

ಮೈಸೂರು,ಅ.26(ಎಂಟಿವೈ)– ಬಿಜೆಪಿ ಮುಖಂಡ ಜಯಪ್ರಕಾಶ್ (ಜೆ.ಪಿ) ಅವರ ಹುಟ್ಟುಹಬ್ಬದ ಅಂಗವಾಗಿ ಅ.28ರಂದು ವಿವಿಧೆಡೆ ಸೇವಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಜೆಪಿ ಅಭಿಮಾನಿ ಬಳಗದ ನಗರಾಧ್ಯಕ್ಷ ಶಿವಕುಮಾರಗೌಡ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅ.28ರಂದು ಬೆಳಗ್ಗೆ 6ಕ್ಕೆ ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ಬಳಿಕ ಚಾಮುಂಡಿಬೆಟ್ಟದಲ್ಲಿ ಪೂಜೆ ನೆರವೇರಿಸಿದ ನಂತರ ಚೆಲುವಾಂಬ ಆಸ್ಪತ್ರೆಯ ಹೊರರೋಗಿಗಳಿಗೆ ಮಧ್ಯಾಹ್ನದ ಊಟ, ಕಿವುಡ ಮೂಕರ ಶಾಲೆ ಮಕ್ಕಳಿಗೆ ಊಟ, ಬೃಂದಾವನ ಬಡಾವಣೆ ಚಿಲ್ಡ್ರನ್ಸ್ ಹೋಂ ಮಕ್ಕಳಿಗೆ ಹಣ್ಣು ಹಂಪಲು ವಿತರಣೆ ಹಾಗೂ ಇನ್ನಿತರೆಡೆ ವಿವಿಧ ಸೇವಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು. ಗೋಷ್ಠಿಯಲ್ಲಿ ಅಭಿಮಾನಿ ಬಳಗದ ಸದಸ್ಯರಾದ ಭಾಗ್ಯಮ್ಮ, ನಾಗರಾಜು, ಕಿಶೋರ್ ಹಾಗೂ ಪ್ರದೀಪ್ ಮತ್ತಿತರರು ಇದ್ದರು.

ದೇಶ - ವಿದೇಶ

ಬಾಂಗ್ಲಾದೇಶದಲ್ಲಿ ಹಿಂದೂಗಳ ಬೃಹತ್ ಪ್ರತಿಭಟನೆ

ಚಿತ್ತಗಾಂಗ್: ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತ ವ್ಯವಹಾರ ಸಚಿವಾಲಯ ತೆರೆಯುವುದು ಸೇರಿದಂತೆ ಪ್ರಮುಖ 8 ಬೇಡಿಕೆಗಳನ್ನು ಮಧ್ಯಂತರ ಸರ್ಕಾರ ಈಡೇರಿಸುವಂತೆ ಒತ್ತಾಯಿಸಿ ಸಹಸ್ರಾರು ಹಿಂದೂಗಳು ಬೃಹತ್ ಪ್ರತಿಭಟನೆ ನಡೆಸಿದರು.

ಪ್ರಮುಖ ಬೇಡಿಕೆಗಳು: ಅಲ್ಪಸಂಖ್ಯಾತರ ದೌರ್ಜನ್ಯಗಳಲ್ಲಿ ಭಾಗಿಯಾಗಿರುವವರ ವಿಚಾರಣೆಯನ್ನು ತ್ವರಿತಗೊಳಿಸಲು ನ್ಯಾಯಮಂಡಳಿ ರಚನೆ, ಸಂತ್ರಸ್ತರಿಗೆ ಸೂಕ್ತ ಪರಿಹಾರ ಮತ್ತು ಪುನರ್ವಸತಿ, ವಿಳಂಬವಿಲ್ಲದೆ ಅಲ್ಪಸಂಖ್ಯಾತರ ರಕ್ಷಣೆಯ ಕಾನೂನು ಜಾರಿಗೊಳಿಸುವುದು, ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯದ ರಚನೆ, ಪ್ರತಿ ಶಿಕ್ಷಣ ಸಂಸ್ಥೆಗಳಲ್ಲಿ ಅಲ್ಪಸಂಖ್ಯಾತರ ಪ್ರಾರ್ಥನಾ ಸ್ಥಳಗಳ ನಿರ್ಮಾಣ, ಪ್ರತಿ ಹಾಸ್ಟೆಲ್‌ನಲ್ಲಿ ಪ್ರಾರ್ಥನಾ ಕೊಠಡಿಗಳ ಸ್ಥಾಪನೆ, ಸಂಸ್ಕೃತ ಮತ್ತು ಪಾಲಿ ಶಿಕ್ಷಣ ಮಂಡಳಿಯ ಆಧುನೀಕರಣ. ಈ ಪ್ರತಿಭಟನೆ ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ಸುರಕ್ಷತೆಯ ಬಗ್ಗೆ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

ಆಗಸ್ಟ್ 5 ರಂದು ಶೇಖ್ ಹಸೀನಾ ಅವರನ್ನು ಪದಚ್ಯುತಗೊಳಿಸಿದ ನಂತರ ಹಿಂದೂ ಸಮುದಾಯದ ಅತೀ ದೊಡ್ಡ ಸಭೆಗಳಲ್ಲಿ ಇದು ಒಂದಾಗಿದೆ.

ನಮಗೆ ಹಿಂದಿ ಬರಲ್ಲ, ಇಂಗ್ಲಿಷ್‌ನಲ್ಲಿ ಪತ್ರ ಕಳುಹಿಸಿ

ಚೆನ್ನೈ: ಕೇಂದ್ರ ಸಚಿವ ರವನೀತ್ ಸಿಂಗ್ ಬಿಟ್ಟು ಹಿಂದಿಯಲ್ಲಿ ಬರೆದಿರುವ ಪತ್ರಕ್ಕೆ ಡಿಎಂಕೆ ನಾಯಕ ಹಾಗೂ ರಾಜ್ಯಸಭಾ ಸಂಸದ ಎಂಎಂ ಅಬ್ದುಲ್ಲಾ ಟಾಂಗ್ ಕೊಟ್ಟು ಪ್ರತಿಕ್ರಿಯೆ ನೀಡಿದ್ದಾರೆ.



ಕೇಂದ್ರ ಸಚಿವ ರವನೀತ್ ಸಿಂಗ್ ಬಿಟ್ಟು ಬರೆದಿರುವ ಪತ್ರಕ್ಕೆ ಪ್ರತಿಕ್ರಿಯೆ ನೀಡಿರುವ ಅವರು, ತನಗೆ ಹಿಂದಿ ಅರ್ಥವಾಗುತ್ತಿಲ್ಲ ಎಂದು ಹೇಳಿದ್ದಾರೆ. ಅಲ್ಲದೇ, ಅಧಿಕೃತ ಪತ್ರಗಳನ್ನು ಇಂಗ್ಲಿಷ್‌ನಲ್ಲಿ ಕಳುಹಿಸಬೇಕು ಎಂದು ಮನವಿ ಮಾಡಿದ್ದಾರೆ.

ಅ.21 ರಂದು ಕೇಂದ್ರ ರೈಲ್ವೇ ಖಾತೆ ರಾಜ್ಯ ಸಚಿವರ ಪತ್ರದ ನಂತರ ಡಿಎಂಕೆ ಸಂಸದರ ಪ್ರತಿಕ್ರಿಯೆ ಬಂದಿದೆ, ಇದರಲ್ಲಿ ರೈಲುಗಳಲ್ಲಿನ ಆಹಾರದ ಸ್ವಚ್ಛತೆ ಮತ್ತು ಗುಣಮಟ್ಟದ ಬಗ್ಗೆ ಕಳವಳ ವ್ಯಕ್ತಪಡಿಸಲಾಗಿದೆ. ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಡಿಎಂಕೆ ಸಂಸದರು, ರೈಲ್ವೆ ಖಾತೆ ರಾಜ್ಯ ಸಚಿವರ ಕಚೇರಿಯ ಪತ್ರವು ಯಾವಾಗಲೂ ಹಿಂದಿಯಲ್ಲಿರುತ್ತದೆ ಎಂದು ಹೇಳಿದ್ದಾರೆ. ಅವರ ಕಚೇರಿಯಲ್ಲಿ ನಿಯೋಜನೆಗೊಂಡಿರುವ ಅಧಿಕಾರಿಗಳಿಗೆ ಕರೆ ಮಾಡಿ ನನಗೆ ಹಿಂದಿ ಬರುವುದಿಲ್ಲ, ದಯವಿಟ್ಟು ಇಂಗ್ಲಿಷ್‌ನಲ್ಲಿ ಪತ್ರ ಕಳುಹಿಸಿ, ಪತ್ರ ಹಿಂದಿಯಲ್ಲಿದೆ ಎಂದು ಹೇಳಿದ್ದೇನೆ. ಇನ್ನು ಮುಂದೆ ಅಧಿಕೃತ ಪತ್ರಗಳನ್ನು ಇಂಗ್ಲಿಷ್‌ನಲ್ಲಿ ಕಳುಹಿಸಬೇಕು ಎಂದು ಹೇಳಿದ್ದಾರೆ.

ಕೆನಡಾ ವೀಸಾ ಪ್ರಮಾಣ ಕಡಿತ: ವಲಸಿಗ ಭಾರತೀಯರ ಮೇಲೆ ಪರಿಣಾಮ

ಕೆನಡಾ: ಭಾರತದೊಂದಿಗೆ ಇತ್ತೀಚೆಗೆ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆ ಕೇಸಿನಲ್ಲಿ ಆರೋಪಕ್ಕಿಳಿದು ಸುದ್ದಿಯಾಗಿದ್ದ ಕೆನಡಾದ ಜಸ್ಟಿನ್ ಟ್ರುಡೊ ಸರ್ಕಾರವು ಮುಂದಿನ ವರ್ಷದಿಂದ ತನ್ನ ಜನಸಂಖ್ಯೆಗೆ ತಕ್ಕಂತೆ ವಲಸಿಗರಿಗೆ ವೀಸಾ ನೀಡುವ ಪ್ರಮಾಣದಲ್ಲಿ ಶೇ.20ರಷ್ಟು ಕಡಿತಗೊಳಿಸಲು ನಿರ್ಧರಿಸಿದೆ. ಕೋವಿಡ್ ಸಮಯದಲ್ಲಿ ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೋ ಅವರು, 2025–2026ರಲ್ಲಿ ತಲಾ 5 ಲಕ್ಷ ವಲಸಿಗರಿಗೆ ಅವಕಾಶ ನೀಡುವುದಾಗಿ ಘೋಷಿಸಿದ್ದಾಗ, ಉದ್ಯೋಗಿಗಳ ಅಗತ್ಯಗಳನ್ನು ಪರಿಹರಿಸುವ ಮತ್ತು ಜನಸಂಖ್ಯೆಯ ಬೆಳವಣಿಗೆಯನ್ನು ನಿರ್ವಹಿಸುವ ನಡುವೆ ಸರಿಯಾದ ಸಮತೋಲನ ಹೊಂದಿರಲಿಲ್ಲ ಎಂದು ಹೇಳಿದ್ದಾರೆ. ಇದೀಗ ಕೆನಡಾದ ಹೊಸ ಯೋಜನೆಯ ಪ್ರಕಾರ, 2025ರಲ್ಲಿ 3.95 ಲಕ್ಷ ಹೊಸ ಖಾಯಂ ನಿವಾಸಿಗಳಿಗೆ ಅವಕಾಶ ನೀಡಲಾಗುವುದು, ಅದು ಈ ವರ್ಷದ 4.85 ಲಕ್ಷದಿಂದ ಕಡಿಮೆಯಾಗಿದೆ. 2026 ಮತ್ತು 2027ರ ಪರಿಷ್ಕೃತ ಗುರಿಗಳು ಕ್ರಮವಾಗಿ 3.8 ಲಕ್ಷ ಮತ್ತು 3.65 ಲಕ್ಷಗಳಾಗಿವೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ವಿದ್ಯಾರ್ಥಿ ವೀಸಾಗಳನ್ನು ಸುಮಾರು ಶೇ.35ರಷ್ಟು ಕಡಿತಗೊಳಿಸಿದ ನಂತರ ಈ ಪ್ರಕಟಣೆ ಬಂದಿದೆ. ಇದಲ್ಲದೆ, ವಿದ್ಯಾರ್ಥಿ ವೀಸಾಗಳನ್ನು 2 ವರ್ಷಗಳವರೆಗೆ 3,60,000ಕ್ಕೆ ಮಿತಿಗೊಳಿಸಲಾಯಿತು.



ವಸತಿ ಶಾಲೆ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಶಿಕ್ಷಕನ ಬಂಧನ

ದಾಹೋದ್: ಗುಜರಾತ್‌ನ ದಾಹೋದ್ ಜಿಲ್ಲೆಯ ವಸತಿ ಶಾಲೆಯ ಒಂಬತ್ತನೇ ತರಗತಿಯ ಬುಡಕಟ್ಟು ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಶಿಕ್ಷಕನನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಖಲ್ತಾ ಗ್ರಾಮದ ಆದಿವಾಸಿಗಳ ವಸತಿ ಶಾಲೆಯಲ್ಲಿ ಈ ಘಟನೆ ನಡೆದಿದ್ದು, ಆರೋಪಿಯನ್ನು ಕಲ್ಪೇಶ್ ಬರಿಯಾ ಎಂದು ಗುರುತಿಸಲಾಗಿದೆ. ಬರಿಯಾ ಗುರುವಾರ ಸಂಜೆ 17 ವರ್ಷದ ವಿದ್ಯಾರ್ಥಿನಿಯನ್ನು ಅಡುಗೆ ಮಾಡುವ ನೆಪದಲ್ಲಿ ಖಾಲ್ತಾ ಆಶ್ರಮ ಶಾಲಾ ಕ್ಯಾಂಪಸ್‌ನಲ್ಲಿರುವ ತನ್ನ ಕ್ವಾರ್ಟರ್ಸ್‌ಗೆ ಕರೆದು ಲೈಂಗಿಕ ಕಿರುಕುಳ ನೀಡಿದ್ದಾನೆ. ಶಿಕ್ಷಕ, ವಿದ್ಯಾರ್ಥಿನಿಯನ್ನು ಹಿಂಬದಿಯಿಂದ ಹಿಡಿದುಕೊಂಡಿದ್ದಾರೆ. ವಿದ್ಯಾರ್ಥಿನಿ ಆತನಿಂದ ತಪ್ಪಿಸಿಕೊಂಡು ಹೊರ ಬರುವಲ್ಲಿ ಯಶಸ್ವಿಯಾಗಿದ್ದು, ಸ್ಥಳಕ್ಕೆ ತನ್ನ ತಂಗಿಯನ್ನು ಕರೆದಿದ್ದಾಳೆ. ಅದೇ ಶಾಲೆಯಲ್ಲಿ ಓದುತ್ತಿರುವ ಆಕೆಯ ಒಡಹುಟ್ಟಿದವರಿಗೆ ಈ ವಿಷಯ ತಿಳಿದ ನಂತರ ಅವರು ತಮ್ಮ ತಂದೆಗೆ ಮಾಹಿತಿ ನೀಡಿದ್ದಾರೆ. ನಂತರ ಕುಟುಂಬದವರು, ಬರಿಯಾ ವಿರುದ್ಧ ಶುಕ್ರವಾರ ಪೊಲೀಸರಿಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು ಆರೋಪಿ ಶಿಕ್ಷಕನನ್ನು ಬಂಧಿಸಲಾಯಿತು ಎಂದು ಹೇಳಿದ್ದಾರೆ.

ಇಸ್ರೇಲ್‌ನಿಂದ ಕ್ಷಿಪಣಿ ತಯಾರಿಕಾ ಧ್ವಂಸ

ಜೆರುಸಲೇಂ: ಶನಿವಾರ ಬೆಳ್ಳಂಬೆಳಿಗ್ಗೆ ಇರಾನ್‌ಗೆ ಇಸ್ರೇಲ್ ಸೇನಾ ಪಡೆಗಳು ಶಾಕ್ ನೀಡಿವೆ. ತನ್ನ ಮೇಲಿನ ದಾಳಿಗೆ ಪ್ರತಿಕಾರವಾಗಿ ಇರಾನ್‌ನ ಸೇನಾ ನೆಲೆಗಳನ್ನು ಗುರಿ ಯಾಗಿಸಿ ದಾಳಿ ನಡೆಸುತ್ತಿರುವುದಾಗಿ ಇಸ್ರೇಲ್ ತಿಳಿಸಿದೆ. ಅಕ್ಟೋಬರ್ 1ರಂದು ಇಸ್ರೇಲ್ ಮೇಲೆ ಇರಾನ್ ಸುಮಾರು 200 ಕ್ಷಿಪಣಿ ಗಳನ್ನು ಉಡಾಯಿಸಿತ್ತು. ಕಳೆದ ಆರು ತಿಂಗಳಲ್ಲಿ ಇಸ್ರೇಲ್ ಮೇಲೆ ಇರಾನ್ ನಡೆಸಿದ ಎರಡನೇ ನೇರ ದಾಳಿ ಇದಾಗಿತ್ತು. ಇದಕ್ಕೆ ಇಸ್ರೇಲ್ ಪ್ರತೀಕಾರ ತೀರಿಸಿಕೊಂಡಿದೆ. ಇತ್ತೀಚಿನ ತಿಂಗಳಲ್ಲಿ ಇಸ್ರೇಲ್ ದೇಶ ಹಾಗೂ ನಾಗರಿಕರ ವಿರುದ್ಧದ ಇರಾನಿಯನ್ ಆಡಳಿತದ ದಾಳಿಗಳಿಗೆ ಪ್ರತಿಯಾಗಿ ಈ ದಾಳಿ ನಡೆಸಲಾಗಿದೆ. ಪ್ರತೀಕಾರದ ದಾಳಿಯು ಪೂರ್ಣಗೊಂಡಿದ್ದು, ಯೋಜನೆ ಫಲಪ್ರದಗೊಂಡಿದೆ ಎಂದು ಇಸ್ರೇಲ್ ತಿಳಿಸಿದೆ. ಇಸ್ರೇಲ್ ನೆಲದ ಮೇಲಿನ ಕ್ಷಿಪಣಿ ದಾಳಿಗಳು ಸೇರಿದಂತೆ ಟೆಹರಾನ್ ಮತ್ತು ಅದರ ಮಿತ್ರ ಬಣಗಳ ಆಕ್ರಮಣಕ್ಕೆ ಪ್ರತಿಕ್ರಿಯೆ ನೀಡುವುದು ತನ್ನ ಹಕ್ಕು ಮತ್ತು ಕರ್ತವ್ಯ ಎಂದು ಇಸ್ರೇಲ್ ಪ್ರತಿಪಾದಿಸಿದೆ. ನಮ್ಮ ರಕ್ಷಣಾ ಹಾಗೂ ಆಕ್ರಮಣದ ಸಾಮರ್ಥ್ಯಗಳನ್ನು ಸಂಪೂರ್ಣ ಸನ್ನದ್ಧಗೊಳಿಸಲಾಗಿದೆ ಎಂದು ಅದು ತಿಳಿಸಿದೆ. ಆದರೆ ಈ ದಾಳಿಯಲ್ಲಿ ಉಂಟಾಗಿರುವ ಹಾನಿ ಪ್ರಮಾಣ ಹಾಗೂ ಸಾವು–ನೋವುಗಳ ವಿವರ ಖಚಿತವಾಗಿಲ್ಲ.



ಕೊಂದಿದ್ದು ತೆಲಂಗಾಣದಲ್ಲಿ, ಸುಟ್ಟಾಕಿದ್ದು ಸುಂಟಿಕೊಪ್ಪದಲ್ಲಿ!

ಬಾಯ್‌ಫ್ರೆಂಡ್‌ಗಳೊಂದಿಗೆ ಖತರ್ನಾಕ್ ಹೆಂಡತಿಯ ಮಾಸ್ಟರ್ ಪ್ಲಾನ್ ಫೇಲ್!


ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡುತ್ತಿರುವ ಕೊಡಗು ಎಸ್ಪಿ ರಾಮರಾಜನ್ .

ಮಡಿಕೇರಿ, ಅ.26–ಸುಂಟಿಕೊಪ್ಪ ಬಳಿಯ ಕಾಫಿ ತೋಟದಲ್ಲಿ ಪತ್ತೆಯಾದ ಸುಟ್ಟು ಕರಕಲಾಗಿದ್ದ ಅಪರಿಚಿತ ವ್ಯಕ್ತಿಯ ಕೊಲೆ ಪ್ರಕರಣವನ್ನು ಕೊಡಗು ಪೊಲೀಸರು ಭೇದಿಸಿದ್ದಾರೆ. ಈ ಸಂಬಂಧ ಮಹಿಳೆಯೂ ಸೇರಿದಂತೆ ಮೂವರನ್ನು ಪೊಲೀಸರು ಬಂಧಿಸಿದ್ದಾರೆ. ತೆಲಂಗಾಣದಲ್ಲಿ ತನ್ನ ಎರಡನೇ ಪತಿಯನ್ನು ಹತ್ಯೆಗೈದು ಕೊಡಗಿಗೆ ತಂದು ದಹಿಸಿದ ಮಹಿಳೆ ಹಾಗೂ ಆಕೆಯ ಇಬ್ಬರು ಬಾಯ್ ಫ್ರೆಂಡ್‌ಗಳದ್ದು ಭಯಾನಕ ಕಹಾನಿ.

ತೆಲಂಗಾಣದ ಯಾದಾದ್ರಿ ಜಿಲ್ಲೆಯ ಮೋಂಗೀರ್ ನಗರದ ಪಿ.ನಿಹಾರಿಕ(29), ಬಾಯ್‌ಫ್ರೆಂಡ್‌ಗಳಾದ ಆಂಧ್ರದ ಕಡಪ ಜಿಲ್ಲೆ, ವಾಸವಿ ನಗರದ ಪಶುವೈದ್ಯ ನಿಖಿಲ್ ಮೈರೆಡ್ಡಿ(29) ಮತ್ತು ಹರಿಯಾಣದ ಕಾರ್ನಲ್ ನಗರದ ಅಂಕೂರ್ ರಾಣಾ (30)ರೊಂದಿಗೆ ಸೇರಿ ಈ ಕೃತ್ಯವೆಸಗಿದ್ದಾಳೆ.

ವಿವರ: ಕೊಡಗಿನ ಸುಂಟಿಕೊಪ್ಪ ಸಮೀಪದ ಪನ್ಯ ತೋಟದ ಮಾರಿಗುಡಿ ಬಳಿಯ ಪನ್ಯದ ಸಂದೇಶ್ ಎಂಬುವರ ಕಾಫಿ ತೋಟದಲ್ಲಿ ಅ.8ರಂದು ಬೆಳಿಗ್ಗೆಯೇ ಅಪರಿಚಿತ ವ್ಯಕ್ತಿಯ ಕರಕಲಾದ ಶವ ಪತ್ತೆಯಾಗಿತ್ತು. ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ ವೇಳೆ ಈ ವ್ಯಕ್ತಿಯನ್ನು ನಾಲ್ಕೈದು ದಿನದ ಹಿಂದೆಯೇ ಬೇರೆಲ್ಲೋ ಹತ್ಯೆ ಮಾಡಿ ಶವವನ್ನು ಇಲ್ಲಿಗೆ ತಂದು ಸುಟ್ಟು ಹಾಕಲಾಗಿದೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ. ಆದರೆ ಸತ್ತ ವ್ಯಕ್ತಿ ಯಾರು?

ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಕೊಡಗು ಎಸ್ಪಿ ಕೆ.ರಾಮರಾಜನ್ ಅವರು ಅಡಿಷನಲ್ ಎಸ್ಪಿ ಕೆ.ಎಸ್.ಸುಂದರ ರಾಜ್ ಮಾರ್ಗದರ್ಶನದಲ್ಲಿ ಸೋಮವಾರಪೇಟೆ ಡಿವೈಎಸ್‌ಪಿ ಆರ್.ವಿ.ಗಂಗಾಧರಪ್ಪ ನೇತೃತ್ವದಲ್ಲಿ ಒಟ್ಟು 16 ಮಂದಿಯ 4 ವಿಶೇಷ ತಂಡ ರಚಿಸಿದ್ದರು.

ಯಾವುದೇ ಸುಳಿವಿಲ್ಲದ ಪ್ರಕರಣವನ್ನು ಬೆನ್ನತ್ತಿದ ವಿಶೇಷ ತಂಡ ಶವ ದೊರೆತ ಕಾಫಿ ತೋಟವನ್ನು ಸಂಪರ್ಕಿಸುವ ರಸ್ತೆಗಳಲ್ಲಿರುವ ಸಿಸಿ ಕ್ಯಾಮರಾಗಳಲ್ಲಿ ಅ.7ರಂದು ರಾತ್ರಿ ಸಂಚರಿಸಿದ ವಾಹನಗಳ ಪರಿಶೀಲನೆ ನಡೆಸಿದಾಗ ಅವರಿಗೆ ಮರ್ಸಿಡಿಸ್ ಬೆನ್ಜ್ ಕಾರೊಂದು (ಟಿ.ಎಸ್.07 ಎಫ್.ಎಸ್. 5679) ಸಂಶಯಾಸ್ಪದವಾಗಿ ಕಂಡು ಬಂದಿದೆ. ಈ ಕಾರು ಶವ ದೊರೆತ ಸ್ಥಳದ ಕಡೆಗೆ ಅ.7ರಂದು ರಾತ್ರಿಯೇ ಹೋಗಿರುವುದು, ವಾಪಸ್ ತೆರಳಿರುವುದು ಸಂಶಯಕ್ಕೆ ಕಾರಣವಾಗಿದೆ. ತೆಲಂಗಾಣ ನೋಂದಣಿ ಸಂಖ್ಯೆಯಿರುವ ಕಾರಿನಲ್ಲಿ ಬಂದವರು ಪ್ರವಾಸಕ್ಕಾಗಿ ಬಂದಿದ್ದರೇ, ರಾತ್ರಿಯೇ ಬಂದು ಆಗಲೇ ವಾಪಸ್ ಹೋಗುತ್ತಿರಲಿಲ್ಲ. ಹೀಗಾಗಿ ಹಂತಕರು ಈ ಕಾರನ್ನೇ ಬಳಸಿರಬಹುದು ಎಂಬ ಸಂಶಯದ ಮೇರೆಗೆ ಕಾರಿನ ಮಾಲೀಕನ ಪತ್ತೆಗೆ ಮುಂದಾಗಿದ್ದಾರೆ.

ಈ ಕಾರು ಹೈದರಾಬಾದ್‌ನ ರಿಯಲ್ ಎಸ್ಟೇಟ್ ಉದ್ಯಮಿ ರಮೇಶ್ ಕುಮಾರ್ (54) ಎಂಬಾತನಿಗೆ ಸೇರಿದ್ದು ಎಂಬುದನ್ನು ಪತ್ತೆ ಹಚ್ಚಿದ ಪೊಲೀಸರು, ಆತನೇ ಹಂತಕನಿರಬಹುದು ಎಂಬ ನಿಟ್ಟಿನಲ್ಲಿ ಹೈದರಾಬಾದ್‌ಗೆ ತೆರಳಿ, ತನಿಖೆಗಿಳಿದರೆ ಆತ ಕೆಲ ದಿನಗಳಿಂದ ನಾಪತ್ತೆಯಾಗಿರುವುದು ತಿಳಿದು ಬಂದಿದೆ. ಆತನ ಬಗ್ಗೆ ಮಾಹಿತಿ ಕಲೆ ಹಾಕಿದಾಗ ಆತನಿಗೆ ನಿಹಾರಿಕ ಎಂಬ ಹೆಸರಿನಲ್ಲಿ ಎರಡನೇ ಪತ್ನಿ ಇರುವುದು ಗೊತ್ತಾಗಿದೆ. ಟವರ್ ಲೊಕೇಷನ್ ಮೂಲಕ ಪತ್ತೆಯಾದ ಮೊಬೈಲ್ ಸಂಖ್ಯೆಗಳಲ್ಲಿ ಶವ ದೊರೆತ ಸ್ಥಳದ ಟವರ್‌ನಲ್ಲಿ ನಿಹಾರಿಕ ಮೊಬೈಲ್ ಕಾರ್ಯ ನಿರ್ವಹಿಸಿರುವುದು ಕಂಡು ಬಂದಿದೆ. ಆದರೆ ಶವ ದೊರೆತ ಎರಡ್ಮೂರು ದಿನಗಳಿಂದಲೇ ಉದ್ಯಮಿ ರಮೇಶ್ ಕುಮಾರ್‌ನ ಮೊಬೈಲ್ ಸ್ವಿಚ್ ಆಫ್ ಆಗಿದೆ. ಅದೇ ವೇಳೆ ಹತ್ಯೆಗೀಡಾದವನು ಉದ್ಯಮಿ ರಮೇಶ್ ಕುಮಾರ್ ಎಂಬುದೂ ಪೊಲೀಸರಿಗೆ ಖಚಿತವಾಗಿದೆ.

ತಕ್ಷಣವೇ ಕಾರ್ಯೋನ್ಮುಖರಾದ ಕೊಡಗು ಪೊಲೀಸರು, ಬೆಂಗಳೂರಿನ ಹೊರಮಾವಿನಲ್ಲಿದ್ದ ನಿಹಾರಿಕ ಮತ್ತು ಆಕೆಯ ಬಾಯ್ ಫ್ರೆಂಡ್ ಪಶುವೈದ್ಯ ನಿಖಿಲ್ ಮೈರೆಡ್ಡಿಯನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ ಹತ್ಯಾ ಪ್ರಕರಣ ಬಯಲಾಗಿದೆ.

ಯಾರೀ ನಿಹಾರಿಕ?: ತೆಲಂಗಾಣದ ಮೊಂಗೀರ್‌ನಗರದ ಪ್ರತಿಭಾನ್ವಿತ ವಿದ್ಯಾರ್ಥಿನಿ ನಿಹಾರಿಕ ತಂದೆ ಆಕೆಯ 16ನೆಯ ವಯಸ್ಸಿನಲ್ಲಿಯೇ ಮೃತಪಟ್ಟ ಕಾರಣ ತಾಯಿ ಆಕೆಗೆ ಮದುವೆ ಮಾಡಿದ್ದರು. ಎರಡು ಮಕ್ಕಳಾದ ನಂತರ ಗಂಡನಿಗೆ ವಿಚ್ಛೇದನ ನೀಡಿ, ಮಕ್ಕಳನ್ನು ಬಿಟ್ಟು, ಶಿಕ್ಷಣ ಮುಂದುವರೆಸಿದ ಈಕೆ ಇಂಜಿನಿಯರಿಂಗ್ ಪದವೀಧರೆಯಾಗಿ ಬೆಂಗಳೂರಿನ ಐಟಿ ಕಂಪನಿಯಲ್ಲಿ ಉದ್ಯೋಗ ಗಿಟ್ಟಿಸಿಕೊಂಡು 1.20 ಲಕ್ಷ ರೂ. ವೇತನ ಪಡೆಯುತ್ತಿದ್ದಳು. ಆದರೆ ಐಷಾರಾಮಿ ಜೀವನಕ್ಕೆ ಜೋತು ಬಿದ್ದಿದ್ದ ಈಕೆ ಹರಿಯಾಣ ಮೂಲದ ಕಮಲದೀಪ್ ಶೈನಿ ಎಂಬಾತನನ್ನು ಪ್ರೀತಿಸಿ ಅವನೊಂದಿಗೆ ಅಲ್ಲಿಗೆ ತೆರಳಿದ್ದಲ್ಲದೇ ಆತನಿಗೆ ಲಕ್ಷಾಂತರ ರೂ. ವಂಚಿಸಿ ಜೈಲು ಸೇರಿದ್ದಳು. ಜೈಲಿನಲ್ಲಿದ್ದಾಗ ಪರಿಚಯವಾದ ಮಹಿಳೆಯ ಪುತ್ರ ಅಂಕುರ್ ರಾಣ ಜೊತೆ ಗೆಳೆತನ ಬೆಳೆಸಿಕೊಂಡಿದ್ದಳು.

ಕಂಡ ಕಂಡವರೆಲ್ಲಾ ಬಾಯ್‌ಫ್ರೆಂಡ್ಸ್: ಮತ್ತೆ ಬೆಂಗಳೂರಿಗೆ ಹಿಂತಿರುಗಿದ ಈಕೆ ತೆಲಂಗಾಣದ ರಿಯಲ್ ಎಸ್ಟೇಟ್ ಉದ್ಯಮಿ ರಮೇಶ್ ಕುಮಾರ್ ಸ್ನೇಹ ಬೆಳೆಸಿದ್ದಲ್ಲದೇ 2018ರಲ್ಲಿ ಆತನನ್ನು ನೋಂದಣಾಧಿಕಾರಿಗಳ ಕಚೇರಿಯಲ್ಲಿ ವಿವಾಹವಾಗಿದ್ದಳು. ಈಕೆಯ ಐಷಾರಾಮಿ ಜೀವನಕ್ಕೆ ರಮೇಶ್ ಕುಮಾರನೇ ಹಣಕಾಸು ಒದಗಿಸುತ್ತಿದ್ದ. ಆದರೆ ತನ್ನ ಸಾಕುನಾಯಿಯನ್ನು ಪೆಟ್ ಸೆಂಟರ್‌ಗೆ ಚಿಕಿತ್ಸೆಗಾಗಿ ಕರೆದೊಯ್ದಾಗ ಆ ಪೆಟ್ ಸೆಂಟರ್‌ನ ಪಶುವೈದ್ಯ ನಿಖಿಲ್ ಮೈರೆಡ್ಡಿ ಪರಿಚಯವಾಗಿ ಆತನೂ ಬಾಯ್ ಫ್ರೆಂಡ್ ಆಗಿಬಿಟ್ಟಿದ್ದ. ಈಕೆಯ ವರ್ತನೆಯಿಂದ ಬೇಸತ್ತಿದ್ದ ರಮೇಶ್ ಕುಮಾರ್ ಈಕೆಗೆ ಹಣ ನೀಡುವ ವಿಚಾರದಲ್ಲಿ ಕಟ್ಟುನಿಟ್ಟಾದ ನಿಲುವು ತಾಳಿದ್ದ ಎಂದು ಹೇಳಲಾಗಿದೆ. ಅದೇ ವೇಳೆ ಐಟಿ ಉದ್ಯೋಗ ತೊರೆದ ನಿಹಾರಿಕ, ನಿಖಿಲ್ ಮೈರೆಡ್ಡಿ ಜೊತೆ ಸೇರಿ ಪೆಟ್ ಕೇರ್ ಸೆಂಟರ್ ನಡೆಸಲು ಆರಂಭಿಸಿದ್ದಳು. ಇವರಿಬ್ಬರೂ ಬೆಂಗಳೂರಿನ ಹೊರಮಾವಿನ ಅಪಾರ್ಟ್‌ಮೆಂಟ್‌ನಲ್ಲಿ ವಾಸಿಸುತ್ತಿದ್ದರು.

ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಸಂಬಂಧಿಸಿದಂತೆ ರಮೇಶ್ ಕುಮಾರ್‌ನಿಂದ 8 ಕೋಟಿ ರೂ.ಗಳಿಗೆ ಬೇಡಿಕೆ ಇಟ್ಟಿದ್ದ ನಿಹಾರಿಕ, ಆತನಿಂದ ಹಣ ಬರುವುದು ಕಷ್ಟಸಾಧ್ಯ ಎಂಬುದು ಗೊತ್ತಾಗುತ್ತಿದ್ದಂತೆಯೇ ಆತನೊಂದಿಗಿನ ತನ್ನ ವಿವಾಹವನ್ನು ರಿಜಿಸ್ಟರ್ ಮಾಡಿಸಿದ್ದರಿಂದ ಕೋಟ್ಯಾಂತರ ರೂ.ಗಳ ಒಡೆಯ ರಮೇಶ್‌ನ ಆಸ್ತಿಯಲ್ಲೂ ತನಗೆ ಪಾಲು ಬರುತ್ತದೆ ಎಂಬ ಲೆಕ್ಕಾಚಾರದಲ್ಲಿ ಹರ್ಯಾಣದ ತನ್ನ ಗೆಳೆಯ ಅಂಕುರ್ ರಾಣನನ್ನು ಅ.1ರಂದೇ ತೆಲಂಗಾಣಕ್ಕೆ ಬರುವಂತೆ ಹೇಳಿ ಕರೆಸಿಕೊಂಡಿದ್ದಾಳೆ. ಅ.3ರಂದು ರಮೇಶ್ ಕುಮಾರ್‌ನನ್ನು ತೆಲಂಗಾಣದ ಉಪ್ಪಲ್ ಎಂಬಲ್ಲಿಗೆ ಕರೆಸಿಕೊಂಡ ಈಕೆ, ರಾಣ ಜೊತೆಗೂಡಿ ಆತನನ್ನು ಉಸಿರುಗಟ್ಟಿಸಿ ಕೊಂದಿದ್ದಾಳೆ.

ನಾಲ್ಕು ದಿನ ಕಾರಲ್ಲೇ ಶವ: ಶವದೊಂದಿಗೆ ರಮೇಶನ ಕಾರು ಸಮೇತ ಬೆಂಗಳೂರಿಗೆ ಆಗಮಿಸಿದ ನಿಹಾರಿಕ ಹೊರಮಾವಿನ ಅಪಾರ್ಟ್‌ಮೆಂಟ್‌ನಲ್ಲಿದ್ದ ನಿಖಿಲ್ ಮೈರೆಡ್ಡಿಯೊಂದಿಗೆ ಚರ್ಚಿಸಿದ್ದಾಳೆ. ಈ ಹಿಂದೆ ಕೊಡಗು ಪ್ರವಾಸಕ್ಕೆ ಬಂದಿದ್ದರಿಂದ ಇಲ್ಲಿನ ಪರಿಸರ ಅರಿತಿದ್ದ ನಿಖಿಲ್ ಮತ್ತು ನಿಹಾರಿಕ ಶವವನ್ನು ಕೊಡಗಿನ ಕಾಫಿ ತೋಟದಲ್ಲಿ ಸುಟ್ಟು ಹಾಕಿದರೆ, ನಾವು ಸಿಕ್ಕಿಹಾಕಿಕೊಳ್ಳುವುದಿಲ್ಲ. ಕೆಲ ದಿನಗಳ ನಂತರ ತೆಲಂಗಾಣಕ್ಕೆ ಹೋಗಿ ಪತಿ ರಮೇಶ್ ಕುಮಾರ್ ನಾಪತ್ತೆಯಾಗಿದ್ದಾನೆ ಎಂದು ಅಲ್ಲಿನ ಪೊಲೀಸರಿಗೆ ದೂರು ಕೊಡೋಣ ಎಂದು ತೀರ್ಮಾನಿಸಿ ಅ.7ರಂದು ರಾತ್ರಿ ಸುಂಟಿಕೊಪ್ಪ ಬಳಿ ಕಾಫಿ ತೋಟದಲ್ಲಿ ರಮೇಶ್ ಕುಮಾರ್‌ನ ಶವವನ್ನು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಬೆಂಗಳೂರಿಗೆ ವಾಪಸ್ಸಾಗಿದ್ದಾರೆ ಎಂಬುದು ಪೊಲೀಸರ ವಿಚಾರಣೆ ವೇಳೆ ತಿಳಿದು ಬಂದಿದೆ. ನಿಹಾರಿಕ ಮತ್ತು ನಿಖಿಲ್‌ನನ್ನು ಅ.22ರಂದು ಬಂಧಿಸಿದ್ದ ಕೊಡಗು ಪೊಲೀಸರು ಹರಿದ್ವಾರದಲ್ಲಿ ತಲೆಮರೆಸಿಕೊಂಡಿದ್ದ ರಾಣನನ್ನು ನಿನ್ನೆ ಬಂಧಿಸಿ ಕರೆತಂದಿದ್ದಾರೆ.

ಪ್ರಕರಣದ ಬಗ್ಗೆ ಇಂದು ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ವಿವರಿಸಿದ ಕೊಡಗು ಎಸ್ಪಿ ರಾಮರಾಜನ್ ಈ ಪ್ರಕರಣದ ತನಿಖೆಯಲ್ಲಿ ಕಾರ್ಯ ನಿರ್ವಹಿಸಿದ 22 ಅಧಿಕಾರಿ ಹಾಗೂ ಸಿಬ್ಬಂದಿಯನ್ನು ಶ್ಲಾಘಿಸಿದರು.


ಹತ್ಯೆಗೀಡಾದ ರಮೇಶ್


ನಿಹಾರಿಕ


ಅಂಕುರ್


ನಿಖಿಲ್


ಹತ್ಯೆಗೆ ಬಳಸಲಾದ ಕಾರು.

ನೇಣು ಬಿಗಿದುಕೊಂಡು ವ್ಯಕ್ತಿ ಆತ್ಮಹತ್ಯೆ



ವಿರಾಜಪೇಟೆ, ಅ.26– ಪಟ್ಟಣದ ಚಿಕ್ಕಪೇಟೆ ಮೈಕ್ರೋ ನಿವಾಸಿ ಯುವಕ ಎಸ್.ಎಂ. ಮಧುಸೂದನ್(24) ಎಂಬಾತ ಜಿಗುಪ್ಸೆಗೊಂಡು ರಾತ್ರಿ ಮನೆಯಲ್ಲಿ ಯಾರು ಇಲ್ಲದ ಸಮಯದಲ್ಲಿ ಕೋಣೆಯ ಮೇಲ್ಛಾವಣಿಗೆ ವೇಲ್‌ನಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಮೃತನ ಅಣ್ಣ ಮಂಜುನಾಥ್ ನೀಡಿದ ದೂರನ್ನು ಆಧರಿಸಿ ನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಶವ ಪರೀಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಿದ್ದಾರೆ. ದಿವಂಗತ ಮೋಹನ್‌ಕುಮಾರ್ ಪುತ್ರ ಮೃತ ಮಧುಸೂದನ್ ಎಂಬಾತ ಇಬ್ಬರು ಅಣ್ಣಂದಿರು, ಇಬ್ಬರು ಅಕ್ಕಂದಿರು, ಒಬ್ಬ ತಮ್ಮನನ್ನು ಅಗಲಿದ್ದಾರೆ. ಕೆಲವು ತಿಂಗಳ ಹಿಂದೆ ತಾಯಿ ಅಕಾಲಿಕ ಮರಣದ ನಂತರ ಮೃತ ಮಾನಸಿಕವಾಗಿ ಕುಗ್ಗಿದ್ದರು ಎನ್ನಲಾಗಿದೆ.

ಬಿ.ಆರ್.ಬಿಪಿನ್‌ಗೆ ಸನ್ಮಾನ...



ಬಲಮುರಿ ಅಗಸ್ತ್ಯೇಶ್ವರ ದೇವಸ್ಥಾನ ಜಾತ್ರೆ ದಿನ ಕಾವೇರಿ ನದಿಯಲ್ಲಿ ಕೊಚ್ಚಿ ಹೋಗುತ್ತಿದ್ದ ವಾಸು ಅವರನ್ನು ರಕ್ಷಿಸಿದ ಬಿ.ಆರ್.ಬಿಪಿನ್ ಅವರನ್ನು ಮೂರ್ನಾಡು ತ್ರಿನೇತ್ರ ವಾಹನ ಮಾಲೀಕರು ಹಾಗೂ ಚಾಲಕರ ಸಂಘದ ವತಿಯಿಂದ ಸನ್ಮಾನಿಸಲಾಯಿತು. ಸಂಘದ ಅಧ್ಯಕ್ಷ ಕರವಂಡ ಸಜನ್ ಗಣಪತಿ, ಉಪಾಧ್ಯಕ್ಷ ಅಶ್ವತ್ ರೈ, ಕಾರ್ಯದರ್ಶಿ ಎನ್.ಎನ್.ಶರಣು, ಖಜಾಂಚಿ ಹೆಚ್.ಹೆಚ್.ಜಯಂತ್ ಕುಮಾರ್, ಸಹಕಾರ್ಯದರ್ಶಿ ದಿನೇಶ್ ರೈ, ಸದಸ್ಯರು ಇದ್ದರು.

ಕುಶಾಲನಗರದಲ್ಲಿ ಆಸ್ತಿ ವಿಚಾರಕ್ಕೆ ಸಹೋದರನ ಮೇಲೆ ಹಲ್ಲೆ

ನಾಲ್ವರ ವಿರುದ್ಧ ಪ್ರಕರಣ ದಾಖಲು

ಕುಶಾಲನಗರ, ಅ.26–ಆಸ್ತಿ ವಿಚಾರಕ್ಕೆ ಸಂಬಂಧಿಸಿದಂತೆ ಸಹೋದರನ ಮೇಲೆ ಸಹೋದರಿ ಹಾಗೂ ಆಕೆಯ ಮಕ್ಕಳು ಹಲ್ಲೆ ಮಾಡಿ ಗಾಯಗೊಳಿಸಿರುವ ಘಟನೆ ಶನಿವಾರ ನಂಜರಾಯಪಟ್ಟಣ ಗ್ರಾಮದಲ್ಲಿ ನಡೆದಿದೆ.

ಸಮೀಪದ ನಂಜರಾಯಪಟ್ಟಣ ಗ್ರಾಮ ಪಂಚಾಯತಿಯ ಗುಳಿಗ ಪೈಸಾರಿ ನಿವಾಸಿ ಎಂ. ಮಂಜುನಾಥ್(56) ಎಂಬುವವರೆ ಹಲ್ಲೆಗೆ ಒಳಗಾದ ವ್ಯಕ್ತಿ.


ಮಂಜುನಾಥ್ ಮನೆಯಲ್ಲಿ ಒಬ್ಬರೇ ಇದ್ದ ಸಂದರ್ಭ, ಪಕ್ಕದ ಮನೆಯಲ್ಲಿ ವಾಸವಿರುವ ಅವರ ತಂಗಿ ಜಾನಕಿ ಮತ್ತು ಆಕೆಯ ಮಕ್ಕಳಾದ ಸುಜಿತ್, ಸುಜೇಶ್ ಹಾಗೂ ಸಂದೀಪ್ ಅವರು ಹಲ್ಲೆ ಮಾಡಿದ್ದಾರೆ. ಆರೋಪಿಗಳ ಪೈಕಿ ಸುಜಿತ್ ಎಂಬಾತ ಕತ್ತಿಯಿಂದ ಮಂಜುನಾಥ್ ತಲೆಗೆ ಮತ್ತು ಕಾಲಿಗೆ ಹೊಡೆದು ಗಾಯಗೊಳಿಸಿದ್ದಾರೆ. ತೀವ್ರವಾಗಿ ಗಾಯಗೊಂಡಿದ್ದ ಮಂಜುನಾಥ್ ಅವರನ್ನು ಸ್ಥಳೀಯ ನಿವಾಸಿಗಳು ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ.

ಈ ಹಿಂದೆಯೂ ಕೂಡ ಇವರುಗಳ ನಡುವೆ ಆಸ್ತಿ ವಿಚಾರದಲ್ಲಿ ಕಲಹ ಉಂಟಾಗಿತ್ತು ಎಂದು ಪೊಲೀಸ್ ಮೂಲಗಳಿಂದ ತಿಳಿದುಬಂದಿದೆ. ಘಟನೆ ಕುರಿತು ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುವರ್ಣಾವತಿ ಜಲಾಶಯ ಭರ್ತಿ

ಎರಡು ಕ್ರಸ್ಟ್‌ಗೇಟ್‌ಗಳ ಮೂಲಕ 150 ಕ್ಯೂಸೆಕ್ ನೀರು ಬಿಡುಗಡೆ




ಕ್ರಸ್ಟ್‌ಗೇಟ್‌ಗಳ ಮೂಲಕ ಸುವರ್ಣಾವತಿ ಜಲಾಶಯದಿಂದ 150 ಕ್ಯೂಸೆಕ್‌ಗೂ ಹೆಚ್ಚು ನೀರನ್ನು ಹೊರಬಿಡುತ್ತಿರುವುದು.

ಚಾಮರಾಜನಗರ, ಅ.26– ಹಿಂಗಾರು ಮಳೆಯ ಆರ್ಭಟಕ್ಕೆ ತಾಲೂಕಿನ ಸುವರ್ಣಾವತಿ ಜಲಾಶಯ ಭರ್ತಿಯಾಗಿದ್ದು, ಜಲಾಶಯದಿಂದ 150 ಕ್ಯೂಸೆಕ್‌ಗೂ ಹೆಚ್ಚು ನೀರನ್ನು ಜಲಾಶಯದ ಎರಡು ಕ್ರಸ್ಟ್‌ಗೇಟ್‌ಗಳ ಮೂಲಕ ಹೊರಬಿಡಲಾಗುತ್ತಿದೆ.

ಜಿಲ್ಲೆಯಲ್ಲಿ ಕಳೆದೊಂದು ತಿಂಗಳಿನಿಂದ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಜಲಾಶಯವು ಗರಿಷ್ಟ ಮಟ್ಟ ತಲುಪಿದ್ದು, ಜಲಾಶಯದ ಸುರಕ್ಷತೆ ದೃಷ್ಟಿಯಿಂದ ಕಳೆದ ಎರಡು ದಿನಗಳಿಂದ ನೀರು ಹೊರ ಬಿಡಲಾಗುತ್ತಿದೆ. ಇದರಿಂದ ಜಲಾಶಯ ವ್ಯಾಪ್ತಿಯ ಕೆರೆ–ಕಟ್ಟೆಗಳಿಗೆ ಜೀವ ಜಲ ಹರಿದು ಬರುತ್ತಿದ್ದು, ಅಚ್ಚುಕಟ್ಟು ಪ್ರದೇಶದ ಕೃಷಿಕರಲ್ಲಿ ಸಂತಸ ಮೂಡಿಸಿದೆ.

ಕೆರೆಗಳಿಗೆ ನೀರು: ಸುವರ್ಣಾವತಿ ಜಲಾಶಯದಿಂದ ಬಲದಂಡೆ ನಾಲೆ ಮೂಲಕ 150 ಕ್ಯುಸೆಕ್ ನೀರು ಹೊರಬಿಡಲಾಗಿದ್ದು ಚಾಮರಾಜನಗರ ತಾಲೂಕಿನ ದೊಡ್ಡಕೆರೆ, ಚಿಕ್ಕಕೆರೆ, ಸಿಂಡಿಗೆರೆ, ಆಲೂರು ಕೆರೆ, ಕನ್ನೆಗಾಲ ಕೆರೆ, ಮಲ್ಲೇದೇವನಹಳ್ಳಿ ಕೆರೆ, ಪುಟ್ಟನಪುರ ಕೆರೆ, ಕಾಗಲವಾಡಿ ಕೆರೆ, ನಾಗವಳ್ಳಿ ಕೆರೆಗಳಿಗೆ ನೀರು ಹರಿದು ಬರುತ್ತಿದೆ.

ಸುವರ್ಣಾವತಿ ನದಿ ಹರಿಯುವ ಗ್ರಾಮಗಳಾದ ಹೊಂಗಲವಾಡಿ, ದಡದಹಳ್ಳಿ, ಅಯ್ಯನಪುರ, ನಾಗವಳ್ಳಿ, ಪುಟ್ಟನಪುರ, ಮಲ್ಲೇದೇವನಹಳ್ಳಿ, ಆಲೂರು, ಸರಗೂರು, ಹೊಮ್ಮ, ಕರಿಯನಕಟ್ಟೆ, ಅಟ್ಟಗೂಳಿಪುರದಲ್ಲಿ ಸುವರ್ಣಾವತಿಯು ಮೈದುಂಬಿ ಹರಿಯುತ್ತಿದ್ದು, ಎಚ್ಚರಿಕೆಯಿಂದ ಇರುವಂತೆ ಅಧಿಕಾರಿಗಳು ಗ್ರಾಮಸ್ಥರಲ್ಲಿ ಸೂಚನೆ ನೀಡಿದ್ದಾರೆ.

1.18 ಟಿಎಂಸಿ ನೀರು ಸಂಗ್ರಹ: ಸುವರ್ಣಾವತಿ ಅಣೆಕಟ್ಟೆಯನ್ನು 1984ರಲ್ಲಿ ನಿರ್ಮಾಣ ಮಾಡಲಾಗಿದ್ದು 1.20 ಟಿಎಂಸಿ ಅಡಿ ಗರಿಷ್ಠ ನೀರು ಸಂಗ್ರಹಣಾ ಸಾಮರ್ಥ್ಯ ಹೊಂದಿದೆ. ಸದ್ಯ ಅಣೆಕಟ್ಟೆಯಲ್ಲಿ 1.18 ಟಿಎಂಸಿ ಅಡಿ ನೀರು ಸಂಗ್ರಹವಾಗಿದ್ದು, ಕಣ್ಣು ಹಾಯಿಸಿದಷ್ಟು ದೂರ ಜಲರಾಶಿ ಕಂಗೊಳಿಸುತ್ತಿದೆ.

ಜಲಾಶಯ ಭರ್ತಿಯಾಬೇಕಾದರೆ ಕರ್ನಾಟಕ ಹಾಗೂ ತಮಿಳುನಾಡಿನ ಗಡಿ ಭಾಗವಾಗಿರುವ ದಿಂಬಂ, ಬೇಡಗುಳಿ, ಕೋಳಿಪಾಳ್ಯದಲ್ಲಿ ಉತ್ತಮ ಮಳೆ ಸುರಿಯಬೇಕು. ಈ ವರ್ಷ ಮುಂಗಾರು ಹಾಗೂ ಹಿಂಗಾರು ಹಂಗಾಮಿನಲ್ಲಿ ಭರ್ಜರಿ ಮಳೆಯಾಗಿದೆ. ಇದರಿಂದ ಜಲಾಶಯಕ್ಕೆ ಹೆಚ್ಚಿನ ಪ್ರಮಾಣದ ನೀರು ಹರಿದು ಬಂದಿದೆ.

ರೈತರ ಜೀವನಾಡಿ ಅವಳಿ ಜಲಾಶಯ: ಚಾಮರಾಜನಗರ ತಾಲೂಕಿನ ಅವಳಿ ಜಲಾಶಯ ಎಂದೇ ಪ್ರಸಿದ್ಧವಾಗಿರುವ ಚಿಕ್ಕಹೊಳೆ ಹಾಗೂ ಸುವರ್ಣಾವತಿಯೂ ಈ ಭಾಗದ ರೈತರ ಜೀವನಾಡಿಯಾಗಿದೆ. ಮುಂಗಾರು ಹಂಗಾಮಿನಲ್ಲೂ ಉತ್ತಮ ಮಳೆಯಾಗಿ ಜಲಾಶಯ ಭರ್ತಿಯಾಗಿತ್ತು. ಬಳಿಕ ಜಲಾಶಯ ಮತ್ತೊಮ್ಮೆ ತುಂಬಿದ್ದು ನೀರು ಹೊರಬಿಡಲಾಗುತ್ತದೆ. ಚಿಕ್ಕಹೊಳೆ ಡ್ಯಾಂ ಗರಿಷ್ಠ 74 ಅಡಿ ನೀರು ಸಂಗ್ರಹಣಾ ಸಾಮರ್ಥ್ಯ ಹೊಂದಿದ್ದು, ಸದ್ಯ 66 ಅಡಿ ನೀರು ಸಂಗ್ರಹ ಇದೆ. ರಾಜ್ಯದ ಗಡಿ ಭಾಗವಾಗಿರುವ ತಾಳವಾಡಿಯಲ್ಲಿ ಮಳೆಯಾದರೆ ಚಿಕ್ಕಹೊಳೆ ಜಲಾಶಯ ಭರ್ತಿಯಾಗುತ್ತದೆ. ಸಿದ್ದಯ್ಯನಪುರ, ಬಂಡಿಗೆರೆ ಹರದನಹಳ್ಳಿಗಳ ಸಾವಿರಾರು ಎಕರೆ ಕೃಷಿ ಭೂಮಿಗೆ ಚಿಕ್ಕಹೊಳೆ ನೀರುಣಿಸುತ್ತಿದೆ.

ಬಾಗಳಿಯಲ್ಲಿ ಗೋಡೆ ಕುಸಿದು ರೈತ ಸಾವು

ಸರ್ಕಾರದಿಂದ ಕುಟುಂಬಕ್ಕೆ 1.20 ಲಕ್ಷ ರೂ.: ಕುಟುಂಬ ನಿರ್ವಹಣೆಗೆ ಚಾಮುಲ್‌ನಲ್ಲಿ ಮೃತ ಪತ್ನಿಗೆ ಉದ್ಯೋಗ ಕೊಡಿಸುವ ಭರವಸೆ

ಎಆರ್‌ಕೆಯಿಂದ 5 ಲಕ್ಷ ರೂ. ಪರಿಹಾರ ವಿತರಣೆ


ಸಂತೇಮರಹಳ್ಳಿ ಪ್ರವಾಸಿ ಮಂದಿರದಲ್ಲಿ ಗೋಡೆ ಕುಸಿದು ಮೃತಪಟ್ಟ ಬಾಗಳಿ ಗ್ರಾಮದ ನಿವಾಸಿ ಚಂದ್ರನಾಯಕರ ಪತ್ನಿ ಕಾವೇರಿಗೆ ಶಾಸಕ ಕೃಷ್ಣಮೂರ್ತಿ ಚೆಕ್ ನೀಡಿದರು.

ಚಾಮರಾಜನಗರ, ಅ.26– ಇತ್ತೀಚೆಗೆ ಬಿದ್ದ ಮಳೆಯಿಂದ ತಾಲೂಕಿನ ಬಾಗಳಿ ಗ್ರಾಮದ ನಿವಾಸಿ ಚಂದ್ರನಾಯಕ ಅವರ ಮನೆ ಗೋಡೆ ಕುಸಿದು ಚಂದ್ರನಾಯಕ ಮೃತಪಟ್ಟಿದ್ದು, ಪತ್ನಿ ಹಾಗೂ ಇಬ್ಬರು ಮಕ್ಕಳು ಪ್ರಾಣಾಪಾಯದಿಂದ ಪಾರಾಗಿದ್ದರು.

ಈ ಹಿನ್ನೆಲೆಯಲ್ಲಿ ಸರ್ಕಾರ ಮೃತನ ಕುಟುಂಬಕ್ಕೆ ನೀಡಿದ 5 ಲಕ್ಷ ರೂ.ಗಳ ಪರಿಹಾರ ಚೆಕ್ ಅನ್ನು ಕೊಳ್ಳೇಗಾಲದ ಶಾಸಕ ಎ.ಆರ್.ಕೃಷ್ಣಮೂರ್ತಿ ಮೃತನ ಕುಟುಂಬಕ್ಕೆ ನೀಡಿ ಸಾಂತ್ವನ ಹೇಳಿದರು.

ತಾಲೂಕಿನ ಸಂತೇಮರಹಳ್ಳಿ ಪ್ರವಾಸಿ ಮಂದಿರದಲ್ಲಿ ಮೃತ ಚಂದ್ರನಾಯಕರ ಪತ್ನಿ ಕಾವೇರಿ ಅವರಿಗೆ ಚೆಕ್ ನೀಡಿ ಧೈರ್ಯ ಹೇಳಿದರು. ತಹಸೀಲ್ದಾರ್ ಗಿರಿಜಾ ಅವರು ವಿಧವಾ ವೇತನ ಮಂಜೂರಾತಿ ಪತ್ರವನ್ನು ಮಂಜೂರು ಮಾಡಿಸಿಕೊಡುವಂತೆ ಸೂಚನೆ ಕೊಟ್ಟರು.

ಇತ್ತೀಚೆಗೆ ಬಿದ್ದ ಭಾರಿ ಮಳೆಯಿಂದ ಬಾಗಳಿ ಗ್ರಾಮದ ನಿವಾಸಿ ಚಂದ್ರನಾಯಕನ ಮನೆ ಗೋಡೆ ಕುಸಿದು, ಚಂದ್ರನಾಯಕ ಸ್ಥಳದಲ್ಲಿಯೇ ಮೃತಪಟ್ಟಿದ್ದು, ಪತ್ನಿ, ಮಕ್ಕಳು ಬಚಾವ್ ಆಗಿದ್ದರು, ವಿಷಯ ತಿಳಿದು ಗ್ರಾಮಕ್ಕೆ ತೆರಳಿದ್ದ ಎ.ಆರ್. ಕೃಷ್ಣಮೂರ್ತಿ ಅವರು ಕುಟುಂಬಕ್ಕೆ ವೈಯಕ್ತಿಕ ಪರಿಹಾರ ನೀಡಿ, ಸಾಂತ್ವನ ಹೇಳಿ ಸರ್ಕಾರದಿಂದ ಪ್ರಕೃತಿ ವಿಕೋಪ ನಿಧಿಯಡಿಯಲ್ಲಿ 5 ಲಕ್ಷ ರೂ. ಪರಿಹಾರ ಕೊಡಿಸುವ ಭರವಸೆ ನೀಡಿದರು. ಅದರಂತೆ ಇಂದು ಸಂತೇಮರಹಳ್ಳಿ ಪ್ರವಾಸಿ ಮಂದಿರದಲ್ಲಿ ಕುಟುಂಬಕ್ಕೆ 5 ಲಕ್ಷ ರೂ. ಗಳ ಚೆಕ್ ನೀಡಿದರು.

ಬಳಿಕ ಮಾತನಾಡಿದ ಅವರು, ಸರ್ಕಾರದಿಂದ ಗೋಡೆ ಕುಸಿತಕ್ಕೆ 1.20 ಲಕ್ಷ ರೂ. ಪ್ರತ್ಯೇಕವಾಗಿ ಬರಲಿದೆ. ಅದು ಸಹ ನಿಮ್ಮ ಖಾತೆಗೆ ಬರುತ್ತದೆ. ಸದ್ಬಳಕೆ ಮಾಡಿಕೊಳ್ಳಿ. ಈಗ ನೀಡಿರುವ 5 ಲಕ್ಷ ರೂ.ಗಳನ್ನು ಠೇವಣಿ ಇಟ್ಟು ಮಕ್ಕಳ ವಿದ್ಯಾಭ್ಯಾಸಕ್ಕೆ ಬಳಕೆ ಮಾಡಿಕೊಳ್ಳುವಂತೆ ತಿಳಿಸಿದರು.

ಗ್ರಾಮದ ಮುಖಂಡರ ಮನವಿಯಂತೆ ಕುಟುಂಬಕ್ಕೆ ಆಧಾರಸ್ತಂಭವಾಗಿದ್ದ ಪತಿ ಇಲ್ಲವಾಗಿದ್ದಾರೆ. ಮಕ್ಕಳನ್ನು ಪಾಲನೆ ಪೋಷಣೆ ಮಾಡಲು ಅನುಕೂಲವಾಗುವಂತೆ ಚಾಮುಲ್‌ನಲ್ಲಿ ತಾತ್ಕಾಲಿಕ ಉದ್ಯೋಗವನ್ನು ಕೊಡಿಸುವಂತೆ ಮನವಿ ಮಾಡಿದರು. ಚಾಮುಲ್ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಸಮಾಲೋಚನೆ ಮಾಡಿ, ಉದ್ಯೋಗ ಕೊಡಿಸುವ ಭರವಸೆಯನ್ನು ಕೃಷ್ಣಮೂರ್ತಿ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಸಮಿತಿಯ ಅಧ್ಯಕ್ಷ ಹೊಂಗನೂರುಚಂದ್ರು, ತಹಸೀಲ್ದಾರ್ ಗಿರಿಜಾ, ಕೊಳ್ಳೇಗಾಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಚಾಮುಲ್ ನಿರ್ದೇಶಕ ಬಾಗಳಿ ರೇವಣ್ಣ, ಮಹದೇವಪ್ರಸಾದ್ ಪಸಿ, ಇತರರು ಇದ್ದರು.


ಅಪ್ರಾಪ್ತ ಬಾಲಕಿ ಅಪಹರಣ; ಪ್ರಕರಣ ದಾಖಲು

ಕೊಳ್ಳೇಗಾಲ, ಅ.26–ಅಪ್ರಾಪ್ತ ಬಾಲಕಿಯನ್ನು ಕಾಲೇಜಿನಿಂದಲೇ ಅಪಹರಣ ಮಾಡಿದ್ದ ಇಬ್ಬರ ವಿರುದ್ಧ, ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಪಟ್ಟಣದ ಬಸ್ತೀಪುರ ಬಡಾವಣೆಯ ನಿವಾಸಿಗಳಾದ ಧನುಷ್ ಮತ್ತು ಮಹಾದೇವ ಗುರುವಾರ ಕೊಳ್ಳೇಗಾಲದ ಖಾಸಗಿ ಕಾಲೇಜಿನ ಮುಂಭಾಗ ಸತ್ತೇಗಾಲ ಗ್ರಾಮದ ಅಪ್ರಾಪ್ತ ಬಾಲಕಿಯನ್ನು ಅಪಹರಣ ಮಾಡಿಕೊಂಡು ಹೋಗಿದ್ದಾರೆ.

ಅಪ್ರಾಪ್ತ ಬಾಲಕಿಯ ತಂದೆ ಎಂದಿನಂತೆ ಕಾಲೇಜಿಗೆ ಬಿಟ್ಟು ಹೋಗಿದ್ದಾರೆ. ಆದರೆ ಕಾಲೇಜಿನಿಂದ ಪ್ರಾಂಶುಪಾಲರು ಕರೆ ಮಾಡಿ ನಿಮ್ಮ ಮಗಳು ಕಾಲೇಜಿಗೆ ಬಂದಿಲ್ಲ ಎಂದು ತಿಳಿಸಿದ್ದಾರೆ. ಈ ವೇಳೆ ಕಾಲೇಜಿನ ಸಿಸಿ ಟಿವಿ ಪರಿಶೀಲಿಸಿದಾಗ ಇಬ್ಬರು ಅಪ್ರಾಪ್ತ ಬಾಲಕಿಯನ್ನು ಪುಸಲಾಯಿಸಿ ಕರೆದುಕೊಂಡು ಹೋಗುತ್ತಿರುವುದು ಸೆರೆಯಾಗಿದ್ದು, ಈ ಸಂಬಂಧ ಬಾಲಕಿ ತಂದೆ ನೀಡಿದ ದೂರಿನ ಹಿನ್ನೆಲೆ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಕೆ.ಆರ್. ಬ್ಯಾಂಕ್ ನಿರ್ದೇಶಕ, ಪ್ರತಿಧ್ವನಿ ವೇದಿಕೆ ಪದಾಧಿಕಾರಿಗಳಿಗೆ ಅಭಿನಂದನೆ


ಗುಂಡ್ಲುಪೇಟೆ ತಾಲೂಕಿನ ಮೂಡುಗೂರು ಗ್ರಾಮದಲ್ಲಿರುವ ಶ್ರೀ ಉದ್ದಾನೇಶ್ವರ ವಿರಕ್ತ ಮಠಕ್ಕೆ ಭೇಟಿ ನೀಡಿದ ಕೆ.ಆರ್.ಬ್ಯಾಂಕ್ ನಿರ್ದೇಶಕ ಪ್ರತಿಧ್ವನಿ ಪ್ರಸಾದ್, ಪ್ರತಿಧ್ವನಿ ವೇದಿಕೆಯ ಪದಾಧಿಕಾರಿಗಳನ್ನು ಇಮ್ಮಡಿ ಉದ್ಧಾನ ಶ್ರೀಗಳು ಬಸವೇಶ್ವರರ ಭಾವಚಿತ್ರ ನೀಡಿ ಅಭಿನಂದಿಸಿದರು. ಕರ್ನಾಟಕ ಪ್ರತಿಧ್ವನಿ ವೇದಿಕೆಯ ನಂಜನಗೂಡು ತಾಲೂಕು ಘಟಕದ ಅಧ್ಯಕ್ಷ ಪ್ರತಿಧ್ವನಿ ತ್ರಿನೇಶ್, ಆನಂದ್ ಅಶೋಕಪುರಂ, ಚಾಮರಾಜನಗರ ಜಿಲ್ಲಾ ಕಸಾಪ ಅಧ್ಯಕ್ಷ ಶೈಲೇಶ್ ಕುಮಾರ್, ಮುಳ್ಳೂರು ರೇಚಣ್ಣ, ಲೋಕೇಶ್, ಮಹದೇವಸ್ವಾಮಿ, ಗುರುಸಿದ್ದಪ್ಪ ಉಪಸ್ಥಿತರಿದ್ದರು.

ನಗರಸಭೆ ನಾಮನಿರ್ದೇಶನ ಸದಸ್ಯೆಗೆ ಸನ್ಮಾನ



ಚಾಮರಾಜನಗರ, ಅ.26– ಸರ್ಕಾರದಿಂದ ನೂತನವಾಗಿ ನಗರಸಭೆಗೆ ನಾಮನಿರ್ದೇಶನ ಸದಸ್ಯರಾಗಿ ನೇಮಕಗೊಂಡಿರುವ ಶ್ರೀಮತಿ ಶಾಂತಲಾ ಪ್ರಸಾದ್ ಅವರನ್ನು ಜಿಲ್ಲಾ ಬ್ರಾಹ್ಮಣ ಸಂಘದ ವತಿಯಿಂದ ಅವರ ಸ್ವಗೃಹದಲ್ಲಿ ಗೌರವಿಸಿ, ಸನ್ಮಾನಿಸಲಾಯಿತು.

ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಜಿಎಂ ಹೆಗಡೆ ಮಾತನಾಡಿ, ಚಾಮರಾಜನಗರ ಸಭೆಗೆ ನೂತನವಾಗಿ ಸರ್ಕಾರದಿಂದ ನೇಮಕಗೊಂಡಿರುವ ಶಾಂತಲಾ ಪ್ರಸಾದ್ ಅವರು ಸಮಾಜದ ಕಾರ್ಯಗಳಲ್ಲಿ ಯಶಸ್ವಿಯಾಗಿ ಪಾಲ್ಗೊಂಡು ಕಾರ್ಯನಿರ್ವಹಿಸಿ, ಉತ್ತಮ ಸೇವೆಯನ್ನು ಸಲ್ಲಿಸಲಿ ಎಂದು ತಿಳಿಸಿ ಸನ್ಮಾನಿಸಿದರು.


ಜಿಲ್ಲಾ ಬ್ರಾಹ್ಮಣ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್ ಎನ್.ಋಗ್ವೇದಿ, ಜಿಲ್ಲಾ ಬ್ರಾಹ್ಮಣ ಸಂಘದ ಶ್ರೀಮತಿ ವತ್ಸಲ ರಾಜಗೋಪಾಲ್, ಶ್ರೀಧರ್ ಕೆಂಪನಪುರ, ನಾಗೇಂದ್ರ ಪ್ರಸಾದ್, ಸತೀಶ್, ಡಿ.ಮುರುಗೇಶ್, ನಾಗಶ್ರೀ, ಸತೀಶ್ ಕುಮಾರ್, ನಾಗವಳ್ಳಿ ಶ್ರೀನಾಥ್, ಬಿಳಿಗಿರಿ ಶ್ರೀನಿವಾಸ್, ಮುಂತಾದವರು ಉಪಸ್ಥಿತರಿದ್ದರು.

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ

ಕೊಳ್ಳೇಗಾಲ, ಅ.26– ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ ತುರ್ತು ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಅ.27ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ದಾಸನಪುರ ವಾಟರ್ ಸಪ್ಲೈ, ಮುಳ್ಳೂರು ಐ.ಪಿ.(ಕಟ್ನವಾಡಿ), ಮುಡಿಗುಂಡ, ಷುಗರ್ ಫ್ಯಾಕ್ಟರಿ ಮತ್ತು ಕೊಳ್ಳೇಗಾಲದ 2 ಫೀಡರ್ ಬೆಂಡರಹಳ್ಳಿ, ಬೂದಿತಿಟ್ಟು, ಮುಡಿಗುಂಡ, ಶಂಕನಪುರ, ಬಾಪುನಗರ, ದೇವಾಂಗಪೇಟೆ, ಕೊಳ್ಳೇಗಾಲ ಮೋಳೆ, ದಾಸನಪುರ, ಹರಳೆ, ಹಳೇ ಅಣಗಳ್ಳಿ ಹಾಗೂ ಸುತ್ತಮುತ್ತಲ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜು ಇರುವುದಿಲ್ಲ ಎಂದು ಚೆಸ್ಕಾಂ ಪ್ರಕಟಣೆ ತಿಳಿಸಿದೆ.

ಜಮೀನಿಗೆ ನುಗ್ಗಿ ಬಾಳೆ ಫಸಲು ನಾಶಪಡಿಸಿದ ಕಾಡಾನೆ

ಆಕಸ್ಮಿಕವಾಗಿ ಎದುರಾದ ಮಾಲೀಕನ ಮೇಲೆ ದಾಳಿಗೆ ಯತ್ನ, ಜನರ ಕಿರುಚಾಟಕ್ಕೆ ಬೆದರಿ ಓಡಿದ ಆನೆ



ಬೇಗೂರು(ಗುಂಡ್ಲುಪೇಟೆ), ಅ.26– ಸಮೀಪದ ಬೆಟ್ಟದಮಾದಹಳ್ಳಿ ಗ್ರಾಮದಲ್ಲಿ ಓಂಕಾರ ಅರಣ್ಯವಲಯದಿಂದ ಆಹಾರ ಅರಸಿ ಬಂದ ಕಾಡಾನೆಯೊಂದು ರೈತರು ಜಮೀನಿನಲ್ಲಿ ಬೆಳೆದಿದ್ದ ಬಾಳೆ ಗಿಡ, ಹುರುಳಿ, ಸೇರಿದಂತೆ ಫಸಲನ್ನು ತಿಂದು ತುಳಿದು ನಾಶಪಡಿಸಿದೆ ಹಾಗೂ ಸೋಲಾರ್ ತಂತಿ ಬೇಲಿಗಳನ್ನು ತುಳಿದು ಹಾಳು ಮಾಡಿವೆ.

ಗ್ರಾಮದ ಬಸವಣ್ಣ ಎಂಬುವವರು ಜಮೀನಿಗೆ ತೆರಳಿದ್ದರು. ಆಗ ಕಾಡಾನೆ ಮತ್ತೊಂದು ಬದಿಯಿಂದ ಜಮೀನಿನ ಬಾಳೆಗಿಡಗಳನ್ನು ತಿಂದು ನಾಶಪಡಿಸುತ್ತಿತ್ತು. ಇದರ ಅರಿವಿಲ್ಲದೆ ಬಸವಣ್ಣ ಅವರು ತಮ್ಮ ಜಮೀನಿನ ಬಳಿ ಕಾಡಾನೆಗೆ ಎದುರಾಗಿದ್ದಾರೆ. ಆದರೆ ಇವರ ಮೇಲೆ ದಾಳಿಗೆ ಮುಂದಾದ ಕಾಡಾನೆ ಊರಿನ ಜನ ಕಿರುಚಿಕೊಂಡ ಹಿನ್ನೆಲೆಯಲ್ಲಿ ಇವರನ್ನು ಬಿಟ್ಟು ಬಾಳೆ ತೋಟದ ಒಳ ನುಗ್ಗಿದೆ. ಇವರು ಓಡಿಬಂದು ಜೀವ ಉಳಿಸಿಕೊಂಡಿದ್ದಾರೆ ಹಾಗೂ ಗ್ರಾಮದ ಶಿವಕುಮಾರ್, ಶಿವಣ್ಣ, ಪಿ.ಶಿವಶಂಕರಪ್ಪ ಎಂಬುವರ ಬಾಳೆಗಿಡ ಆಹಾರ ಅರಸಿ ಬರುವ ಕಾಡಾನೆ ದಾಳಿ ನಡೆಸಿ ಲಕ್ಷಾಂತರ ರೂಪಾಯಿ ನಷ್ಟ ಉಂಟಾಗಿದೆ.



ಮಿರ್ಲೆ ಚಂದ್ರಶೇಖರ

ಮೊ; 9916129654

ಹಬ್ಬದ ಸಡಗರ... ಪರಿಸರಕ್ಕೆ ಸಂಚಕಾರ...!

"ಹಬ್ಬಗಳು ನಮ್ಮ ಸಂಸ್ಕೃತಿಯ ಹಿರಿಮೆ, ಆಚರಿಸುವ ಪ್ರತೀ ಸಮಾರಂಭಗಳು ಹಾಗೂ ಹಬ್ಬಕ್ಕೊಂದು ತನ್ನದೇ ಆದ ಅರ್ಥವಿದೆ, ಯಾವುದನ್ನೂ ನಿಲ್ಲಿಸಲಾಗದು, ಏಕೆಂದರೆ ದೇಶದ ಆರ್ಥಿಕತೆಯ ಪ್ರಶ್ನೆ, ಮೌಲ್ಯಗಳ ಉಳಿಯುವಿಕೆ, ಕುಟುಂಬಗಳ ಸಹಬಾಳ್ವೆ, ನಾಡಿನ ಪರಂಪರೆ, ಸುಖಶಾಂತಿ, ಸಂತೋಷ ಹಾಗೂ ಸೌಹಾರ್ದತೆಗಳ ಮೂಲ, ಮಾನವ ಜೀವನದ ಸಕಲ ಮೌಲ್ಯವು ಹಬ್ಬಗಳಲ್ಲಿ ಅಡಗಿದೆ. ಹಾಗಾಗಿ ಹಬ್ಬಗಳು ನಡೆಯಲಿಕ್ಕೇ ಬೇಕು ಮತ್ತು ಆಚರಿಸಿ ಸಂಭ್ರಮಿಸಲೇಬೇಕು. ತ್ಯಾಜ್ಯವನ್ನು ಮಿತಿಗೊಳಿಸುವ ನಿಟ್ಟಿನಲ್ಲಿ ಸುಧಾರಣಾ ಕ್ರಮಗಳನ್ನು ನಿಯಮಗಳನ್ನಾಗಿಸಿ ಜಾರಿಗೆ ತರುವುದು ಸೂಕ್ತ, ಇಲ್ಲವಾದಲ್ಲಿ ಭವಿಷ್ಯದಲ್ಲಿ ಘನಘೋರ ಪರಿಣಾಮ ಪ್ರಕೃತಿಯ ಮೇಲೆ ಆಗುವುದರಲ್ಲಿ ಸಂಶಯವಿಲ್ಲ. ಆಶ್ಚರ್ಯವೆನಿಸುವ ಅಂಶಗಳು; ಪ್ರಪಂಚದಲ್ಲಿ ಘನ ತ್ಯಾಜ್ಯ ನಿರ್ವಹಣೆಯು(Solid Waste Management) ಬಹುದೊಡ್ಡ ಸವಾಲಿನ ಕೆಲಸವಾಗಿದೆ, ನಮ್ಮ ದೇಶದಲ್ಲಿ ಪ್ರತೀ ವರ್ಷ 72 ಮಿಲಿಯನ್ ಟನ್ಸ್ ತ್ಯಾಜ್ಯ ಉತ್ಪತ್ತಿ ಆಗುವುದು. ಅದರಲ್ಲಿ 43 ಮಿಲಿಯನ್ ಟನ್ಸ್ ಮಾತ್ರ ಸಂಗ್ರಹಿಸುತ್ತಿರುವುದು, ವೈಜ್ಞಾನಿಕವಾಗಿ ವಿಲೇವಾರಿ ಆಗುತ್ತಿರುವುದು ಕೇವಲ 12 ಟನ್ಸ್, ಉಳಿದ 31 ಟನ್ಸ್ ತ್ಯಾಜ್ಯವು ಲ್ಯಾಂಡ್‌ಫಿಲ್‌ನಲ್ಲಿ ಸಂಗ್ರಹವಾಗಿದೆ, ನೆನಪಿರಲಿ ಭವಿಷ್ಯದಲ್ಲಿ ಇದರ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇರುವುದು.



ಜಾತಿ-ಧರ್ಮಗಳನ್ನು ಮೀರಿದ್ದು ಮಾನವನ ಬದುಕಿನ ಪರಿವರ್ತನೆಯಿಂದ ಉತ್ಪಾದನೆ ಆಗುತ್ತಿರುವ ತ್ಯಾಜ್ಯದ ಪ್ರಮಾಣ. ಜೀವನ ಶೈಲಿಯು ಬದಲಾದ ಪರಿಣಾಮವಾಗಿ ಪರಿಸರವು ಅಡ್ಡಾದಿಡ್ಡಿಯಾಗಿ ಕಲುಷಿತವಾಗುತ್ತಿದೆ. ಅದರಲ್ಲೂ ಹಬ್ಬಹರಿದಿನಗಳಲ್ಲಂತೂ ಮಾಲಿನ್ಯದ ಪ್ರಮಾಣವು ಅಂಕೆಗೆ ಸಿಗದಷ್ಟು ಏರಿಕೆಯಾಗುತ್ತದೆ. ಇದಕ್ಕೆ ಯಾವ ಧರ್ಮದ ಹಬ್ಬಗಳೂ ಹೊರತಾಗಿಲ್ಲ. ಹಬ್ಬಗಳನ್ನು ನಮ್ಮ ಪೂರ್ವಿಕರು ಸದುದ್ದೇಶದಿಂದ ಪೀಳಿಗೆಯಿಂದ ಪೀಳಿಗೆಗೆ ಮುಂದುವರಿಯುವ ಹಾಗೆ ಸಂಪ್ರದಾಯಗೊಳಿಸಿದ್ದರಾದರೂ ಬರುಬರುತ್ತಾ ಅವುಗಳ ಆಚರಣೆಯು ದಿಕ್ಕೇ ಬದಲಾಗಿದೆ, ಅದ್ದೂರಿತನದಿಂದಾಗಿ ಹಬ್ಬಗಳು ಮಾಲಿನ್ಯದ ಏರಿಕೆಗೆ ಕಾರಣವಾಗುತ್ತಿವೆ.

ಹಬ್ಬಗಳ ಆಚರಣೆಯಿಂದ ಹತ್ತುಹಲವು ಪ್ರಯೋಜನಗಳಿವೆ ಪ್ರವಾಸಿಗರನ್ನು ಆಕರ್ಷಿಸುವುದರಿಂದ ವ್ಯಾಪಾರ-ವಹಿವಾಟುಗಳು ಹೆಚ್ಚಾಗುವುದು ಆ ಮೂಲಕ ಆರ್ಥಿಕತೆಯು ಉತ್ತೇಜನಗೊಳ್ಳುವುದು, ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸಿ ಪೀಳಿಗೆಯ ಜೀವನಕ್ರಮವನ್ನು ಅರ್ಥಮಾಡಿಕೊಳ್ಳುವ ಹಾಗೂ ಮೌಲ್ಯಗಳನ್ನು ಪಾಲಿಸಲು ಸಹಕಾರಿ ಆಗುವುದು, ಹಬ್ಬಗಳು ಕುಟುಂಬಗಳನ್ನು ಗಟ್ಟಿಗೊಳಿಸುತ್ತವೆ (ಇಂದು ಇದರ ಕೊರತೆಯು ಹೆಚ್ಚಾಗಿ ಕಾಡುತ್ತಿದೆ), ವಿಭಿನ್ನ ಸಂಸ್ಕೃತಿಯ ಸಮೂಹಗಳು ಆಚರಣೆಯ ಸಮಯದಲ್ಲಿ ಒಗ್ಗೂಡುತ್ತವೆ. ಇದರಿಂದ ಧರ್ಮಗಳ ಸಾರವನ್ನು ಅರ್ಥ ಮಾಡಿಕೊಳ್ಳಲು ಸಹಕಾರಿ ಆಗುವುದು. ಹಬ್ಬಗಳನ್ನು ಆಚರಿಸುವ ಸಂಪ್ರದಾಯವು ನಮ್ಮ ಪರಂಪರೆಯು ಸಂತೋಷ, ಸುಖ-ಶಾಂತಿ ಮತ್ತು ಸೌಹಾರ್ದತೆಯಿಂದ ಜೀವಿಸಲು ವಿಶೇಷವಾದ ಪ್ರೇರಣೆ ನೀಡುವ ಅಸ್ತ್ರವಾಗಿವೆ. ಜಾತ್ರೆಗಳು, ವಿಶ್ವಕನ್ನಡ ಸಾಹಿತ್ಯ ಸಮ್ಮೇಳನ, ಕುಂಭಮೇಳ ಹಾಗೂ ದಸರಾದಂತಹ ಸಾರ್ವಜನಿಕ ಆಚರಣೆಗಳು ಎಲ್ಲಾ ಜಾತಿ ಧರ್ಮಗಳನ್ನು ಒಗ್ಗೂಡಿಸುತ್ತವೆ ಪರಿಣಾಮವಾಗಿ ಸಹಭಾಳ್ವೆಯ ಜೀವನಕ್ಕೆ ಅನುವು ಮಾಡಿಕೊಡುವುದು. ಧಾರ್ಮಿಕ ಆಚರಣೆಗಳು ಜನರ ನಂಬಿಕೆಗೆ ಗಟ್ಟಿಯಾಗಿ ಅಂಟಿಕೊಂಡಿರುವುದರಿಂದ ಕಾರಣಗಳನ್ನು ಕೊಟ್ಟು ಹಬ್ಬಗಳನ್ನು ನಿಷೇಧಿಸುವ ಸಾಹಸಕ್ಕೆ ಯಾವ ಸರ್ಕಾರಗಳು ಧೈರ್ಯ ಮಾಡುವುದಿಲ್ಲ, ಅಷ್ಟು ಆಳವಾಗಿ ಹಬ್ಬಗಳು ಬದುಕಿನಲ್ಲಿ ಬೇರೂರಿವೆ.

ಹಿಂದಿನ ದಿನಗಳಲ್ಲಿ ಅಷ್ಟಾಗಿ ಆಚರಣೆಗಳಲ್ಲಿ ಇರದಿದ್ದ ಹಬ್ಬಗಳಾದ ವರಮಹಾಲಕ್ಷ್ಮಿ, ತುಳಸಿ, ಒಂದು ಗ್ರಾಂ ಚಿನ್ನವನ್ನಾದರೂ ಕೊಳ್ಳಿ ಒಳ್ಳೆಯದು ಎನ್ನುವ ಅಕ್ಷಯತೃತೀಯ, ಗಂಡನನ್ನು ಪೂಜಿಸುವ ಭೀಮನ ಅಮಾವಾಸ್ಯೆ ಪೂಜೆಗಳು ಮಾಧ್ಯಮಗಳ ಪ್ರಭಾವಳಿ ಹೆಚ್ಚಾದಂದಿನಿಂದ ಆಚರಿಸದೇ ಇದ್ದವರೂ ಸಹ ಅದ್ದೂರಿಯಾಗಿ ಆಚರಿಸಿ ಸಂಭ್ರಮಿಸುತ್ತಿದ್ದಾರೆ. ನಮ್ಮ ಹಬ್ಬಗಳು ನಮಗೆ ಬೇಕೇ ಬೇಕು, ನಿಲ್ಲಿಸಲು ಘನವಾದ ಕಾರಣಗಳು ಏನೇ ಇರಬಹುದು ಖಂಡಿತ ಯಾರೂ ನಿಷೇಧಿಸಲಾಗದು, ಹಾಗೆಯೇ ಇತರೆ ಅನ್ಯಧರ್ಮೀಯರ ಹಬ್ಬಗಳನ್ನೂ ಸಹ ಆಚರಣೆಯಿಂದ ನಿಲ್ಲಿಸಲಾಗದು, ಇದು ಸಮಾಜದಲ್ಲಿ ಸೂಕ್ಷ್ಮ ವಿಚಾರದ ವಿಷಯಗಳು.

ನಾವು ನೆಲೆಸಿರುವ ಭೂಮಿ ಹಾಗೂ ಪರಿಸರವನ್ನೂ ಮಾಲಿನ್ಯಗೊಳಿಸದೆ ಮುಂದಿನ ಪೀಳಿಗೆಗೆ ಉಳಿಸಿ ಹೋಗುವುದು ನಮ್ಮೆಲ್ಲರ ಕರ್ತವ್ಯವೂ ಹೌದು, ಹಬ್ಬಗಳ ಆಚರಣೆಯಲ್ಲಿ ಇದನ್ನು ನಿರ್ಲಕ್ಷಿಸಲಾಗದು. ಹಾಗಾದರೆ ಹಬ್ಬಗಳು ನಮ್ಮ ನಾಡಿನ ಸಂಸ್ಕೃತಿಯ ಪ್ರತೀಕವೆಂದು ಆಚರಿಸಿ ಪರಿಸರವನ್ನು ಹಾಳುಮಾಡುವುದು ಎಷ್ಟು ಸರಿ?, ಪ್ರಾಣಿಪಕ್ಷಿಗಳು ಹಬ್ಬಗಳನ್ನು ಮಾಡುತ್ತವೆಯೇ? ಹಾಗಂತ ಹೇಳುವುದಕ್ಕೆ ಆಗುತ್ತದೆಯೇ, ಮನುಷ್ಯರು ಪ್ರಾಣಿಗಳಿಗಿಂತ ವಿಭಿನ್ನ, ಮುಂದುವರಿದ ಸಂತತಿ ಎಂಬ ಉತ್ತುಂಗ ಸ್ಥಾನದಲ್ಲಿ ಮನುಷ್ಯ ಇದ್ದಾನೆ, ಅವನಿಗೆ ಹಬ್ಬಗಳು ಬೇಕೇಬೇಕು.

ಹಬ್ಬಗಳ ಆಚರಣೆ ಸಂದರ್ಭಗಳಲ್ಲಿ ಸಾಮಾನ್ಯ ದಿನಗಳಿಗಿಂತ ಹೆಚ್ಚು ಪ್ರಮಾಣದಲ್ಲಿ ತ್ಯಾಜ್ಯ ಉತ್ಪತ್ತಿ ಆಗುತ್ತದೆ. ವಿಷಕಾರಿ ವಸ್ತು ಹಾಗೂ ಬಣ್ಣಗಳಿಂದ ತಯಾರಿಸಿದ ವಿಗ್ರಹಗಳನ್ನು ಕೆರೆಕಟ್ಟೆ ನದಿಕಾಲುವೆಗಳಲ್ಲಿ ಮುಳುಗಿಸುವುದರಿಂದ ನೀರನ್ನು ವಿಷವಾಗಿಸಿ ಜಲಮಾಲಿನ್ಯಗೊಳಿಸುತ್ತಿದ್ದೇವೆ, ಇದರಿಂದ ಜಲಚರ ಪ್ರಾಣಿಗಳ ಉಳಿವಿಗೆ ಸಂಚಕಾರವಾಗಿದೆ.

ದೀಪಾವಳಿ ಹಬ್ಬದಲ್ಲಿ ಇತರೆಲ್ಲಾ ಹಬ್ಬಗಳಿಗಿಂತ ಅತೀ ಹೆಚ್ಚು ತ್ಯಾಜ್ಯ ಉತ್ಪತ್ತಿ ಆಗುತ್ತಿರುವುದಲ್ಲದೆ, ವಾಯುಮಾಲಿನ್ಯ, ಶಬ್ಧಮಾಲಿನ್ಯ, ಜಲಮಾಲಿನ್ಯಗಳಿಗೆ ಬಹುದೊಡ್ಡ ಕೊಡುಗೆ ನೀಡುತ್ತಾ ಬಂದಿದೆ. ಸುಟ್ಟ ಪಟಾಕಿಯ ತ್ಯಾಜ್ಯವು ಭೂಮಿಗೆ ಸೇರುವುದರಿಂದ ನೂರಾರು ವರ್ಷಗಳ ನೈಸರ್ಗಿಕ ಕ್ರಿಯೆಗಳ ಫಲದಿಂದ ಆಗಿರುವ ಮಣ್ಣು ತನ್ನ ಸತ್ವವನ್ನು ಕಳೆದುಕೊಳ್ಳುತ್ತಿದೆ.

ಕೆಲವು ವರ್ಷಗಳಿಂದ ಮದುವೆಮುಂಜಿಗಳು ಮಾಲಿನ್ಯದ ಕೇಂದ್ರಗಳಾಗಿಬಿಟ್ಟಿವೆ. ಮದುವೆಗಳಿಗೆ ದೇವಸ್ಥಾನಗಳ ಬದಲಾಗಿ ದೊಡ್ಡದೊಡ್ಡ ಛತ್ರಗಳು ಬೇರೆ. ತಿನ್ನುವುದು ಮುಷ್ಟಿಯಷ್ಟಾದರೂ ತೋರಿಕೆಗೆ ಹಲವು ಐಟಂಗಳನ್ನು ಮಾಡಿಸುವುದು ದೊಡ್ಡಸ್ಥಿಕೆ ಅನ್ನುವುದಕ್ಕಿಂತ ಮೃಷ್ಟಾನ್ನ ಭೋಜನವು ಸಮಾರಂಭಗಳಲ್ಲಿ ಸಹಜವಾಗಿಬಿಟ್ಟಿದೆ, ಅರ್ಧದಷ್ಟು ಆಹಾರವನ್ನು ಊಟದ ಎಲೆಯ ಮೇಲೆ ತಿನ್ನಲಾರದೆ ಬಿಟ್ಟಿರುತ್ತಾರೆ, ಜೊತೆಗೆ ಪಕ್ಕದಲ್ಲೊಂದು ಕುಡಿದುಳಿದ ನೀರಿನ ಪ್ಲಾಸ್ಟಿಕ್ ಬಾಟಲಿ, ಇಷ್ಟಕ್ಕೆ ಮುಗಿಯಿತೆ ಇಲ್ಲ ಬಾಡೂಟ ಬೇರೆ ಇದೆಯಲ್ಲಾ.... ಅಂದು ನೂರಾರು ಪ್ರಾಣಿಗಳ ಮಾರಣಹೋಮ, ಅಲ್ಲಿಯೂ ಲೋಡ್‌ಗಟ್ಟಲೆ ತ್ಯಾಜ್ಯ ಉತ್ಪಾದನೆ, ನೀವು ಹಿರಿಯ ನಾಗರಿಕರಾಗಿದ್ದರೆ ತಿಳಿದಿರುತ್ತದೆ ಹಿಂದಿನ ಮದುವೆಗಳಲ್ಲಿ ತ್ಯಾಜ್ಯಕ್ಕೆ ಹೋಗುತ್ತಿದ್ದದ್ದು ಪೂರ್ಣವಾಗಿ ತಿಂದು ಒಂದಗಳು ಅನ್ನವೂ ಇರದ ನೆಕ್ಕಿ ಬಿಟ್ಟ ಊಟದ ಎಲೆಗಳು ಮಾತ್ರ!, ಪ್ಲಾಸ್ಟಿಕ್ ಬಾಟಲಿಗಳಿರಲಿಲ್ಲ, ಮುತ್ತುಗದ ಎಲೆಯ ಮೇಲೆ ಬಡಿಸುತ್ತಿದ್ದ ಊಟದಲ್ಲಿ ಅನ್ನಸಾರು, ಪಲ್ಯ, ಬೂಂದಿಪಾಯಸ ಬಿಟ್ಟರೆ ಬೇರೆ ಏನಿತ್ತು?.


ಸ್ವಚ್ಛನಗರ ಬೆಂಗಳೂರಿನಲ್ಲಿ ಪ್ರತೀ ದಿನ 3000-3500 ಟನ್ ತ್ಯಾಜ್ಯ ಉತ್ಪತ್ತಿ ಆಗುತ್ತಿದೆ, ಈ ಬಾರಿಯ ಆಯುದ ಪೂಜೆ ಮುಗಿದ ಮರುದಿನ 4500 ಟನ್ಸ್ ತ್ಯಾಜ್ಯವನ್ನು ಸಂಗ್ರಹಿಸಿದೆ. ಸಾಮಾನ್ಯ ದಿನಗಳಿಗಿಂತ ಶೇ.50ರಷ್ಟು ಹೆಚ್ಚುವರಿಯಾಗಿ ಸಂಗ್ರಹಣೆ ಆಗಿದೆ. ಅಗಾಧ ಪ್ರಮಾಣದ ತ್ಯಾಜ್ಯವನ್ನು ಸೂಕ್ತ ರೀತಿಯಲ್ಲಿ ಪರಿಪೂರ್ಣವಾಗಿ ವಿಲೇವಾರಿ ಮಾಡುವುದು ಬಿಬಿಎಂಪಿಗೆ ಬಹುದೊಡ್ಡ ಸವಾಲಿನ ಕೆಲಸ, ಆ ಕೆಲಸವನ್ನು ಯಶಸ್ವಿಯಾಗಿ ನಿರ್ವಹಣೆ ಮಾಡುತ್ತಿದೆಯಾದರೂ ಮಿತಿ ಇಲ್ಲದ ತ್ಯಾಜ್ಯದ ಉತ್ಪಾದನೆಯಿಂದ ಪೂರ್ಣವಾಗಿ ವಿಲೇವಾರಿ ಮಾಡಲಾಗುತ್ತಿಲ್ಲ. ಎರಡು-ಮೂರು ದಿನ ಸಂಗ್ರಹಿಸದೆ ಕಸ ಹಾಕಿದಲ್ಲೇ ಉಳಿದರೆ ಇಡೀ ಬೆಂಗಳೂರು ಗಬ್ಬು ನಗರವಾಗಿ ಬಿಡುತ್ತದೆ. ನಿತ್ಯವೂ 18500 ಕ್ಕಿಂತಲೂ ಹೆಚ್ಚು ಪೌರಕಾರ್ಮಿಕರು ಸ್ವಚ್ಛತೆಯ ಯೋಧರಾಗಿ ಪೊರಕೆ ಹಿಡಿದು ಹಗಲಿರುಳು ಹೋರಾಟ ಮಾಡುತ್ತಿದ್ದಾರೆ.


ಕರ್ನಾಟಕ ಎಕನಾಮಿಕ್ಸ್ ಸರ್ವೆ 2021-22ರ ವರದಿಯ ಅನುಸಾರ ರಾಜ್ಯದಲ್ಲಿ ಸಂಗ್ರಹಿಸುವ ತ್ಯಾಜ್ಯದಲ್ಲಿ ಶೇ.53ರಷ್ಟು ಮಾತ್ರ ವಿಲೇವಾರಿ ಆಗುತ್ತಿರುವುದು, ಉಳಿದಿದ್ದು ಹಳೆಯ ತ್ಯಾಜ್ಯವಾಗಿ(Legacy Waste) ಬೆಟ್ಟಗಳೋಪಾದಿಯಲ್ಲಿ ನಿಂತಿವೆ. 2021-22ರಂದು ರಾಜ್ಯದಲ್ಲಿ ಉತ್ಪತ್ತಿ ಆದ ತ್ಯಾಜ್ಯ 11044.30 ಟನ್ಸ್, ಇದರಲ್ಲಿ ವೈಜ್ಞಾನಿಕವಾಗಿ ವಿಲೇವಾರಿ ಆಗಿದ್ದು ಕೇವಲ 5884.38 ಟನ್ಸ್ ಮಾತ್ರ. ಅಂದಾಜಿಸಿರುವಂತೆ ಇಲ್ಲಿಯವರೆಗೆ ವಿಲೇವಾರಿ ಆಗದೆ ಲ್ಯಾಂಡ್‌ಫಿಲ್‌ನಲ್ಲಿ ಶೇಖರವಾಗಿರುವ ಹಳೆಯ ತ್ಯಾಜ್ಯದ(Legacy Waste) ಪ್ರಮಾಣ 1,51,99,210 ಟನ್ಸ್. ದಿನದಿಂದ ದಿನಕ್ಕೆ ಏರಿಕೆ ಆಗುತ್ತಿರುವ ಪ್ರಮಾಣ ಒಂದಡೆಯಾದರೆ ಹಳೆಯದನ್ನೂ ಸೇರಿದಂತೆ ವಿಲೇವಾರಿ ಮಾಡಲಾಗದಿದ್ದರೆ ಮುಂದಿನ ಪರಿಣಾಮಗಳು ಏನಾಗಬಹುದು? ಹಾಗೂ ಇದರಿಂದ ಪ್ರಕೃತಿಯ ಮೇಲೆ ಆಗಬಹುದಾದ ದುಷ್ಪರಿಣಾಮಗಳನ್ನು ಊಹಿಸಿಕೊಳ್ಳಲಿಕ್ಕೆ ಕಷ್ಟವೆನಿಸಬಹುದು.

ಹಬ್ಬಗಳು ನಮ್ಮ ಸಂಸ್ಕೃತಿಯ ಹಿರಿಮೆ, ಆಚರಿಸುವ ಪ್ರತೀ ಸಮಾರಂಭಗಳು ಹಾಗೂ ಹಬ್ಬಕ್ಕೊಂದು ತನ್ನದೇ ಆದ ಅರ್ಥವಿದೆ, ಯಾವುದನ್ನೂ ನಿಲ್ಲಿಸಲಾಗದು, ಏಕೆಂದರೆ ದೇಶದ ಆರ್ಥಿಕತೆಯ ಪ್ರಶ್ನೆ, ಮೌಲ್ಯಗಳ ಉಳಿಯುವಿಕೆ, ಕುಟುಂಬಗಳ ಸಹಬಾಳ್ವೆ, ನಾಡಿನ ಪರಂಪರೆ, ಸುಖಶಾಂತಿ, ಸಂತೋಷ ಹಾಗೂ ಸೌಹಾರ್ದತೆಗಳ ಮೂಲ, ಮಾನವ ಜೀವನದ ಸಕಲ ಮೌಲ್ಯವು ಹಬ್ಬಗಳಲ್ಲಿ ಅಡಗಿದೆ. ಹಾಗಾಗಿ ಹಬ್ಬಗಳು ನಡೆಯಲಿಕ್ಕೇ ಬೇಕು ಮತ್ತು ಆಚರಿಸಿ ಸಂಭ್ರಮಿಸಲೇಬೇಕು. ತ್ಯಾಜ್ಯವನ್ನು ಮಿತಿಗೊಳಿಸುವ ನಿಟ್ಟಿನಲ್ಲಿ ಸುಧಾರಣಾ ಕ್ರಮಗಳನ್ನು ನಿಯಮಗಳನ್ನಾಗಿಸಿ ಜಾರಿಗೆ ತರುವುದು ಸೂಕ್ತ, ಇಲ್ಲವಾದಲ್ಲಿ ಭವಿಷ್ಯದಲ್ಲಿ ಘನಘೋರ ಪರಿಣಾಮ ಪ್ರಕೃತಿಯ ಮೇಲೆ ಆಗುವುದರಲ್ಲಿ ಸಂಶಯವಿಲ್ಲ. ಆಶ್ಚರ್ಯವೆನಿಸುವ ಅಂಶಗಳು; ಪ್ರಪಂಚದಲ್ಲಿ ಘನ ತ್ಯಾಜ್ಯ ನಿರ್ವಹಣೆಯು (Solid Waste Management) ಬಹುದೊಡ್ಡ ಸವಾಲಿನ ಕೆಲಸವಾಗಿದೆ, ನಮ್ಮ ದೇಶದಲ್ಲಿ ಪ್ರತೀ ವರ್ಷ 72 ಮಿಲಿಯನ್ ಟನ್ಸ್ ತ್ಯಾಜ್ಯ ಉತ್ಪತ್ತಿ ಆಗುವುದು ಅದರಲ್ಲಿ 43 ಮಿಲಿಯನ್ ಟನ್ಸ್ ಮಾತ್ರ ಸಂಗ್ರಹಿಸುತ್ತಿರುವುದು, ವೈಜ್ಞಾನಿಕವಾಗಿ ವಿಲೇವಾರಿ ಆಗುತ್ತಿರುವುದು ಕೇವಲ 12 ಟನ್ಸ್, ಉಳಿದ 31 ಟನ್ಸ್ ತ್ಯಾಜ್ಯವು ಲ್ಯಾಂಡ್‌ಫಿಲ್‌ನಲ್ಲಿ ಸಂಗ್ರಹವಾಗಿದೆ, ನೆನಪಿರಲಿ ಭವಿಷ್ಯದಲ್ಲಿ ಇದರ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇರುವುದು.

ದೇಶದಲ್ಲಿ ಲ್ಯಾಪ್‌ಟಾಪ್ ಕಂಪ್ಯೂಟರ್‌ಗಳಂತಹ ಇ-ತ್ಯಾಜ್ಯವನ್ನು ಮರುಬಳಕೆಗಾಗಿ ಪರಿಷ್ಕರಿಸುವ ಸಾಮರ್ಥ್ಯವು ವಾರ್ಷಿಕ 1.07 ಮಿಲಿಯನ್ ಟನ್ಸ್, ಪ್ರತೀ ಒಂದು ಮಿಲಿಯನ್ ಟನ್ ಇ-ತ್ಯಾಜ್ಯವನ್ನು ಪರಿಷ್ಕರಿಸಿದಾಗ 14 ಕೆಜಿ ಪಲ್ಲಾಡಿಯಮ್ ಲೋಹ, 3 ಕೆಜಿ ಚಿನ್ನ, 350 ಕೆಜಿ ಬೆಳ್ಳಿ ಮತ್ತು 15875 ಕೆಜಿ ತಾಮ್ರ ಸಿಗುವುದು.








ಮಕ್ಕಳ ಚಿತ್ರಕಥೆ


'ದೂರ ಹೋಗು...ದೂರ ಹೋಗು...!'

■ ಹೆಚ್.ಜಿ.ಎನ್.ಪ್ರಸಾದ್


ಮೊ. 98453 76199




ಶಿಷ್ಯನೊಬ್ಬ ಗುರುವಿನಿಂದ "ಎಲ್ಲದರಲ್ಲಿಯೂ ಭಗವಂತನಿದ್ದಾನೆ ಎಂದು ಕೇಳಿದ್ದನು ಆ ಶಿಷ್ಯನು ಒಂದು ದಿನ ಹೋಮಕ್ಕೆ ಸಮಿತ್ತು ತರಲು ಕಾಡಿಗೆ ಹೋದ.




ಅಲ್ಲಿ ಇದ್ದಕ್ಕಿದ್ದಂತೆ ದೊಡ್ಡ ಬೊಬ್ಬೆಯೊಂದು ಕೇಳಿ ಬಂತು."ಇರೋರೆಲ್ಲಾ ದಾರಿ ಬಿಟ್ಟು ಹೋಗಿ.....ಒಂದು ಮದಿಸಿದ ಆನೆ ಬರುತ್ತಿದೆ....!!!" ಎಂದು ಎಚ್ಚರಿಸುತ್ತಿದ್ದರು. ಎಲ್ಲರೂ ಓಡಿ ಹೋದರೂ ಶಿಷ್ಯ ಮಾತ್ರ ಈಗ ತಾನೆ ಎಲ್ಲದರಲ್ಲಿಯೂ ದೇವರಿದ್ದಾನೆ ಎಂಬ ಉಪದೇಶ ಕೇಳಿ ಬಂದಿದ್ದರಿಂದ ಅಲ್ಲೇ ನಿಂತಿದ್ದ.




ಆನೆಯಲ್ಲಿಯೂ ದೇವರಿದ್ದಾನೆ ಅದಕ್ಕೆ ನಾನು ಏತಕ್ಕೆ ಓಡಿಹೋಗಬೇಕು..? ಎಂದು ಮದಿಸಿದ ಆನೆ ಬರುತ್ತಿದ್ದಾಗ, ದೇವರ ಸ್ತೋತ್ರವನ್ನು ಹಾಡಲು ಪ್ರಾರಂಭಿಸಿದ. ಆನೆ ಹತ್ತಿರವಾಗುತ್ತಿದ್ದಂತೆ ಮಾವುತ "ದೂರ ಹೋಗು...ದೂರ ಹೋಗು...!!!" ಎಂದು ಕಿರುಚುತ್ತಿದ್ದ.



ಆದರೆ ಶಿಷ್ಯನಾದರೊ...ಅದನ್ನು ಲೆಕ್ಕಿಸಲೇ ಇಲ್ಲ. ಆನೆಯು ಬಂದು ಆತನನ್ನು ಸೊಂಡಲಿನಿಂದೆತ್ತಿ ಎಸೆಯಿತು. ಶಿಷ್ಯ ಪ್ರಜ್ಞೆ ತಪ್ಪಿ ಬಿದ್ದ. ಗುರುಗಳಿಗೆ ಸಮಾಚಾರ ತಿಳಿಯಿತು. ಅಲ್ಲಿದ್ದ ಶಿಷ್ಯರು ಬಂದು ಅವನನ್ನು ಆಶ್ರಮಕ್ಕೆ ಕರೆದುಕೊಂಡು ಹೋಗಿ ಶೈತ್ಯೋಪಚಾರ ಮಾಡಿದರು.



ಸ್ವಲ್ಪ ಸಮಯದ ನಂತರ ಶಿಷ್ಯನಿಗೆ ಪ್ರಜ್ಞೆ ಬಂತು. ಹತ್ತಿರದಲ್ಲೇ ಇದ್ದ ಮತ್ತೊಬ್ಬ ಶಿಷ್ಯ"ದೂರ ಹೋಗು ಎಂದು ಮಾವುತ ಕಿರುಚುತ್ತಿದ್ದರೂ ನೀನು ಅಲ್ಲೇ ಏಕೆ ನಿಂತಿದ್ದೆ..?" ಎಂದು ಕೇಳಿದ. ಆ ಶಿಷ್ಯ"ಗುರುಗಳು ಎಲ್ಲರಲ್ಲಿಯೂ ದೇವರಿದ್ದಾನೆ ಎಂದಿದ್ರಲ್ಲಾ, ಹಾಗಾಗಿ ಆನೆಯಲ್ಲಿಯೂ ದೇವರಿದ್ದಾನೆ" ಎಂದುನಾನು ದೂರ ಸರಿಯಲಿಲ್ಲ" ಎಂದ.



ಆಗ ಹತ್ತಿರವೇ ಇದ್ದ ಗುರುಗಳು "ಮಾವುತನಲ್ಲೂ ದೇವರಿದ್ದನಲ್ಲಾ...? ಅವನು ಹೇಳಿದ ಮಾತನ್ನು ಏತಕ್ಕೆ ಕೇಳಲಿಲ್ಲಾ...?" ಎಂದು ಪ್ರಶ್ನಿಸಿದರು.

ದೊಡ್ಡ ಬೇಲಾಳು ಗ್ರಾಪಂನಲ್ಲಿ ಲೆಕ್ಕ ಪರಿಶೋಧನಾ ಸಭೆ

ಬೆಟ್ಟದಪುರ, ಅ.26– ಗ್ರಾಪಂನಿಂದ ಅಭಿವೃದ್ಧಿ ಕಾರ್ಯಗಳಿಗೆ ಬಳಸಿದ ಹಣದ ಲೆಕ್ಕವನ್ನು ಸಾರ್ವಜನಿಕರ ಮುಂದೆ ಪಾರದರ್ಶಕವಾಗಿ ಮಂಡಿಸಿ ಅನುಮೋದನೆ ಪಡೆಯಲು ಗ್ರಾಮ ಸಭೆ ಏರ್ಪಡಿಸಲಾಗಿದೆ ಎಂದು ತಾಲೂಕು ಸಾಮಾಜಿಕ ಪರಿಶೋಧನಾ ಸಂಯೋಜಕ ಸಿ.ಆರ್.ಯೋಗೇಶ್ ತಿಳಿಸಿದರು.


ದೊಡ್ಡ ಬೇಲಾಳು ಗ್ರಾಪಂ ಆವರಣದಲ್ಲಿ ಸಾಮಾಜಿಕ ಲೆಕ್ಕ ಪರಿಶೋಧನಾ ಸಭೆ ನಡೆಯಿತು.

ಪಿರಿಯಾಪಟ್ಟಣ ತಾಲೂಕಿನ ದೊಡ್ಡ ಬೇಲಾಳು ಗ್ರಾಪಂ ಆವರಣದಲ್ಲಿ ನಡೆದ ಸಾಮಾಜಿಕ ಲೆಕ್ಕ ಪರಿಶೋಧನೆ ಹಾಗೂ ಜಮಾಬಂಧಿ ಗ್ರಾಮಸಭೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 2024–25ನೇ ಸಾಲಿನ ಮೊದಲ ಹಂತದ ಸಾಮಾಜಿಕ ಪರಿಶೋಧನೆಯಲ್ಲಿ 74 ಕಾಮಗಾರಿಗಳು ಅನುಷ್ಠಾನಗೊಂಡಿದ್ದು, 22,14,844 ಲಕ್ಷ ರೂ. ಕೂಲಿ ವೆಚ್ಚ ಜಮಾ ಮಾಡಲಾಗಿದೆ 10,24,105 ಲಕ್ಷ ರೂ. ಸಾಮಗ್ರಿ ವೆಚ್ಚ ನೀಡಲಾಗಿದ್ದು, ಒಟ್ಟಾರೆ 32,38,949 ಲಕ್ಷ ರೂ. ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡಲಾಗಿದೆ ಎಂದರು.

ಗ್ರಾಪಂ ಕಾರ್ಯದರ್ಶಿ ಕೆ.ಎಸ್.ಮಹದೇವ್ ಮಾತನಾಡಿ, ಸ್ವಂತ ಬಂಡವಾಳ ತೆರಿಗೆ 10,50,624 ಲಕ್ಷ ರೂ. ಹಾಗೂ ಸರ್ಕಾರದಿಂದ 42,26,901 ಲಕ್ಷ ರೂ. ಬಂದಿದ್ದು, ಮಹಾತ್ಮ ಗಾಂಧಿ ನರೇಗಾ ಯೋಜನೆ ಅಡಿ ರಸ್ತೆಗಳು, ಕೆರೆಕಟ್ಟೆಗಳು ಹಾಗೂ ವೈಯಕ್ತಿಕ ಕಾಮಗಾರಿ ಕೈಗೊಳ್ಳಲು ಅವಕಾಶವಿದ್ದು ರೈತರು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಸಭೆಗೂ ಮುನ್ನಾ ಕರ್ನಾಟಕ ರೈತ ಸಂಘ ಹಸಿರು ಸೇನೆ ಅಧ್ಯಕ್ಷ ಮರಿಗೌಡ ವಿವಿಧ ಇಲಾಖೆ ಅಧಿಕಾರಿಗಳು ಸಭೆಗೆ ಬಾರದಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿ ಸಭೆ ಮುಂದೂಡುವಂತೆ ಅಧ್ಯಕ್ಷರಲ್ಲಿ ಒತ್ತಾಯಿಸಿದರು.

ಗ್ರಾಪಂನಲ್ಲಿ ಸಾರ್ವಜನಿಕರಿಂದ ನೀರಿನ ತೆರಿಗೆ, ಮನೆ ಕಂದಾಯ ಕಟ್ಟಿಸಿಕೊಳ್ಳದೆ ಈ ಸ್ವತ್ತು ನೀಡುತ್ತಿರುವುದು ಖಂಡನೀಯ. ಇನ್ನು ಮುಂದೆ ತೆರಿಗೆ ಪಾವತಿಸಿಕೊಂಡು ಈ ಸ್ವತ್ತು ನೀಡುವಂತೆ ಸಭೆಯಲ್ಲಿ ಒತ್ತಾಯ ಮಾಡಿದರು. ಈ ವೇಳೆ ಅಧ್ಯಕ್ಷೆ ಅನಿತ, ಉಪಾಧ್ಯಕ್ಷೆ ಸಾವಿತ್ರಮ್ಮ, ಸದಸ್ಯರಾದ ಕುಮಾರ್, ಸೈಯದ್ ಅಬ್ಬಾಸ್ ಸೇರಿದಂತೆ ಸಾರ್ವಜನಿಕರು ಉಪಸ್ಥಿತರಿದ್ದರು.

ವಿಜೃಂಭಣೆಯ ಕನ್ನಡ ರಾಜ್ಯೋತ್ಸವಕ್ಕೆ ಸಿದ್ಧತೆ ಕೈಗೊಳ್ಳಿ

ಪೂರ್ವಭಾವಿ ಸಭೆಯಲ್ಲಿ ಅಧಿಕಾರಿಗಳಿಗೆ ತಹಸೀಲ್ದಾರ್ ಸೂಚನೆ

ಸರಗೂರು, ಅ.26– ಈ ಬಾರಿ ಕನ್ನಡ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ತಾಲೂಕು ಆಡಳಿತ ನಿರ್ಧರಿಸಿರುವುದರಿಂದ ಅಧಿಕಾರಿಗಳು ಸಕಲ ಸಿದ್ಧತೆ ಕೈಗೊಳ್ಳಬೇಕು ಎಂದು ತಹಸೀಲ್ದಾರ್ ರುಕಿಯಾ ಬೇಗಂ ಸೂಚಿಸಿದರು.

ಪಟ್ಟಣದ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಂದು ಪಟ್ಟಣದ ಜಯ ಚಾಮರಾಜೇಂದ್ರ ಕ್ರೀಡಾಂಗಣದಲ್ಲಿ 69ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಗುವುದು. ಶಾಸಕ ಅನಿಲ್ ಚಿಕ್ಕಮಾದು ಅಧ್ಯಕ್ಷತೆ ವಹಿಸಲಿದ್ದು, ತಾಲೂಕಿನ ಎಲ್ಲಾ ಸಮುದಾಯದ ಯಜಮಾನರು, ಮುಖಂಡರು, ಗಣ್ಯರು ಕನ್ನಡಪರ ಸಂಘಟನೆಗಳ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ. ಅಂದು ಬೆಳಗ್ಗೆ 9ಕ್ಕೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ


ಪೂರ್ವಭಾವಿ ಸಭೆಯಲ್ಲಿ ತಹಸೀಲ್ದಾರ್ ರುಕಿಯಾ ಬೇಗಂ ಮಾತನಾಡಿದರು.

ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಬೆಳ್ಳಿ ರಥದಲ್ಲಿ ಭುವನೇಶ್ವರಿ ಮೆರವಣಿಗೆ ಮಾಡಲಾಗುವುದು. ನಂತರ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ವಿಜೃಂಭಣೆಯ ಕನ್ನಡ ರಾಜ್ಯೋತ್ಸವಕ್ಕೆ ಪ್ರತಿಯೊಬ್ಬರ ಸಹಕಾರ ಅಗತ್ಯ ಎಲ್ಲರೂ ಸೇರಿ ಕನ್ನಡ ಹಬ್ಬ ಸಂಭ್ರಮದಿಂದ ಆಚರಿಸೋಣ ಎಂದರು.

ಸಾಹಿತಿ, ಜಿಲ್ಲಾ ಕಸಾಪ ನಿಕಟಪೂರ್ವ ಅಧ್ಯಕ್ಷ ವೈ.ಡಿ.ರಾಜಣ್ಣ ಮಾತನಾಡಿ, ನ.1ರ ಕನ್ನಡ ರಾಜ್ಯೋತ್ಸವದಂದು ಪಟ್ಟಣದ ಪ್ರಮುಖ ಬೀದಿಗಳ ವಾಣಿಜ್ಯ ಮಳಿಗೆಗಳಲ್ಲಿ ಕನ್ನಡ ಧ್ವಜ ಹಾರಿಸಬೇಕು. ಎಲ್ಲಾ ಕನ್ನಡಪರ ಹಾಗೂ ವಿವಿಧ ಸಂಘಟನೆಗಳು ಶುಭಾಶಯ ಕೋರುವ ಫ್ಲೆಕ್ಸ್, ಬ್ಯಾನರ್‌ಗಳನ್ನು ಪ್ರದರ್ಶಿಸಬೇಕು. ಆ ಮೂಲಕ ಪಟ್ಟಣದಲ್ಲಿ ಎಲ್ಲರೂ ಸಾಮರಸ್ಯದ ಸಂದೇಶ ಸಾರುವ ಸಂದರ್ಭ ಸೃಷ್ಟಿಯಾಗುತ್ತದೆ ಎಂದರು.

ಸಭೆಯಲ್ಲಿ ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ ಶಿವಕುಮಾರ್, ಸದಸ್ಯರಾದ ಶ್ರೀನಿವಾಸ್, ನೂರಾಳಸ್ವಾಮಿ, ಆದಿಕರ್ನಾಟಕ ಮಹಾಸಭಾ ಅಧ್ಯಕ್ಷ ಶಿವಣ್ಣ, ಕಾರ್ಯದರ್ಶಿ ಮಲ್ಲೇಶ್, ಗ್ರಾಮೀಣ ಮಹೇಶ್, ನಾಮಧಾರಿಗೌಡ ಸಮಾಜ ತಾಲೂಕು ಅಧ್ಯಕ್ಷ ಭೀಮರಾಜು, ಪಪಂ ಮುಖ್ಯಾಧಿಕಾರಿ ಎಸ್.ಎಸ್.ಮಂಜುನಾಥ್, ಪರಿಶಿಷ್ಟ ಪಂಗಡ ಕಲ್ಯಾಣ ಇಲಾಖೆ ಅಧಿಕಾರಿ ಮಹೇಶ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರಾಮಸ್ವಾಮಿ, ತಾಪಂ ಅಧಿಕಾರಿ ನಾಗೇಂದ್ರ, ಲೋಕೋಪಯೋಗಿ ಇಲಾಖೆ ಅಧಿಕಾರಿ ಬೋರಯ್ಯ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ರಂಜಿತಾ, ಕಬಿನಿ ಉಪವಿಭಾಗ ಸಿಬ್ಬಂದಿ ಮಂಜುಳ, ಮುಖಂಡರಾದ ಪುಟ್ಟಪ್ಪ, ಸ್ವಾಮಿ, ರಾಮಚಂದ್ರ, ನವೀನ್, ಎಸ್‌ಐ ಗೋಪಾಲ್, ಉಪ ತಹಸೀಲ್ದಾರ್ ಸಿನೋಲ್, ಮನೋಹರ್, ಮುಜೀಬ್, ಸುಶ್ಮಿತಾ, ಇಲಾಖಾಧಿಕಾರಿಗಳು, ಸಾರ್ವಜನಿಕರು ಭಾಗವಹಿಸಿದ್ದರು.

ದೇವರಸನಹಳ್ಳಿ ಗ್ರಾಪಂ ಉಪಾಧ್ಯಕ್ಷೆ ಪತಿ ಕೊಲೆ ಪ್ರಕರಣ

ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಲು ಆಗ್ರಹ


ಉಪ್ಪಾರ ಸಮಾಜದ ಮುಖಂಡ ಹೆಚ್.ಎಸ್.ಮೂಗಶೆಟ್ಟಿ ಮಾತನಾಡಿದರು.

ನಂಜನಗೂಡು, ಅ.26– ದೇವರಸನಹಳ್ಳಿ ಗ್ರಾಪಂ ಅಧ್ಯಕ್ಷರ ಆಯ್ಕೆ ಸಂಬಂಧ ಹಾಲಿ ಉಪಾಧ್ಯಕ್ಷೆ ಸೌಭಾಗ್ಯ ಅವರ ಪತಿ ನಂಜುಂಡಸ್ವಾಮಿ ಅವರನ್ನು ಸಂಚು ನಡೆಸಿ ಕೊಲೆ ಮಾಡಿರುವ ದುಷ್ಕರ್ಮಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಸೌಭಾಗ್ಯ ಅವರಿಗೆ ಸರ್ಕಾರ ಪರಿಹಾರ ಘೋಷಿಸಬೇಕು ಎಂದು ಉಪ್ಪಾರ ಸಮಾಜದ ಮುಖಂಡ ಹೆಚ್.ಎಸ್.ಮೂಗಶೆಟ್ಟಿ ಆಗ್ರಹಿಸಿದರು.


ನಗರದ ಉಪ್ಪಾರ ಸಮುದಾಯ ಭವನದಲ್ಲಿ ಶನಿವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಸೌಭಾಗ್ಯ ಅಧ್ಯಕ್ಷೆಯಾಗುವುದನ್ನು ತಪ್ಪಿಸುವ ಸಲುವಾಗಿ ಸಂಚು ನಡೆಸಿದ ದುರ್ಷರ್ಮಿಗಳು ಅವರ ಪತಿ ನಂಜುಂಡಸ್ವಾಮಿ ಅವರ ಮೇಲೆ ಹಲ್ಲೆ ನಡೆಸಿ, ಪ್ರಕರಣವನ್ನು ಅಪಘಾತವೆಂದು ಪೊಲೀಸರ ದಾರಿ ತಪ್ಪಿಸಲು ಯತ್ನಿಸಿದ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ. ಆದರೆ ನಮ್ಮ ಸಮುದಾಯದ ಕೆಲವರು ದುರ್ಷರ್ಮಿಗಳ ಜೊತೆ ಸೇರಿ ಸಂಚು ನಡೆಸಿ ಕೊಲೆಗೆ ಸಹಕಾರ ನೀಡಿದ್ದಾರೆ. ಅವರನ್ನು ಬಂಧಿಸಿ ವಿಚಾರಣೆ ನಡೆಸುವ ಮೂಲಕ ಪತಿ ಕಳೆದುಕೊಂಡ ಸೌಭಾಗ್ಯ ಅವರಿಗೆ ನ್ಯಾಯ ದೊರಕಿಸಬೇಕು. ನ.5ರೊಳಗೆ ಪೊಲೀಸರು ಅಗತ್ಯ ಕ್ರಮ ವಹಿಸದಿದ್ದರೆ ತಾಲೂಕು ಉಪ್ಪಾರ ಸಮಾಜದಿಂದ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಗ್ರಾಪಂ ಉಪಾಧ್ಯಕ್ಷೆ ಸೌಭಾಗ್ಯ ಮಾತನಾಡಿ, ಅ.6ರಂದು ನನ್ನ ಪತಿ ನಂಜುಂಡಸ್ವಾಮಿ ಅವರನ್ನು ಕರೆ ಮಾಡಿ ಕರೆಸಿಕೊಂಡ ದುಷ್ಕರ್ಮಿಗಳು, ತಡರಾತ್ರಿ ಅವರು ಮನೆಗೆ ಹಿಂತಿರುಗುವ ವೇಳೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಕೊಲೆ ಮಾಡಿದ್ದಾರೆ. ನಮ್ಮ ಸಮಾಜದ ಕೆಲವರು ದುಷ್ಕರ್ಮಿಗಳಿಗೆ ಸಹಕಾರ ನೀಡಿ ಕೊಲೆ ಸಂಚಿನಲ್ಲಿ ಭಾಗಿಯಾಗಿದ್ದಾರೆ. ಅವರ ಮೇಲೆ ಪೊಲೀಸರು ಕ್ರಮ ವಹಿಸಬೇಕು. ಪತಿಯನ್ನು ಕಳೆದುಕೊಂಡು ಒಂಟಿಯಾಗಿರುವ ನನಗೆ ಯಾರೂ ದಿಕ್ಕಿಲ್ಲ. ಸರ್ಕಾರ ಕ್ರಮವಹಿಸಿ ನ್ಯಾಯ ನೀಡಬೇಕು ಎಂದರು.

ಸಭೆಯಲ್ಲಿ ಮುಖಂಡರಾದ ಹೆಮ್ಮರಗಾಲ ಸೋಮಣ್ಣ, ಕೆ.ಬಿ.ಸ್ವಾಮಿ, ಸಿದ್ದಶೆಟ್ಟಿ, ಕರಳಪುರ ನಾಗರಾಜು, ಅಣ್ಣಯ್ಯಶೆಟ್ಟಿ, ಕನಕನಗರ ಮಹದೇವು, ಕೂಡ್ಲಾಪುರ ರಾಜು, ಗೋವಿಂದರಾಜು, ಹೆಮ್ಮರಗಾಲ ಶಿವಣ್ಣ, ಬಾಲಚಂದ್ರ, ಮುದ್ದು ಮಾದಶೆಟ್ಟಿ, ಗೋಳೂರು ಮಂಜು, ಕಲ್ಲಂಗಡಿ ಮಹದೇವಸ್ವಾಮಿ, ಕಾರ್ಯದರ್ಶಿ ನಾಗರಾಜು ಉಪಸ್ಥಿತರಿದ್ದರು.

ಕುರಿ ಎಳೆದೊಯ್ದ ಚಿರತೆ

ತಿ.ನರಸೀಪುರ, ಅ.26– ಕುರಿ ಮೇಲೆ ಚಿರತೆ ಏಕಾಏಕಿ ದಾಳಿ ನಡೆಸಿ ಎಳೆದೊಯ್ದಿರುವ



ಘಟನೆ ತಾಲೂಕಿನ ಹೊಸೂರ ಹುಂಡಿ ಗ್ರಾಮದ ಬಳಿ ಶುಕ್ರವಾರ ನಡೆದಿದೆ. ಗ್ರಾಮದ ಸುಬ್ಬಪ್ಪ ಎಂಬುವರು ಸುಜ್ಜಲೂರು ಮಾರ್ಗ ಹಾಗೂ ಕಾಲುವೆ ರಸ್ತೆ ಪಕ್ಕದಲ್ಲಿ ಕುರಿ ಮೇಯಿಸುವ ಸಂದರ್ಭ ಹಠಾತ್ತನೆ ದಾಳಿ ನಡೆಸಿದ ಚಿರತೆ ಕುರಿ ಎಳೆದೊಯ್ದಿದೆ ಎನ್ನಲಾಗಿದೆ. ವಿಷಯ ತಿಳಿಯುತ್ತಿದ್ದಂತೆ ಗ್ರಾಮದ ಜನರು ಭಯಭೀತರಾಗಿ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದು, ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ. ಶನಿವಾರವೂ ಜಮೀನಿಗೆ ತೆರಳುತ್ತಿದ್ದ ರೈತರಿಗೆ ಚಿರತೆ ಪ್ರತ್ಯಕ್ಷವಾಗಿದ್ದು, ಕೂಡಲೇ ಅರಣ್ಯ ಇಲಾಖೆ ಬೋನಿಟ್ಟು ಚಿರತೆ ಸೆರೆ ಹಿಡಿಯುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ನಾಳೆ ಸರ್ಕಾರಿ ನೌಕರರ ಸಂಘದ ಚುನಾವಣೆ

ಕೆ.ಆರ್.ನಗರ, ಅ.26– ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ನಿರ್ದೇಶಕರ ಸ್ಥಾನಗಳಿಗೆ ಅ.28 ರಂದು ಚುನಾವಣೆ ನಡೆಯಲಿದೆ.

ಸಂಘದ 34 ನಿರ್ದೇಶಕ ಸ್ಥಾನಗಳ ಪೈಕಿ ಈಗಾಗಲೇ 21 ಸ್ಥಾನಗಳಿಗೆ ಅವಿರೋಧ ಆಯ್ಕೆಯಾಗಿದ್ದು, ಉಳಿದ 13 ನಿರ್ದೇಶಕ ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು, ನಿರ್ದೇಶಕ ಸ್ಥಾನದ ಆಕಾಂಕ್ಷಿಗಳು ತಮ್ಮನ್ನು ಬೆಂಬಲಿಸುವಂತೆ ಮತದಾರರಲ್ಲಿ ಮನವಿ ಮಾಡುತ್ತಿದ್ದಾರೆ. ಒಟ್ಟಾರೆ ಅ.28ರಂದು ಪಟ್ಟಣದ ಬಿಆರ್‌ಸಿ ಕೇಂದ್ರದಲ್ಲಿ ಚುನಾವಣೆ ನಡೆಯಲಿದ್ದು, ಅಂದು ಬೆಳಗ್ಗೆ 9 ರಿಂದ ಸಂಜೆ 4 ಗಂಟೆವರೆಗೆ ಅರ್ಹ 1179 ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದು, ಅಂದೇ ಎಣಿಕೆ ಕಾರ್ಯ ನಡೆಸಿ ಫಲಿತಾಂಶ ಪ್ರಕಟಿಸಲಾಗುತ್ತದೆ.

ಅಂತರಸಂತೆಯಲ್ಲಿ ಸರಣಿ ಕಳ್ಳತನ




ಮಹದೇಶ್ವರ ದೇವಸ್ಥಾನ, ಕಳ್ಳರು ಶಾಲೆ ಕೊಠಡಿ ಒಳಗೆ ನುಗ್ಗುತ್ತಿರುವ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿರುವುದು.

ಹೆಚ್.ಡಿ.ಕೋಟೆ, ಅ.26– ತಾಲೂಕಿನ ಅಂತರಸಂತೆಯಲ್ಲಿ ದುಷ್ಕರ್ಮಿಗಳು ಗುರುವಾರ ರಾತ್ರಿ ಸರಣಿ ಕಳ್ಳತನ ಮಾಡಿರುವ ಬಗ್ಗೆ ವರದಿಯಾಗಿದೆ.

ಮೊದಲಿಗೆ ಗ್ರಾಮದ ನಿವಾಸಿ ಬದ್ರುದ್ದೀನ್ ಅವರಿಗೆ ಸೇರಿದ ಸೈಕಲ್ ಶಾಪ್ ಬೀಗ ಒಡೆದಿರುವ ದುಷ್ಕರ್ಮಿಗಳು ರಿಪೇರಿಗೆ ಬಂದಿದ್ದ ಸೈಕಲ್‌ಗಳನ್ನು ಕಳವು ಮಾಡಿದ್ದಾರೆ. ನಂತರ ಕಳ್ಳರು ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಕಂಪ್ಯೂಟರ್ ಇತ್ಯಾದಿ ಬೆಲೆಬಾಳುವ ವಸ್ತುಗಳಿದ್ದ ಕೊಠಡಿ ಬಾಗಿಲು ಮುರಿಯಲು ಪ್ರಯತ್ನಿಸಿದ್ದು, ಅದು ಸಾಧ್ಯವಾಗದ ಕಾರಣ ಮತ್ತೊಂದು ಕೊಠಡಿ ಬೀಗ ಮುರಿದು ಒಳ ನುಗ್ಗಿರುವ ದುಷ್ಕರ್ಮಿಗಳು ಸಿಸಿ ಕ್ಯಾಮರಾಗೆ ಸಂಬಂಧಿಸಿದ ಡಿವಿಆರ್ ಅನ್ನು ಕಳವು ಮಾಡಿದ್ದಾರೆ. ಅಲ್ಲದೇ ಶಾಲೆಯಲ್ಲಿದ್ದ ಊಟವನ್ನು ಸೇವಿಸಿ ಅಲ್ಲಿಯೇ ಮದ್ಯ ಸೇವಿಸಿ ಹೋಗಿದ್ದಾರೆ. ಈ ವೇಳೆ ಶಾಲೆ ಒಳಗೆ ಕಳ್ಳರು ಪ್ರವೇಶಿಸುತ್ತಿರುವ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ನಂತರ ಮಹದೇಶ್ವರ ದೇವಾಲಯದ ಬಾಗಿಲು ಮುರಿದಿರುವ ಕಳ್ಳರು ಹುಂಡಿ ಒಡೆದು ಸುಮಾರು 10 ಸಾವಿರಕ್ಕೂ ಹೆಚ್ಚು ಹಣವನ್ನು ದೋಚಿದ್ದಾರೆ. ಮಹದೇಶ್ವರ ದೇವಾಲಯದಲ್ಲಿ ಆಗಾಗ್ಗೆ ಕಳ್ಳತನವಾಗುತ್ತಿದ್ದ ಹಿನ್ನೆಲೆಯಲ್ಲಿ ದೇವಾಲಯದಲ್ಲಿ ಚಿನ್ನ ಹಾಗೂ ಬೆಳ್ಳಿ ಪದಾರ್ಥಗಳನ್ನು ಇಡುತ್ತಿರಲಿಲ್ಲ. ತಿಂಗಳಿಗೊಮ್ಮೆ ಹುಂಡಿ ತೆರೆದು ಸಂಗ್ರಹವಾಗುತ್ತಿದ್ದ ಹಣವನ್ನು ದೇವಾಲಯದ ಕಮಿಟಿ ಸದಸ್ಯರು ತೆಗೆದುಕೊಳ್ಳುತ್ತಿದ್ದರು. ಇದೀಗ ಮತ್ತೆ ದೇವಾಲಯದಲ್ಲಿ ಕಳ್ಳತನ ನಡೆದಿದ್ದು ಸಾವಿರಾರು ಹಣ ದೋಚಿ ಕಳ್ಳರು ಪರಾರಿಯಾಗಿದ್ದಾರೆ ಎಂದು ದೇವಸ್ಥಾನ ಕಮಿಟಿ ಸದಸ್ಯರು ತಿಳಿಸಿದರು.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಂತರಸಂತೆ ಪೊಲೀಸರು ಪರಿಶೀಲನೆ ನಡೆಸಿದರು. ಈ ವೇಳೆ ಮಾತನಾಡಿದ ಎಸ್‌ಐ ಚಂದ್ರಹಾಸ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದೇವೆ. ನಮ್ಮ ಸಿಬ್ಬಂದಿ ನಿತ್ಯ ರಾತ್ರಿ ನಾಲ್ಕೈದು ಬಾರಿ ಗಸ್ತು ತಿರುಗುತ್ತಾರೆ. ದೇವಸ್ಥಾನ ಹಾಗೂ ಶಾಲಾವರಣದಲ್ಲಿ ವಿದ್ಯುತ್ ದೀಪಗಳಿಲ್ಲ. ಕಗ್ಗತ್ತಲಿದೆ. ಇದರಿಂದಾಗಿಯೇ ಕಳ್ಳರು ಇಂತಹ ಸ್ಥಳಗಳನ್ನೇ ಟಾರ್ಗೆಟ್ ಮಾಡಿಕೊಳ್ಳುತ್ತಾರೆ. ದೀಪಗಳನ್ನು ಅಳವಡಿಸಲು ತಿಳಿಸಲಾಗಿದೆ. ದೂರು ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದೇವೆ ಎಂದರು. ಈ ಸಂಬಂಧ ಅಂತರಸಂತೆ ಠಾಣೆಯಲ್ಲಿ ದೂರು ದಾಖಲಾಗಿದೆ.

ಸಿಂಧುವಳ್ಳಿ ಡೈರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ


ಸಿಂಧುವಳ್ಳಿ ಡೈರಿ ಅಧ್ಯಕ್ಷರಾಗಿ ಕೆಂಪಣ್ಣ, ಉಪಾಧ್ಯಕ್ಷರಾಗಿ ಪಾಪರಾವ್ ಆಯ್ಕೆಯಾದರು.

ನಂಜನಗೂಡು, ಅ.26– ತಾಲೂಕಿನ ಸಿಂಧುವಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಎಸ್.ಎಂ.ಕೆಂಪಣ್ಣ, ಉಪಾಧ್ಯಕ್ಷರಾಗಿ ಪಾಪರಾವ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಆವರಣದಲ್ಲಿ ಶನಿವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎಸ್.ಎಂ.ಕೆಂಪಣ್ಣ, ಉಪಾಧ್ಯಕ್ಷ ಸ್ಥಾನಕ್ಕೆ ಪಾಪರಾವ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ, ಸಹಕಾರ ಸಂಘಗಳ ನಿಬಂಧಕ ರಘು ಘೋಷಿಸಿದರು.

ನೂತನ ಅಧ್ಯಕ್ಷ ಎಸ್.ಎಂ.ಕೆಂಪಣ್ಣ ಮಾತನಾಡಿ, ಸಿಂಧುವಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ಪ್ರಗತಿಯಲ್ಲಿದೆ. ನಾನು ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ರೈತರಿಗೆ ಕೊಡಿಸುವ ಮೂಲಕ ಅವರನ್ನು ಮತ್ತಷ್ಟು ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸಲಾಗುವುದು. ಅಲ್ಲದೇ ಸಹಕಾರ ಸಂಘವನ್ನು ಇನ್ನಷ್ಟು ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ಶ್ರಮಿಸುತ್ತೇನೆ ಎಂದರು.

ಈ ವೇಳೆ ಬಿಜೆಪಿ ರಾಜ್ಯ ಮುಖಂಡ ಸುಬ್ಬಣ್ಣ ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ ನಿರ್ದೇಶಕರಾದ ಸುರೇಂದ್ರರಾಜೇಅರಸ್, ವೆಂಕಟಸ್ವಾಮಿಗೌಡ, ಚಂದ್ರಮ್ಮ, ಮಾಲತಿ, ಜಯಶಂಕರಪ್ಪ, ಶಿವನಾಗಪ್ಪ, ಶಾಂತಪ್ಪ, ಮಲಿಯಯ್ಯ, ಮುಖಂಡರಾದ ಗುರುಮಲ್ಲಪ್ಪ ವೆಂಕಟೇಶ್, ಮಹದೇವ ನಾಯಕ, ಶಿವಮೂರ್ತಿ, ಕೃಷ್ಣನಾಯಕ, ಸೋಮ ನಾಯಕ, ಜಯರಾಜು, ಶಿವನಾಗು, ಮಲ್ಲೇಶ, ರಮೇಶ, ಮಲ್ಲಿಕಾರ್ಜುನ ಸೇರಿದಂತೆ ಇತರರಿದ್ದರು.

ನಾಳೆ ಇಪಿಎಫ್‌ನ ನಿಧಿ ಆಪ್ಕೆ ನಿಕಟ್ 2.0 ಕಾರ್ಯಕ್ರಮ

ಮೈಸೂರು, ಅ. 26– ಕಾರ್ಮಿಕ ಭವಿಷ್ಯ ನಿಧಿ ಸಂಘಟನೆ ಮೈಸೂರು ಪ್ರಾದೇಶಿಕ ಕಚೇರಿ ವತಿಯಿಂದ ತಿ.ನರಸೀಪುರದ ಕೆಎಸ್‌ಐಸಿ ಇಂಡಸ್ಟ್ರೀಸ್ ಕಾರ್ಪೊರೇಷನ್‌ನ ಸಿಲ್ಕ್ ಫಿಲೇಚರ್ ಯೂನಿಟ್, ಮಂಡ್ಯದ ಪಿಇಎಸ್ ಇಂಜಿನಿಯರಿಂಗ್ ಕಾಲೇಜು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಚೇರಿ, ಜಿಲ್ಲಾಧಿಕಾರಿಗಳ ಕಚೇರಿಯ 3ನೇ ಮಹಡಿ ಕೊಠಡಿ ಸಂಖ್ಯೆ 308 ಚಾಮರಾಜನಗರದಲ್ಲಿ ನಿಧಿ ಆಪ್ಕೆ 2.0 ಅಡಿಯಲ್ಲಿ ಅಕ್ಟೋಬರ್ 28ರಂದು ಬೆಳಗ್ಗೆ 9 ಗಂಟೆಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಕ್ರಮದಲ್ಲಿ ಪಿಎಫ್ ಸದಸ್ಯರು, ಪಿಂಚಣಿದಾರರು, ಉದ್ಯೋಗದಾತರು ಮುಂತಾದ ಮಧ್ಯಸ್ಥಗಾರರು ಜಾಗೃತಿಗಾಗಿ ಹಾಗೂ ಮಾಹಿತಿ ಪಡೆಯಲು ಕಾರ್ಯಕ್ರಮಕ್ಕೆ ಹಾಜರಾಗಬೇಕೆಂದು ಕೋರಲಾಗಿದೆ. ಹೆಚ್ಚಿನ ವಿವರಗಳಿಗಾಗಿ ದೂ. ಸಂಖ್ಯೆ: 0821–2599200/222 ಅನ್ನು ಸಂಪರ್ಕಿಸಬಹುದು ಅಥವಾ ro.mysore@epfindia.gov.inಗೆ ಮೇಲ್ ಮಾಡಬಹುದು ಇಲ್ಲವೇ ಮೈಸೂರಿನ ಪ್ರಾದೇಶಿಕ ಕಚೇರಿಯ ಸಾಮಾಜಿಕ ಮಾಧ್ಯಮ ವೇದಿಕೆ (@epfomysore)ಗೆ ಭೇಟಿ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.


ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ತೊಡಗಿಸಿಕೊಳ್ಳಿ

ಕೆ.ಆರ್.ನಗರ, ಅ.26– ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ತೊಡಗಿಸಿಕೊಂಡು ತಮ್ಮಲ್ಲಿರುವ ಪ್ರತಿಭೆ ಅನಾವರಣ ಮಾಡಬೇಕು ಎಂದು ತಾಲೂಕಿನ ಕಾಳೇನಹಳ್ಳಿ ಆದರ್ಶ ಶಾಲೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಕೆ.ಪಿ.ಜಗದೀಶ್ ತಿಳಿಸಿದರು.

ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಪ್ರಥಮ ಸ್ಥಾನ ಗಳಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿನಿಯರನ್ನು ಅಭಿನಂದಿಸಿ ಮಾತನಾಡಿದ ಅವರು, ಶಿಕ್ಷಣ ಕ್ಷೇತ್ರದಷ್ಟೇ ವಿಪುಲ ಅವಕಾಶಗಳು ಕ್ರೀಡಾ ಕ್ಷೇತ್ರದಲ್ಲಿದ್ದು, ಅದನ್ನು ಸದ್ಬಳಕೆ ಮಾಡಿಕೊಂಡು ಭವಿಷ್ಯ ರೂಪಿಸಿಕೊಳ್ಳಬೇಕು ಎಂದರು.

ಉತ್ತಮ ಕ್ರೀಡಾಪಟುಗಳು ದೇಶದ ಆಸ್ತಿಯಾಗಿದ್ದು, ಅವರ ಪ್ರತಿಭೆಗೆ ಪೋಷಕರು ಮತ್ತು ಶಿಕ್ಷಕರು ಅಗತ್ಯ ಪ್ರೋತ್ಸಾಹ ನೀಡುವುದರ ಜೊತೆಗೆ ಸರ್ಕಾರಗಳು ಕ್ರೀಡಾ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಿ ಗ್ರಾಮೀಣ ಪ್ರತಿಭೆಗಳನ್ನು ಗುರುತಿಸಿ ಉತ್ತಮ ತರಬೇತಿ ನೀಡಬೇಕು ಎಂದು ಮನವಿ ಮಾಡಿದರು.

ಈ ವೇಳೆ ಜಿಲ್ಲಾ ಮಟ್ಟದ ಓಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಶಾಲೆ ವಿದ್ಯಾರ್ಥಿನಿಯರಾದ ಮೋನಿಶಾ, ಶಮಿತಾ, ದೀಕ್ಷಿತಾ ಮತ್ತು ಧನ್ಯಶ್ರೀ ಅವರನ್ನು ಗೌರವಿಸಲಾಯಿತು. ಶಾಲಾ ಮುಖ್ಯಶಿಕ್ಷಕಿ ಎಸ್.ರುಕ್ಮಿಣಿ, ದೈಹಿಕ ಶಿಕ್ಷಣ ಶಿಕ್ಷಕಿ ಹೆಚ್.ಎನ್.ಮಮತ ಮಾತನಾಡಿದರು. ಶಿಕ್ಷಕರಾದ ರಶ್ಮಿ, ಲೋಕೇಶ್, ಪ್ರಭು, ಸುಮಾ, ದೀಪ್ತಿ, ಪುಷ್ಪಲತಾ, ಅನಿತಾ, ಕವಿತಾ, ನವ್ಯ, ಹರೀಶ್, ಶಶಿಕಲಾ ಮತ್ತು ಶಾಲಾ ಸಿಬ್ಬಂದಿ ಹಾಜರಿದ್ದು, ಸಾಧಕ ವಿದ್ಯಾರ್ಥಿನಿಯರನ್ನು ಅಭಿನಂದಿಸಿದರು.


ರಾಜ್ಯ ಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿನಿಯರನ್ನು ಅಭಿನಂದಿಸಲಾಯಿತು.

ಬಿಳಿಕೆರೆಯಲ್ಲಿ ಮದ್ಯವರ್ಜನ ಶಿಬಿರ

ಹುಣಸೂರು, ಅ.26– ಆರಂಭದಲ್ಲಿ ಯಾರೂ ಮದ್ಯಕ್ಕೆ ದಾಸರಾಗುವುದಿಲ್ಲ. ದುಷ್ಟರ ಸಹವಾಸದಿಂದ ಕಾಲಕ್ರಮೇಣ ತಮ್ಮತನ ಮರೆತು ಮದ್ಯ ವ್ಯಸನಿಯಾಗುತ್ತಾರೆ ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕ ಮುರಳೀಧರ್ ತಿಳಿಸಿದರು.

ತಾಲೂಕಿನ ಬಿಳಿಕೆರೆ ನಂಜುಂಡೇಶ್ವರ ಕಲ್ಯಾಣ ಮಂಟಪದಲ್ಲಿ ನಡೆದ ಮದ್ಯವರ್ಜನಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಮದ್ಯಪಾನಕ್ಕೆ ಒಮ್ಮೆ ನಾವು ದಾಸರಾದರೆ, ನಾವೇ ಬಿಡಬೇಕು ಎಂದರು ಬಿಡಲು ಸಾಧ್ಯವಿಲ್ಲ. ಆದ್ದರಿಂದ ಈ ಬಗ್ಗೆ ಅರಿವು ಪಡೆಯುವ ಅಗತ್ಯವಿದೆ ಎಂದರು.

ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರು ಈ ಹಿಂದೆ ಎಷ್ಟೋ ಕುಟುಂಬಗಳು ಬೀದಿಗೆ ಬಂದಿದ್ದನ್ನು ಮನಗೊಂಡು ಈ ಶಿಬಿರವನ್ನು ಆಯೋಜಿಸಿದರು. ಇಲ್ಲಿವರೆಗೆ ನಾಡಿನಾದ್ಯಂತ 1878 ಶಿಬಿರಗಳನ್ನು ನಡೆಸಿ 2 ಲಕ್ಷಕ್ಕೂ ಹೆಚ್ಚು ಕುಟುಂಬಗಳ ಕಣ್ಣು ಒರೆಸುವ ಕೆಲಸ ಮಾಡಿದ್ದಾರೆ ಎಂದರು.

ಮದ್ಯಪಾನ ವ್ಯಸನ ಸಮಿತಿ ಅಧ್ಯಕ್ಷ ಬಿಳಿಕೆರೆ ಪ್ರಸನ್ನ ಮಾತನಾಡಿ, ಕುಡಿಯುವುದೇ ಜೀವನವಾಗಬಾರದು. ನಿಮ್ಮನ್ನು ನಂಬಿ ನಿಮ್ಮ ತಂದೆ, ತಾಯಿ, ಹೆಂಡತಿ, ಮಕ್ಕಳು ಇರುತ್ತಾರೆ. ಕುಡಿತದ ಚಟಕ್ಕೆ ನೀವು ಬಲಿಯಾಗಿ, ಕುಟುಂಬವನ್ನು ಬೀದಿಗೆ ನೂಕದೇ ಇಂತಹ ಶಿಬಿರಗಳನ್ನು ಸದ್ಬಳಕೆ ಮಾಡಿಕೊಳ್ಳಿ ಎಂದು ಮನವಿ ಮಾಡಿದರು.

ಜಿಲ್ಲಾ ಸಮಿತಿ ನಿರ್ದೇಶಕ ಮಾಧವ ಮಾತನಾಡಿ, ಕುಡಿತದ ಕಾರಣಕ್ಕೆ ನೀವು ಸಮಾಜದ ದೃಷ್ಟಿಯಲ್ಲಿ ಕೆಟ್ಟವರಾಗಿದ್ದೀರಿ. ಅದನ್ನೇ ಹಾಸುಹೊಕ್ಕಾಗಿ ಸ್ವೀಕರಿಸಿ ಮನೆ ಮಂದಿಯನ್ನು ಗೌರವಿಸದೆ ಹೆಂಡತಿ, ಮಕ್ಕಳನ್ನು ಹಿಂಸಿಸುವುದರಿಂದ ನಿಮ್ಮ ಕುಟುಂಬದ ನೆಮ್ಮದಿಯನ್ನು ನೀವೇ ಕಿತ್ತುಕೊಂಡಿದ್ದೀರಿ ಇದರಿಂದ ಹೊರಬನ್ನಿ ಎಂದರು.


ಕಾರ್ಯಕ್ರಮದಲ್ಲಿ ಶ್ರೀಧರ್ಮಸ್ಥಳ ತಾಲೂಕು ಯೋಜನಾಧಿಕಾರಿ ಧನಂಜಯ್, ಜಿಲ್ಲಾ ಸಮಿತಿ ನಿರ್ದೇಶಕ ಸೋಮಶೇಖರ್, ದೇವರಾಜ್, ತಾಲೂಕು ಸಮಿತಿಯ ಉಮೇಶ್, ಕಿರಣ್ ಕುಮಾರ್, ಸಮಿತಿ ಕೃಷ್ಣೇಗೌಡ, ಗ್ರಾಪಂ ಅಧ್ಯಕ್ಷೆ ಶ್ರುತಿ, ಉಪಾಧ್ಯಕ್ಷೆ ಶೈಲಜಾ ಹಾಗೂ ವೀಣಾ, ಕಿರಣ್ ಇದ್ದರು.


ಮದ್ಯವರ್ಜನಾ ಶಿಬಿರವನ್ನು ಯೋಜನೆ ಜಿಲ್ಲಾ ನಿರ್ದೇಶಕ ಮುರಳೀಧರ್ ಉದ್ಘಾಟಿಸಿದರು.

ತಿ.ನರಸೀಪುರ: ನೂತನ ಪುರಸಭಾ ಕಚೇರಿಗೆ ಪೂಜೆ

ತಿ.ನರಸೀಪುರ, ಅ.26– ಎಸ್‌ಎಫ್‌ಸಿ ಮುಕ್ತನಿಧಿ ವಿಶೇಷ ಅನುದಾನದಡಿ ಪಟ್ಟಣದ ಲಿಂಕ್ ರಸ್ತೆ ಬಳಿ 7 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ನೂತನ ಪುರಸಭೆ ಕಚೇರಿಯಲ್ಲಿ ಇತ್ತೀಚೆಗೆ ಪೂಜಾ ಕಾರ್ಯ ಹಮ್ಮಿಕೊಳ್ಳಲಾಗಿತ್ತು.

ತಾಲೂಕಿನ ತಾಯೂರು ಗೇಟ್ ಬಳಿ ನಡೆದ ಕಾರ್ಯಕ್ರಮದಲ್ಲಿ ನೂತನ ಪುರಸಭೆ ಕಚೇರಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದ್ದರು. ಈ ಹಿನ್ನೆಲೆಯಲ್ಲಿ ಪುರಸಭಾಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರು ಸೇರಿದಂತೆ ಕಚೇರಿ ಸಿಬ್ಬಂದಿ ಕಚೇರಿಗೆ ಪೂಜೆ ಸಲ್ಲಿಸಿದರು.



ನಂತರ ಮಾತನಾಡಿದ ಪುರಸಭಾ ಮುಖ್ಯಾಧಿಕಾರಿ ಬಿ.ಕೆ.ವಸಂತಕುಮಾರಿ, ಹಳೆಯ ಕಟ್ಟಡ ಕಿರಿದಾಗಿದ್ದರಿಂದ ಕಾರ್ಯ ನಿರ್ವಹಿಸಲು ಕಷ್ಟವಾಗುತ್ತಿತ್ತು. ಇದೀಗ ನಿರ್ಮಾಣವಾಗಿರುವ ನೂತನ ಕಟ್ಟಡ ಅಧ್ಯಕ್ಷ–ಉಪಾಧ್ಯಕ್ಷರಿಗೆ ಪ್ರತ್ಯೇಕ ಕೊಠಡಿಗಳು, ತರಬೇತಿ ನೀಡಲು ಸುಸಜ್ಜಿತ ಹಾಲ್, ವಿಶಾಲವಾದ ಸಭಾಂಗಣ, ಪಾರ್ಕಿಂಗ್ ವ್ಯವಸ್ಥೆ ಒಳಗೊಂಡಿದೆ. ಮುಂದಿನ ದಿನಗಳಲ್ಲಿ ನಗರಸಭೆಯಾಗಿ ಪರಿವರ್ತನೆಗೊಂಡರೂ ಕಾರ್ಯ ನಿರ್ವಹಿಸುವ ಮಟ್ಟದಲ್ಲಿ ಕಚೇರಿ ನಿರ್ಮಿಸಲಾಗಿದೆ. ತಿ.ನರಸೀಪುರ ನಾಗರಿಕರು ಸಕಾಲದಲ್ಲಿ ಕಂದಾಯ ಪಾವತಿಸಿ ಪುರಸಭೆ ಅಭಿವೃದ್ಧಿಗೆ ಸಹಕರಿಸಬೇಕು ಎಂದರು.

ಸದಸ್ಯ ಸಿ.ಪ್ರಕಾಶ್ ಮಾತನಾಡಿ, ನೂತನ ಪುರಸಭಾ ಕಚೇರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರ ಕೊಡುಗೆಯಾಗಿದೆ. ಕಚೇರಿ ಸಕಲ ಸೌಲಭ್ಯಗಳು ಒಳಗೊಂಡಿರುವುದರಿಂದ ನಾಗರಿಕರಿಗೆ ಯಾವುದೇ ತೊಂದರೆಯಾಗುವುದಿಲ್ಲ. ಎಲ್ಲಾ ನೌಕರರು ಒಂದೇ ಕಡೆ ಸಿಗುತ್ತಾರೆ. ತಿ.ನರಸೀಪುರ ಬೃಹದಾಕಾರವಾಗಿ ಬೆಳೆಯುತ್ತಿರುವುದರಿಂದ ಮುಂದಿನ ದಿನಗಳಲ್ಲಿ ನಗರಸಭೆಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಈಗಾಗಲೇ ಪಟ್ಟಣ ಪುರಸಭೆ ವ್ಯಾಪ್ತಿಯ ರಸ್ತೆಗಳಿಗೆ ಹಣ ಬಿಡುಗಡೆಯಾಗಿದ್ದು, ಸದ್ಯದಲ್ಲೇ ಕಾಮಗಾರಿ ಆರಂಭಗೊಳ್ಳಲಿದೆ ಎಂದರು.

ಈ ವೇಳೆ ಪುರಸಭಾಧ್ಯಕ್ಷೆ ವಸಂತ ಶ್ರೀಕಂಠ, ಉಪಾಧ್ಯಕ್ಷೆ ರಾಜೇಶ್ವರಿ ರಾಘವೇಂದ್ರ, ಮಾಜಿ ಅಧ್ಯಕ್ಷರಾದ ಟಿ.ಎಂ.ನಂಜುಂಡಸ್ವಾಮಿ, ಎನ್. ಸೋಮು, ಮದನ್‌ರಾಜ್, ಸದಸ್ಯರಾದ ಬಾದಾಮಿ ಮಂಜು, ಸೈಯದ್ ಆಹಮದ್, ಎಲ್.ಮಂಜುನಾಥ್, ನಾಗರಾಜು, ಎಸ್.ಕೆ.ಕಿರಣ್, ಪ್ರೇಮ ಮರಯ್ಯ, ನಾಗರತ್ನ, ಬೇಬಿ ಹೇಮಂತ್, ಮಹದೇವಮ್ಮ, ರೂಪ, ಮಾದೇವಿ, ಮೋಹನ್, ರೂಪ ಪರಮೇಶ್, ತೇಜಸ್ವಿನಿ, ಸಿದ್ದು,ಎ.ಡಿ.ನಾಗರಾಜು ಹಾಗೂ ಸಿಬ್ಬಂದಿ ವರ್ಗ ಮತ್ತಿತರರಿದ್ದರು.

ಮಕ್ಕಳಲ್ಲಿ ಕಾನೂನು, ಸ್ವಚ್ಛತೆ ಬಗ್ಗೆ ಅರಿವು ಮೂಡಿಸಿ

ಹುಣಸೂರು, ಅ.26– ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಜಾರಿಯಲ್ಲಿರುವ ಕಾನೂನುಗಳು, ಮಕ್ಕಳ ವೈಯಕ್ತಿಕ ಸ್ವಚ್ಛತೆ ಹಾಗೂ ಇತರೆ ರಕ್ಷಣೆ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವ ಕಾರ್ಯ ಶಾಲಾ ಹಂತದಲ್ಲಿ ಹೆಚ್ಚಾಗಿ ನಡೆಯಬೇಕು ಎಂದು ರಾಷ್ಟ್ರೀಯ ಗ್ರಾಮ ಸ್ವರಾಜ್ ಅಭಿಯಾನ ಸಮಾಲೋಚಕಿ ಡಾ.ಸಿ.ಹೆಚ್.ವಸುಂದರಾದೇವಿ ತಿಳಿಸಿದರು.

ರಾಷ್ಟ್ರೀಯ ಪಂಚಾಯತ್ ರಾಜ್ ಪುರಸ್ಕಾರ ಅಂಗವಾಗಿ ಮಕ್ಕಳ ಸ್ನೇಹಿ ಪಂಚಾಯತ್‌ಗೆ ಆಯ್ಕೆಯಾಗಿರುವ ಕರೀಮುದ್ದನಹಳ್ಳಿ ಗ್ರಾಪಂಗೆ ರಾಜ್ಯ ಮೇಲ್ವಿಚಾರಣಾ ತಂಡದ ನೇತೃತ್ವ ವಹಿಸಿ ಬಳಿಕ ಪಂಚಾಯಿತಿಯಲ್ಲಿ ಪುರಸ್ಕಾರಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿ ಅವರು ಮಾತನಾಡಿದರು.

ಬಳಿಕ ಸರ್ಕಾರಿ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಕುಡಿಯುವ ನೀರಿನ ಸೌಲಭ್ಯ, ವಿಜ್ಞಾನ ಪ್ರಯೋಗಾಲಯ, ಕಂಪ್ಯೂಟರ್ ಕೊಠಡಿ, ಸ್ಮಾರ್ಟ್ ಕ್ಲಾಸ್, ಗಂಡು ಹೆಣ್ಣಿಗೆ ಪ್ರತ್ಯೇಕ ಶೌಚಾಲಯ ಹಾಗೂ ಸ್ವಚ್ಛತೆ, ಅಡುಗೆ ಕೋಣೆ ಸೇರಿದಂತೆ ಮಕ್ಕಳೊಂದಿಗೆ ಪಠ್ಯೇತರ ಕುರಿತು ಸಂವಾದ ನಡೆಸಿದರು.

ಭೇಟಿ ಸಂದರ್ಭ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ, ವಿಶೇಷ ಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಪ್ರಧಾನ ವ್ಯವಸ್ಥಾಪಕಿ ಕೆ.ಹೆಚ್.ಅಕ್ಕ ಮಹಾದೇವಿ, ಅಬ್ದುಲ್ ನಜೀರ್ ಸಾಬ್, ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ ಬೋಧಕ ಮಲ್ಲಿಕಾರ್ಜುನಸ್ವಾಮಿ, ತಾಲೂಕು ಯೋಜನಾಧಿಕಾರಿ ಎಂ.ಎಸ್.ರಾಜೇಶ್, ಗ್ರಾಪಂ ಅಧ್ಯಕ್ಷೆ ಕುಮಾರಿ, ಉಪಾಧ್ಯಕ್ಷೆ ಸಾವಿತ್ರಿ, ಪಿಡಿಓ ರಾಘವೇಂದ್ರ, ಕಾರ್ಯದರ್ಶಿ ಗೀತಾ, ಎಸ್‌ಡಿಎಂಸಿ ಸದಸ್ಯರಾದ ಜಿ.ಮಹದೇವು, ಪ್ರಕಾಶ್, ವೆಂಕಟೇಶ್, ರವಿಕುಮಾರ್, ಸಮೂಹ ಸಂಪನ್ಮೂಲ ವ್ಯಕ್ತಿ ಶಿವಪ್ಪ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ಮಹದೇವ, ಸರ್ಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕಿ ಸ್ವಾತಿಕುಮಾರಿ ಸೇರಿದಂತೆ ಗ್ರಾಪಂ ಸಿಬ್ಬಂದಿ ಮತ್ತು ಶಾಲಾ ಬೋಧಕ, ಬೋಧಕೇತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಭಾನುವಾರ 27 ಅಕ್ಟೋಬರ್ 2024

ಮೈಸೂರಲ್ಲಿ ಅಸಂಘಟಿತ ಕಾರ್ಮಿಕರ ರಾಜ್ಯ ಸಮ್ಮೇಳನ

ಖಾಯಂ ಉದ್ಯೋಗ ಸೇರಿ ವಿವಿಧ ಬೇಡಿಕೆಗಳ ಹಕ್ಕೊತ್ತಾಯ





ಮೈಸೂರಿನ ಪುರಭವನದ ಆವರಣದಲ್ಲಿ ನಡೆದ 4ನೇ ರಾಜ್ಯ ಮಟ್ಟದ ಕಾರ್ಮಿಕ ಸಮ್ಮೇಳನದಲ್ಲಿ ಪಾಲ್ಗೊಂಡಿರುವ ಕಾರ್ಮಿಕ ವರ್ಗ. ಮತ್ತೊಂದು ಚಿತ್ರದಲ್ಲಿ ಬೃಹತ್ ಮೆರವಣಿಗೆಯಲ್ಲಿ ಸಾಗುತ್ತಿರುವ ಕಾರ್ಮಿಕರನ್ನು ಕಾಣಬಹುದು

ಮೈಸೂರು,ಅ.26(ಎಂಟಿವೈ)- ದುಡಿಯುವ ಕೈಗಳಿಗೆ ಖಾಯಂ ಉದ್ಯೋಗ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್(ಎಐಯುಟಿಯುಸಿ) ವತಿಯಿಂದ ಮೈಸೂರಲ್ಲಿ ಆಯೋಜಿಸಿರುವ 4ನೇ ರಾಜ್ಯಮಟ್ಟದ ಕಾರ್ಮಿಕ ಸಮ್ಮೇಳನದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಅಸಂಘಟಿತ ಕಾರ್ಮಿಕರು ಪಾಲ್ಗೊಂಡು ಹಕ್ಕೊತ್ತಾಯ ಮಾಡಿದರು.

ರಾಜ್ಯದ ಎಲ್ಲಾ ಜಿಲ್ಲೆಗಳಿಂದಲೂ ಅಸಂಘಟಿತ ಕಾರ್ಮಿಕರು ಆಗಮಿಸಿ ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪದ ಆವರಣದಿಂದ ಪ್ರತಿಭಟನಾ ಮೆರವಣಿಗೆ ನಡೆಸಿದರು. ವಿನೋಬಾ ರಸ್ತೆ ದಿವಾನ್ಸ್ ರಸ್ತೆ ಧನ್ವಂತರಿ ರಸ್ತೆ, ಸಯ್ಯಾಜಿರಾವ್ ರಸ್ತೆ, ಮಹಾತ್ಮಗಾಂಧಿ ವೃತ್ತ, ದೊಡ್ಡ ಗಡಿಯಾರ ವೃತ್ತದ ಮೂಲಕ ಪುರಭವನದ ಆವರಣ ತಲುಪಿದ ಕಾರ್ಮಿಕರು ಕೆಂಪು ಬಾವುಟ ಪ್ರದರ್ಶಿಸಿ ಒಗ್ಗಟ್ಟು ಪ್ರದರ್ಶಿಸಿದರು.

ಮೆರವಣಿಗೆಯುದ್ದಕ್ಕೂ ಗುತ್ತಿಗೆ ಎಂಬ ಜೀತ ಪದ್ಧತಿ ರದ್ದಾಗಲಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಾರ್ಮಿಕ ವಿರೋಧಿ ನೀತಿಗಳು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಾರ್ಮಿಕ ವಿರೋಧಿ ಲೇಬರ್ ಕೋಡ್‌ಗಳ ರದ್ದತಿಗೆ ಆಗ್ರಹಿಸಿ ಘೋಷಣೆ ಕೂಗಿದರು.

ಪುರಭವನ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ, ರಾಜ್ಯ ಸರ್ಕಾರಗಳ ವಿರುದ್ಧ ಕಿಡಿಕಾರಿದ ಕಾರ್ಮಿಕರ ನಾಯಕರು ಸರ್ಕಾರಗಳ ಕಾರ್ಮಿಕರ ವಿರೋಧಿ ಕಾನೂನು, ಆದೇಶಗಳು ಹಿಂಪಡೆಯಬೇಕು. ಜೊತೆಗೆ ತಮ್ಮ ಹಕ್ಕೊತ್ತಾಯಗಳನ್ನು ಈಡೇರಿಸುವಂತೆ ಆಗ್ರಹಿಸಿದರು.

ಹಕ್ಕೊತ್ತಾಯಗಳು: ಎಲ್ಲಾ ದುಡಿಯುವ ಕೈಗಳಿಗೆ ಖಾಯಂ ಉದ್ಯೋಗ ಒದಗಿಸಿ. ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕೆಂದು ಪರಿಗಣಿಸಬೇಕು. ಕಾರ್ಮಿಕ ವಿರೋಧಿ ನಾಲ್ಕು ಲೇಬರ್ ಕೋಡ್‌ಗಳನ್ನು ರದ್ದುಪಡಿಸಿ, ಪ್ರಸಕ್ತ ಕಾಯ್ದೆಗಳನ್ನು ಬಲಪಡಿಸಬೇಕು. ಕನಿಷ್ಠ ವೇತನವನ್ನು ತಿಂಗಳಿಗೆ 35000 ರೂ. ನಿಗದಿ ಮಾಡಬೇಕು. ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ನಿಯಂತ್ರಿಸಿ ಮತ್ತು ಆಹಾರ ಪದಾರ್ಥಗಳ ಮೇಲಿನ ಬೆಲೆ ಏರಿಕೆ ಕಡಿವಾಣ ಹಾಕಬೇಕು.

ಜಿಎಸ್‌ಟಿಯನ್ನು ಹಿಂಪಡೆಯಬೇಕು. ಎಲ್ಲಾ ಗುತ್ತಿಗೆ ಕಾರ್ಮಿಕರ ಸೇವೆಗಳನ್ನು ಖಾಯಂಗೊಳಿಸಿ, ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಖಾತ್ರಿಪಡಿಸಬೇಕು. ಉದ್ಯೋಗಗಳ ಗುತ್ತಿಗೇಕರಣವನ್ನು ನಿಲ್ಲಿಸಬೇಕು. ಎಲ್ಲ ಗುತ್ತಿಗೆ ಮತ್ತು ಹೊರಗುತ್ತಿಗೆ ಕಾರ್ಮಿಕರಿಗೆ ಕನಿಷ್ಠ ವೇತನ, ಇಎಸ್‌ಐ, ಪಿಎಫ್ ಜೊತೆಗೆ ಹೆರಿಗೆ ರಜೆ, ಗ್ರಾಚ್ಯುಟಿ ಮತ್ತು ಬೋನಸ್ ಮತ್ತಿತರ ಶಾಸನಬದ್ಧ ಸೌಲಭ್ಯಗಳನ್ನು ಖಾತ್ರಿಪಡಿಸಬೇಕು.

ಸ್ಕೀಮ್ (ಅಂಗನವಾಡಿ, ಆಶಾ ಮತ್ತು ಬಿಸಿಯೂಟ) ಕಾರ್ಯಕರ್ತರನ್ನು ಸರ್ಕಾರಿ ನೌಕರರನ್ನಾಗಿ ಖಾಯಂಗೊಳಿಸಲು ಐಎಲ್‌ಸಿಯ 45ನೇ ಮತ್ತು 46ನೇ ಶಿಫಾರಸುಗಳನ್ನು ಜಾರಿಗೊಳಿಸಬೇಕು. ಎಲ್ಲಾ ಸ್ಕಿಮ್ ಕಾರ್ಯಕರ್ತರಿಗೆ ಮಾಸಿಕ ಕನಿಷ್ಠ ವೇತನ 35 ಸಾವಿರ ರೂ. ಹಾಗೂ ಪಿಂಚಣಿ ರೂ.10 ಸಾವಿರ ರೂ., ಇಎಸ್‌ಐ ಮತ್ತು ಪಿಎಫ್ ನೀಡಬೇಕು. ಹೊಸ ಪಿಂಚಣಿ ವ್ಯವಸ್ಥೆ (ಎನ್‌ಪಿಎಸ್) ಹಿಂಪಡೆದು, ಹಳೆಯ ಪಿಂಚಣಿ ಯೋಜನೆಯನ್ನು (ಓಪಿಎಸ್) ಪುನಃ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ರೈಲ್ವೆ, ರಕ್ಷಣಾ ಕೈಗಾರಿಕೆಗಳು, ಬ್ಯಾಂಕ್, ವಿಮೆ, ಬಂದರುಗಳು, ಏರ್-ವೇ, ಬಿಎಸ್‌ಎನ್‌ಎಲ್, ಸಾರಿಗೆ, ಅಂಚೆ-ಸಂಪರ್ಕ, ವಿದ್ಯುತ್, ಪೆಟ್ರೋಲಿಯಂ, ಉಕ್ಕು, ಕಲ್ಲಿದ್ದಲು ಇತ್ಯಾದಿ ಸಾರ್ವಜನಿಕ ವಲಯ-ಸರ್ಕಾರದ ಘಟಕಗಳಲ್ಲಿ ಬಂಡವಾಳ ಹಿಂತೆಗೆದುಕೊಳ್ಳಬೇಕು. ಖಾಸಗೀಕರಣ ಮತ್ತು ಕಾರ್ಪೊರೇಟೀಕರಣವನ್ನು ನಿಲ್ಲಿಸಬೇಕು. ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿಗೆ ಅನುದಾನ ಹೆಚ್ಚಿಸಿ, ವಲಸೆ ಕಾರ್ಮಿಕರಿಗೆ ಪ್ರತ್ಯೇಕ ಕಲ್ಯಾಣ ಮಂಡಳಿ ಸ್ಥಾಪಿಸಿ, ಗಿಗ್-ಪ್ಲಾಟ್‌ಫಾರ್ಮ್ ಕಾರ್ಮಿಕರ ಮಸೂದೆಯನ್ನು ಕಾಯ್ದೆಯಾಗಿ ರೂಪಿಸಬೇಕು.

ಕೈಗಾರಿಕೆಗಳ ಮುಚ್ಚುವಿಕೆ, ಹಿಂಬಡ್ತಿ, ಲೇ-ಆಫ್, ಲಾಕ್-ಔಟ್ ನಿಲ್ಲಿಸಿ. ಕೆಲಸದ ಸ್ಥಳಗಳಲ್ಲಿ ಉದ್ಯೋಗ ಭದ್ರತೆ ಮತ್ತು ಸುರಕ್ಷತಾ ಕ್ರಮಗಳನ್ನು ಖಾತ್ರಿಪಡಿಸಿ. ಕೆಲಸದ ಸಮಯವನ್ನು 8 ಗಂಟೆಗಳಿಂದ 12 ಗಂಟೆಗಳವರೆಗೆ ವಿಸ್ತರಿಸುವುದನ್ನು ನಿಲ್ಲಿಸಬೇಕು. ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ನಿಧಿಯ ದುರುಪಯೋಗ ತಡೆಗಟ್ಟಿ, ಸ್ಕಾಲರ್‌ಶಿಪ್ ಮತ್ತು ಇತರ ಸೌಲಭ್ಯಗಳ ಕಡಿತ ನಿಲ್ಲಿಸಿ, ಕಾರ್ಡುಗಳ ನವೀಕರಣ ಸರಳೀಕರಣಗೊಳಿಸಬೇಕು. ಪ್ರತಿ ಜಿಲ್ಲೆಗೊಂದು ಅತ್ಯಾಧುನಿಕ ಇಎಸ್‌ಐ ಆಸ್ಪತ್ರೆ ಸ್ಥಾಪಿಸಬೇಕು. ಪ್ರಸಕ್ತ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಿ ಮತ್ತು ತಾಲೂಕಿಗೊಂದು ಡಿಸ್ಪೆನ್ಸರಿ ಪ್ರಾರಂಭಿಸಬೇಕು. ಐಟಿ ವಲಯದ ನೌಕರರನ್ನು ಕಾರ್ಮಿಕ ಕಾಯ್ದೆಗಳಿಂದ ಹೊರಗಿಡದೇ ಸೇವಾ ಭದ್ರತೆ ಸೇರಿದಂತೆ ದುಡಿತದ ಅವಧಿಯನ್ನು ದಿನಕ್ಕೆ 8 ಗಂಟೆ ಮತ್ತು ವಾರಕ್ಕೆ 48 ಗಂಟೆ ಮೀರದಂತೆ ಕ್ರಮ ವಹಿಸಬೇಕು ಎಂದು ಸಮಾವೇಶದಲ್ಲಿ ಹಕ್ಕೊತ್ತಾಯ ಮಾಡಲಾಯಿತು.

ಡಾನಾ ಚಂಡಮಾರುತ; ಪಶ್ಚಿಮ ಬಂಗಾಳದಲ್ಲಿ ಮೃತರ ಸಂಖ್ಯೆ 4ಕ್ಕೆ ಏರಿಕೆ

ಕೋಲ್ಕತ್ತಾ: ಪಶ್ಚಿಮಬಂಗಾಳದಲ್ಲಿ ಡಾನಾ ಚಂಡಮಾರುತದಿಂದ ಮತ್ತಿಬ್ಬರು ಮೃತಪಟ್ಟಿದ್ದು, ಸಾವಿನ ಸಂಖ್ಯೆ ನಾಲ್ಕಕ್ಕೆ ಏರಿಕೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಂದನ್ ದಾಸ್ (31) ಎಂಬ ನಾಗರಿಕ ಸ್ವಯಂಸೇವಕ, ಪುರ್ಬಾ ಬರ್ಧಮಾನ್ ಜಿಲ್ಲೆಯ ಬಡ್‌ಬಡ್‌ನಲ್ಲಿ ವಿದ್ಯುತ್ ತಂತಿ ಸ್ಪರ್ಶಿಸಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅವರು ಪೊಲೀಸ್ ತಂಡದೊಂದಿಗೆ ಹೊರಹೋಗಿದ್ದ ವೇಳೆ ದುರ್ಘಟನೆ ನಡೆದಿದೆ.

ತಂತಿಪಾರಾದಲ್ಲಿ ಜಲಾವೃತ ರಸ್ತೆಯಲ್ಲಿ ಹೌರಾ ಮುನ್ಸಿಪಲ್ ಕಾರ್ಪೊರೇಶನ್‌ನ ಉದ್ಯೋಗಿಯೊಬ್ಬರ ಶವ ಪತ್ತೆಯಾಗಿದೆ. ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಶಂಕೆ ವ್ಯಕ್ತವಾಗಿದೆ.

ನಿನ್ನೆ ರಾಜ್ಯದಲ್ಲಿ ವಿದ್ಯುತ್ ತಂತಿ ಸ್ಪರ್ಶಿಸಿ ಇಬ್ಬರು ಮೃತಪಟ್ಟಿದ್ದರು. ದಕ್ಷಿಣ 24 ಪರಗಣ ಜಿಲ್ಲೆಯ ಪಥರ್ ಪ್ರತಿಮಾದಲ್ಲಿ ಒಬ್ಬರು ಮೃತಪಟ್ಟರೆ, ಮತ್ತೊಬ್ಬರು ದಕ್ಷಿಣ ಕೋಲ್ಕತ್ತಾದ ಭಬಾನಿಪುರ ಪ್ರದೇಶದಲ್ಲಿ ಮೃತಪಟ್ಟಿದ್ದಾರೆ. ಡಾನಾ ಚಂಡಮಾರುತ ನಿನ್ನೆ ಮುಂಜಾನೆ ಪೂರ್ವ ಕರಾವಳಿಗೆ ಅಪ್ಪಳಿಸಿತು, ಧಾರಾಕಾರ ಮಳೆ ಮತ್ತು ಹೆಚ್ಚಿನ ವೇಗದಲ್ಲಿ ಗಾಳಿ ಬೀಸಿ ಮರಗಳು ಮತ್ತು ವಿದ್ಯುತ್ ಕಂಬಗಳನ್ನು ಕಿತ್ತುಹಾಕಿತು. ಒಡಿಶಾ ಮತ್ತು ಪಶ್ಚಿಮಬಂಗಾಳದಲ್ಲಿ ನಾಗರಿಕರ ಮೂಲಸೌಕರ್ಯಗಳು ಮತ್ತು ಬೆಳೆಗಳಿಗೆ ಹಾನಿಯುಂಟಾಗಿವೆ.

ಸಿದ್ದರಾಮಯ್ಯಗೆ ನೈತಿಕ ಬೆಂಬಲ ಸೂಚಿಸಲು ಸಮಾವೇಶ



ಮೈಸೂರು, ಅ.26(ಬಿಎಲ್‌ಯು)- ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಿರೋಧ ಪಕ್ಷಗಳು ಕುತಂತ್ರ ರಾಜಕಾರಣ ಮಾಡುತ್ತಿರುವ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರಿಗೆ ನೈತಿಕ ಬೆಂಬಲ ಸೂಚಿಸಲು ಆಯೋಜಿಸಿರುವ ಸಮಾವೇಶದ ಹಿನ್ನೆಲೆಯಲ್ಲಿ ಅ.27 ರಂದು ಪೂರ್ವಭಾವಿ ಸಭೆ ಕರೆಯಲಾಗಿದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಸುಬ್ರಹ್ಮಣ್ಯ ತಿಳಿಸಿದ್ದಾರೆ.

ದೇವರಾಜ ಅರಸ್ ನಂತರ ಸಿದ್ದರಾಮಯ್ಯ ಪೂರ್ಣಾವಧಿ ಮುಖ್ಯಮಂತ್ರಿಯಾಗಿ ಅಧಿಕಾರ ಪೂರ್ಣಗೊಳಿಸಿದ್ದಾರೆ. ಜೊತೆಗೆ ಎರಡನೇ ಬಾರಿಗೆ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾರೆ. ಆದರೆ ಇತ್ತೀಚಿಗೆ ಕೆಲವು ರಾಜಕೀಯ ದುಷ್ಟ ಶಕ್ತಿಗಳು ಸಿದ್ದರಾಮಯ್ಯ ವಿರುದ್ಧ ಎತ್ತಿಕಟ್ಟುವ ಕುತಂತ್ರ ಮಾಡುತ್ತಿವೆ ಎಂದು ಆರೋಪಿಸಿದ್ದಾರೆ.

ಇದನ್ನು ಮೆಟ್ಟಿನಿಂತು ಸಿದ್ದರಾಮಯ್ಯ ಹೋರಾಟ ಮಾಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಸಿದ್ದರಾಮಯ್ಯ ಅವರಿಗೆ ನೈತಿಕ ಬೆಂಬಲ ಸೂಚಿಸಲು ಮೈಸೂರು ಸೇರಿದಂತೆ ಐದು ಜಿಲ್ಲೆಗಳ ಪ್ರಗತಿಪರ ನಾಯಕರು, ರಾಜಕೀಯ ನಾಯಕರು ಹಾಗೂ ಸಿದ್ದರಾಮಯ್ಯ ಅಭಿಮಾನಿಗಳ ಬೃಹತ್ ಸಮಾವೇಶ ಆಯೋಜಿಸಲಾಗುತ್ತಿದೆ. ಈ ಸಮಾವೇಶ ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಅಕ್ಟೋಬರ್ 27 ರಂದು ಮೈಸೂರಿನ ದೇವರಾಜ ಮೊಹಲ್ಲಾದ ಯಾದವ (ಗೊಲ್ಲ) ಸಮುದಾಯ ಭವನದಲ್ಲಿ ಪೂರ್ವಭಾವಿ ಸಭೆ ಆಯೋಜಿಸಲಾಗಿದೆ ಎಂದು ಸುಬ್ರಹ್ಮಣ್ಯ ತಿಳಿಸಿದ್ದಾರೆ.

ಧಾರವಾಡ: ಕಲುಷಿತ ನೀರು ಕುಡಿದು 70 ಮಂದಿ ಅಸ್ವಸ್ಥ

ಕಲಘಟಗಿ: ಕಲುಷಿತ ನೀರು ಕುಡಿದು 70ಕ್ಕೂ ಹೆಚ್ಚು ಮಂದಿ ಅಸ್ವಸ್ಥರಾದ ಘಟನೆ ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಮುಟಗಿ ಗ್ರಾಮದಲ್ಲಿ ಗುರುವಾರ ನಡೆದಿದೆ. ಗ್ರಾಮದಲ್ಲಿ ಕಲುಷಿತ ನೀರು ಕುಡಿದ ಬಳಿಕ ಹಲವರಲ್ಲಿ ವಾಂತಿ ಹಾಗೂ ಅತಿಸಾರ ಕಾಣಿಸಿಕೊಂಡಿದೆ. ಅಸ್ವಸ್ಥಗೊಂಡ 70 ಮಂದಿಯ ಪೈಕಿ 10 ಮಂದಿ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಹಾಗೂ 36 ಮಂದಿ ಕಲಘಟಗಿ ತಾಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಉಳಿದವರು ಔಷಧಿ ಪಡೆದುಕೊಂಡ ಪರಿಣಾಮ ಚೇತರಿಸಿಕೊಂಡಿದ್ದಾರೆಂದು ತಿಳಿದುಬಂದಿದೆ.

ಜಿಲ್ಲಾ ರಾಜ್ಯೋತ್ಸವ ಸನ್ಮಾನದ ಅರ್ಜಿ ಜೊತೆ ಪೊಲೀಸ್ ಎನ್‌ಓಸಿ ಕಡ್ಡಾಯ

ಮೈಸೂರು, ಅ.26(ಜಿಎ)-ಮೈಸೂರು ಜಿಲ್ಲಾಡಳಿತದಿಂದ ಕನ್ನಡ ರಾಜ್ಯೋತ್ಸವ ಸನ್ಮಾನಕ್ಕೆ ಅರ್ಜಿ ಸಲ್ಲಿಸುವವರು ಕಡ್ಡಾಯವಾಗಿ ಪೊಲೀಸ್ ಠಾಣೆಯಿಂದ ನಿರಾಕ್ಷೇಪಣಾ ಪ್ರಮಾಣಪತ್ರ(ಎನ್‌ಓಸಿ) ಪಡೆದು ಅರ್ಜಿಯೊಂದಿಗೆ ಸಲ್ಲಿಸಬೇಕು.

> ಈ ಬಾರಿ ಜಿಲ್ಲಾಡಳಿತದ ವತಿಯಿಂದ 50 ಮಂದಿಗೆ ರಾಜ್ಯೋತ್ಸವ ಸನ್ಮಾನ ಮಾಡಲು ನಿರ್ಧರಿಸಲಾಗಿದೆ. ಅರ್ಜಿ ಸಲ್ಲಿಸಿದವರಿಗೆ ಪೊಲೀಸ್ ಇಲಾಖೆಯಿಂದ ಎನ್‌ಓಸಿ ಪಡೆದುಕೊಳ್ಳುವಂತೆ ತಿಳಿಸಿ, ಎನ್‌ಓಸಿ ಪಡೆದುಕೊಳ್ಳಲಾಗುತ್ತಿದೆ. ಈ ಬಾರಿ ಯಾವುದೇ ದೂರುಗಳು ಬಾರದಂತೆ ಅರ್ಜಿಗಳನ್ನು ಕಟ್ಟುನಿಟ್ಟಿನಿಂದ ಪರಿಶೀಲನೆ ಮಾಡಲಾಗುತ್ತಿದೆ.
> -ಡಾ.ಎಂ.ಡಿ.ಸುದರ್ಶನ್, ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕಲೆ, ಸಾಹಿತ್ಯ, ಸಂಗೀತ, ನಾಟಕ, ನೃತ್ಯ, ಮಾಧ್ಯಮ, ಸಮಾಜಸೇವೆ, ವೈದ್ಯ ಸೇವೆ ಸೇರಿದಂತೆ ವಿವಿಧ ಕ್ಷೇತ್ರದವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಅರ್ಜಿ ಸಲ್ಲಿಸಿದ ನಂತರ ಅವರ ಅರ್ಜಿ ಪರಿಶೀಲಿಸಿ ನಂತರ ಪ್ರಶಸ್ತಿ ಪ್ರದಾನ ಮಾಡುವುದು ವಾಡಿಕೆ.

ಕಳೆದ ವರ್ಷ ಜಿಲ್ಲಾಡಳಿತದ ವತಿಯಿಂದ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ 50ಕ್ಕೂ ಹೆಚ್ಚು ಮಂದಿಗೆ ಕೋಟೆ ಆಂಜನೇಯ ದೇವಸ್ಥಾನದ ಮುಂಭಾಗ ನಡೆದ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ರೌಡಿಶೀಟರ್‌ಗೆ ಸನ್ಮಾನ ಪತ್ರವನ್ನು ಪ್ರದಾನ ಮಾಡಿದ್ದು ಎಲ್ಲರಲ್ಲೂ ಅಸಮಾಧಾನ ಹಾಗೂ ಕೆಂಗಣ್ಣಿಗೆ ಗುರಿಯಾಯಿತು.

ನಂತರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆ ರೌಡಿಶೀಟರ್‌ನಿಂದ ಪ್ರಶಸ್ತಿಯನ್ನು ಹಿಂಪಡೆದ ಹಿನ್ನೆಲೆಯಲ್ಲಿ ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡಿರುವ ಅಧಿಕಾರಿಗಳು ಈ ಬಾರಿ ಅರ್ಜಿ ಸಲ್ಲಿಸುವವರಿಗೆ ಕಡ್ಡಾಯವಾಗಿ ಪೊಲೀಸ್ ಠಾಣೆಯಿಂದ ನಿರಾಕ್ಷೇಪಣಾ ಪ್ರಮಾಣಪತ್ರ (ಎನ್‌ಓಸಿ) ಪಡೆದು ಅರ್ಜಿಯೊಂದಿಗೆ ಲಗತ್ತಿಸಬೇಕು ಎಂದು ಅರ್ಜಿದಾರರಿಗೆ ತಿಳಿಸಿದ್ದಾರೆ.

ಈಗಾಗಲೇ ಮೈಸೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ 119 ಅರ್ಜಿಗಳನ್ನು ಬಂದಿದ್ದು, ಅರ್ಜಿ ಆಹ್ವಾನಕ್ಕೆ ಅ.25ರವರೆಗೆ ಅವಕಾಶ ನೀಡಲಾಗಿತ್ತು. ಆದರೆ, ಈಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಅ.28ರವರೆಗೆ ಅವಧಿ ವಿಸ್ತರಿಸಿದ್ದಾರೆ. ಅರ್ಜಿಗಳು ಬಂದ ನಂತರ ಅಧಿಕಾರಿಗಳು ಕ್ಷೇತ್ರವಾರು ವಿಂಗಡಣೆ ಮಾಡಿ ಪರಿಶೀಲನೆ ಮಾಡಲಿದ್ದಾರೆ.

ಮೈಸೂರಿನ ಓವೆಲ್ ಮೈದಾನದಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ನಡೆಯಲಿದ್ದು, ಇಲ್ಲಿಯೇ ಗಣ್ಯರಿಗೆ ಸನ್ಮಾನ ಮಾಡಲಾಗುವುದು. ರಾಜ್ಯ ಸರ್ಕಾರದ ಆದೇಶದಂತೆ ಈ ಬಾರಿ ಎಲ್ಲಾ ಜಿಲ್ಲಾ ಕೇಂದ್ರದಲ್ಲಿ ಶಿಲ್ಪ ಕಲಾ ಅಕಾಡೆಮಿಯಿಂದ ನಿರ್ಮಿಸಿರುವ ಮೂಲ ಹಲ್ಮಿಡಿ ಶಾಸನದ ಮೂಲ ಪ್ರತಿಕೃತಿಯನ್ನು ಅಳವಡಿಸುವಂತೆ ಆದೇಶಿಸಲಾಗಿದೆ.

ಈ ಆದೇಶದಂತೆ ಶಿಲ್ಪ ಕಲಾ ಅಕಾಡೆಮಿಯಿಂದ ನಿರ್ಮಿಸಿರುವ ಹಲ್ಮಿಡಿ ಶಾಸನದ ಮೂಲ ಪ್ರತಿಕೃತಿಯೂ 4.5 ಅಡಿ ಎತ್ತರ, 2 ಅಡಿ ಅಗಲ ಹಾಗೂ 6 ಇಂಚು ದಪ್ಪ ಇದ್ದು, ಇದನ್ನು ಮೈಸೂರಿನ ಕಲಾಮಂದಿರದ ಆವರಣದಲ್ಲಿ ಸ್ಥಾಪಿಸಲಿದ್ದಾರೆ.

ನ್ಯೂಜಿಲ್ಯಾಂಡ್ ವಿರುದ್ಧ ಟೀಂ ಇಂಡಿಯಾಗೆ ಹೀನಾಯ ಸೋಲು

ಟೆಸ್ಟ್ ಸರಣಿ ಕಿವೀಸ್ ಕೈವಶ

ಪುಣೆ: ಪ್ರವಾಸಿ ನ್ಯೂಜಿಲ್ಯಾಂಡ್ ವಿರುದ್ಧದ ಮೂರು ಪಂದ್ಯಗಳ ಟೆಸ್ಟ್ ಸರಣಿಯ ಎರಡನೇ ಟೆಸ್ಟ್ ಪಂದ್ಯದಲ್ಲಿ ಟೀಂ ಇಂಡಿಯಾ 113 ರನ್‌ಗಳಿಂದ ಸೋಲು ಕಂಡಿದೆ. ಈ ಮೂಲಕ ಭಾರತ ಟೆಸ್ಟ್ ಸರಣಿಯನ್ನು ಕೈಚೆಲ್ಲಿದೆ.

ಪುಣೆಯಲ್ಲಿ ನಡೆದ ಟೆಸ್ಟ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ನ್ಯೂಜಿಲ್ಯಾಂಡ್ 259 ರನ್‌ಗಳಿಗೆ ಆಲೌಟ್ ಆಗಿತ್ತು. ನಂತರ ಇನ್ನಿಂಗ್ಸ್ ಆರಂಭಿಸಿದ್ದ ಭಾರತ 156 ರನ್‌ಗಳಿಗೆ ಆಲೌಟ್ ಆಗುವ ಮೂಲಕ 103 ರನ್‌ಗಳ ಹಿನ್ನಡೆ ಅನುಭವಿಸಿತ್ತು. ನಂತರ ಎರಡನೇ ಇನ್ನಿಂಗ್ಸ್ ಆರಂಭಿಸಿದ್ದ ನ್ಯೂಜಿಲ್ಯಾಂಡ್ 255 ರನ್‌ಗಳಿಗೆ ಆಲೌಟ್ ಆಯಿತು. ಇದರೊಂದಿಗೆ ಭಾರತಕ್ಕೆ ಗೆಲ್ಲಲು 359 ರನ್‌ಗಳ ಗುರಿ ನೀಡಿತ್ತು. ಈ ರನ್ ಗುರಿ ಬೆನ್ನಟ್ಟಿದ ಭಾರತ 245 ರನ್‌ಗಳಿಗೆ ಆಲೌಟ್ ಆಗುವ ಮೂಲಕ 113 ರನ್‌ಗಳಿಂದ ಪಂದ್ಯ ಸೋತಿದೆ.

ಭಾರತ ತಂಡ ಎರಡನೇ ಇನ್ನಿಂಗ್ಸ್‌ನಲ್ಲೂ ಲಯ ಕಂಡುಕೊಳ್ಳುವಲ್ಲಿ ವಿಫಲವಾಗಿದೆ. ರೋಹಿತ್ ಶರ್ಮಾ 8 ಮತ್ತು ವಿರಾಟ್ ಕೊಹ್ಲಿ 17 ರನ್ ಹಾಗೂ ರಿಷಬ್ ಪಂತ್ ಶೂನ್ಯ ಸುತ್ತಿದ್ದು ತಂಡಕ್ಕೆ ಹಿನ್ನಡೆಯಾಯಿತು. ಇನ್ನು ಯಶಸ್ವಿ ಜೈಸ್ವಾಲ್ 77 ರನ್ ಸಿಡಿಸುವ ಮೂಲಕ ಭಾರತಕ್ಕೆ ಚೇತರಿಕೆ ತಂದುಕೊಟ್ಟರು. ಆದರೆ ನಂತರ ಬಂದ ಬ್ಯಾಟರ್‌ಗಳು ಹೆಚ್ಚು ಕಾಲ ಕ್ರೀಸ್‌ನಲ್ಲಿ ನಿಂತು ಆಡುವಲ್ಲಿ ವಿಫಲರಾದರು.

ಶುಭ್ಮನ್ ಗಿಲ್ 23, ವಾಷಿಂಗ್ಟನ್ ಸುಂದರ್ 21, ಅಶ್ವಿನ್ 18 ರನ್ ಸಿಡಿಸಿ ಔಟಾದರೆ ರವಿಂದ್ರ ಜಡೇಜಾ 42 ರನ್ ಸಿಡಿಸಿ ಔಟಾದರು. ನ್ಯೂಜಿಲ್ಯಾಂಡ್ ಪರ ಮಿಚೆಲ್ ಸ್ಯಾಂಟ್ನರ್ 6 ವಿಕೆಟ್ ಪಡೆಯುವ ಮೂಲಕ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು.

ಕರ್ನಾಟಕದಲ್ಲಿ ಪಿಂಚಣಿ ಸೌಲಭ್ಯ ಪಡೆಯುವವರ ಸಂಖ್ಯೆ ತೀರಾ ಕಡಿಮೆ

ಸಿಪಿಐ(ಎಂ) ಸಮ್ಮೇಳನದಲ್ಲಿ ರಾಜ್ಯಸಭಾ ಸದಸ್ಯ ಶಿವದಾಸನ್ ವಿಷಾದ



ಮೈಸೂರಿನ ಸುಬ್ಬರಾಯನಕೆರೆಯ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಶನಿವಾರ ಆರಂಭವಾದ ಸಿಪಿಐ(ಎಂ) ನ ಎರಡು ದಿನಗಳ 24 ನೇ ಮೈಸೂರು ಜಿಲ್ಲಾ ಸಮ್ಮೇಳನವನ್ನು ಕೇರಳದ ರಾಜ್ಯಸಭಾ ಸದಸ್ಯ ಶಿವದಾಸನ್ ಉದ್ಘಾಟಿಸಿ, ಮಾತನಾಡಿದರು.

ಮೈಸೂರು, ಅ.26(ಬಿಎಲ್‌ಯು)- ಕೇರಳದಲ್ಲಿ 62 ಲಕ್ಷ ಜನರು ಪಿಂಚಣಿ ಸೌಲಭ್ಯ ಪಡೆಯುತ್ತಿದ್ದರೆ, ಕರ್ನಾಟಕದಲ್ಲಿ ಪಿಂಚಣಿ ಸೌಲಭ್ಯ ಪಡೆಯುವವರ ಸಂಖ್ಯೆ ತೀರಾ ಕಡಿಮೆ ಇದೆ ಎಂದು ಕೇರಳದ ರಾಜ್ಯಸಭಾ ಸದಸ್ಯ ವಿ. ಶಿವದಾಸನ್ ತಿಳಿಸಿದರು.

ಮೈಸೂರಿನ ಸುಬ್ಬರಾಯನಕೆರೆಯ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಇಂದು ಆರಂಭವಾದ ಸಿಪಿಐ(ಎಂ)ನ ಎರಡು ದಿನಗಳ 24 ನೇ ಮೈಸೂರು ಜಿಲ್ಲಾ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ವಯಸ್ಸಾದವರಿಗೆ ಪಿಂಚಣಿ ಸೌಲಭ್ಯ ಬದುಕಿಗೆ ಭದ್ರತೆ ಕಲ್ಪಿಸುತ್ತದೆ. ಆದರೆ ಕರ್ನಾಟಕದ ಲಕ್ಷಾಂತರ ಜನರು ಇದರಿಂದ ವಂಚಿತರಾಗಿದ್ದಾರೆ ಎಂದರು.

ಜಿಎಸ್‌ಟಿ ಹೆಸರಿನಲ್ಲಿ ಕೇಂದ್ರ ಸರ್ಕಾರ ಲೂಟಿ ಮಾಡುತ್ತಿದೆ. ಶ್ರೀಮಂತರು ಹೆಚ್ಚು ಜಿಎಸ್‌ಟಿ ಪಾವತಿ ಮಾಡುತ್ತಿದ್ದಾರೆ ಎಂಬ ಸಾಮಾನ್ಯ ತಿಳುವಳಿಕೆ ಇದೆ. ಆದರೆ ವಾಸ್ತವವಾಗಿ ಶೇಕಡ 10 ರಷ್ಟಿರುವ ಶ್ರೀಮಂತರು ಶೇಕಡ 3.5 ರಷ್ಟು ಮಾತ್ರ ಜಿಎಸ್‌ಟಿ ಪಾವತಿ ಮಾಡುತ್ತಿದ್ದಾರೆ.

ಆದರೆ ಶೇಕಡ 50 ರಷ್ಟಿರುವ ಬಡವರು ಪ್ರಾಮಾಣಿಕವಾಗಿ ಶೇಕಡ 65ರಷ್ಟು ಜಿಎಸ್‌ಟಿ ಪಾವತಿ ಮಾಡುತ್ತಿದ್ದಾರೆ. ಅಂಕಿ ಅಂಶಗಳು ಹೀಗಿದ್ದರೂ ಕೇಂದ್ರ ಸರ್ಕಾರ ಶ್ರೀಮಂತರಿಂದ ಪರಿಣಾಮಕಾರಿಯಾಗಿ ಜಿಎಸ್‌ಟಿ ಪಾವತಿ ಮಾಡಲು ನಿರಾಸಕ್ತಿ ತೋರುತ್ತಿದೆ ಎಂದು ಶಿವದಾಸನ್ ಆರೋಪಿಸಿದರು.

ಸೂಕ್ತ ಆರೋಗ್ಯ ಸೇವೆ ದೊರೆಯದ ಕಾರಣ ಇಂದು ಬಡವರು ಹಾಗೂ ರೈತರ ಜೀವಿತಾವಧಿ ಬಹಳ ಕಡಿಮೆ ಇದೆ. ಅದೇ ಶ್ರೀಮಂತರಿಗೆ ಆಧುನಿಕ ರೀತಿಯ ಚಿಕಿತ್ಸೆ ಸೌಲಭ್ಯ ದೊರೆಯುತ್ತಿರುವ ಕಾರಣ ಅವರ ಜೀವಿತಾವಧಿ ಹೆಚ್ಚಿದೆ. ಈ ನಿಟ್ಟಿನಲ್ಲಿ ಸಾಮಾನ್ಯ ಜನರ ಜೀವಿತಾವಧಿ ಹೆಚ್ಚು ಮಾಡಲು ಸರ್ಕಾರ ಹೆಚ್ಚಿನ ಆರೋಗ್ಯ ಸೌಲಭ್ಯ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ದೇಶದ ಕೆಲವು ರಾಜ್ಯಗಳಲ್ಲಿ ಜನರ ಜೀವಿತಾವಧಿ 60 ವರ್ಷವಿದ್ದರೆ, ಕೇರಳದಲ್ಲಿ 80 ವರ್ಷವಿದೆ. ಸರ್ಕಾರದ ಅವೈಜ್ಞಾನಿಕ ಯೋಜನೆಗಳಿಂದ ಇಂದು ಶ್ರೀಮಂತರು ಶ್ರೀಮಂತರಾಗಿಯೇ ಇದ್ದರೆ, ಬಡವರು ಬಡವರಾಗಿಯೇ ಜೀವನ ಸಾಗಿಸುತ್ತಿದ್ದಾರೆ. ಬಡಜನರ ಹಿತಾಸಕ್ತಿ ಕಾಪಾಡುವ ನಿಟ್ಟಿನಲ್ಲಿ ಸರ್ಕಾರ ನಿರ್ಲಕ್ಷ್ಯ ತೋರಿರುವುದೇ ಇದಕ್ಕೆ ಕಾರಣವಾಗಿದೆ. ಎಂದು ಶಿವದಾಸನ್ ಆಪಾದಿಸಿದರು.

ಮೂರು ವರ್ಷಕ್ಕೊಮ್ಮೆ ಸಿಪಿಐ(ಎಂ) ಸಮ್ಮೇಳನ ನಡೆಯಲಿದೆ. ಅದರಂತೆ ಇಂದು ನಡೆದ ಸಮ್ಮೇಳನದಲ್ಲಿ ಮೂರು ವರ್ಷದ ಅವಧಿಯಲ್ಲಿ ಯಾವ ರೀತಿಯ ಹೋರಾಟ ಮಾಡಲಾಗಿದೆ ಎಂಬ ಬಗ್ಗೆ ಚರ್ಚೆ ನಡೆಸಲಾಯಿತು. ಜೊತೆಗೆ ಮುಂದಿನ ಮೂರು ವರ್ಷದ ಅವಧಿಯಲ್ಲಿ ಹೋರಾಟದ ರೂಪುರೇಷೆಗಳನ್ನು ನಿರ್ಧರಿಸಲಾಯಿತು.

ಅಲ್ಲದೆ ಮೂರು ವರ್ಷದ ಅವಧಿಗೆ ಜಿಲ್ಲಾ ಸಮಿತಿಗಳಿಗೆ ಪದಾಧಿಕಾರಿಗಳ ಆಯ್ಕೆ ಮಾಡುವ ಪ್ರಕ್ರಿಯೆ ಆರಂಭಿಸಲಾಯಿತು.

ಇಂದಿನ ಸಮ್ಮೇಳನದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಬಸವರಾಜು, ರಾಜ್ಯ ಸಮಿತಿ ಸದಸ್ಯೆ ಸುನಂದಾ, ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ನಸಾಬ್ (ಕ)	1 ಪ್ರದರ್ಶನಗಳು
ಅನ್ನ (ಕ)	3 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಎಲ್ಲಿಗೆ ಪಯಣ ಯಾವುದೋ ದಾರಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ದಿ ಹಂಟರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಯಲಾ ಕುನ್ನಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾರ್ಟಿನ್ (ಕ)	4 ಪ್ರದರ್ಶನಗಳು
ರಾಜಕಮಲ್	
ದೇವರ (ತೆ)	4 ಪ್ರದರ್ಶನಗಳು
ಸಂಗಂ	
ಮಾರ್ಟಿನ್ (ಕ)	4 ಪ್ರದರ್ಶನಗಳು
ಲಿಡೋ	
ಪ್ರಾಪ್ತಿ (ಕ)	2 ಪ್ರದರ್ಶನಗಳು
ಕೃಷ್ಣಂ ಪ್ರಣಯ ಸಖಿ (ಕ)	2 ಪ್ರದರ್ಶನಗಳು
ತಿಬ್ಬಾದೇವಿ	
ವೇಟೇಯನ್ (ತ)	4 ಪ್ರದರ್ಶನಗಳು
ಪ್ರಭಾ	
ಭೀಮಾ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಬೆ.11.05ಕ್ಕೆ, ಮ.1.30ಕ್ಕೆ, ರಾ.7.15ಕ್ಕೆ, ರಾ.9.45ಕ್ಕೆ, ವೆಟ್ಟೈಯನ್ (ತ): ಸಂ.4ಕ್ಕೆ.
ಸ್ಕ್ರೀನ್ 2	ದಿ ವೈಲ್ಡ್ ರೋಬೋಟ್ (3ಡಿ)(ಇಂ): ಬೆ.11ಕ್ಕೆ, ಮಾರ್ಟಿನ್ (ಕ): ಮ.1.10ಕ್ಕೆ, ವೆಟ್ಟೈಯನ್ (ತ): ಸಂ.4.05ಕ್ಕೆ, ಯಲಾ ಕುನ್ನಿ (ಕ): ರಾ.7.10ಕ್ಕೆ, ನರುಡಿ ಬ್ರದುಕು ನಟನ (ತೆ): ರಾ.9.50ಕ್ಕೆ.
ಸ್ಕ್ರೀನ್ 3	ಎಲ್ಲಿಗೆ ಪಯಣ ಯಾವುದೋ ದಾರಿ (ಕ): ಬೆ.10.35ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.15ಕ್ಕೆ, ಅನ್ನ (ಕ): ಸಂ.4.30ಕ್ಕೆ, ಮರ್ಫಿ (ಕ): ರಾ.7ಕ್ಕೆ, ಪಣಿ (ಮ): ರಾ.9.50ಕ್ಕೆ.
ಸ್ಕ್ರೀನ್ 4	ನಸಾಬ್ (ಕ): ಬೆ.10.20ಕ್ಕೆ, ವೆಟ್ಟೈಯನ್ (ತ): ಮ.1.05ಕ್ಕೆ, ಸಂ.6.55ಕ್ಕೆ, ಯಲಾಕುನ್ನಿ (ಕ): ಸಂ.4.15ಕ್ಕೆ, ರಾ.10.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821-2973519

ಸ್ಕ್ರೀನ್ 1	ವೆಟ್ಟೈಯನ್ (ತ): ಮ.1ಕ್ಕೆ, ಎಲ್ಲಿಗೆ ಪಯಣ ಯಾವುದೋ ದಾರಿ (ಕ): ಸಂ.4ಕ್ಕೆ, ಮಾರ್ಟಿನ್ (ಕ): ಸಂ.6.30ಕ್ಕೆ, ವೆಟ್ಟೈಯನ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಮ.1.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ.
ಸ್ಕ್ರೀನ್ 3	ಯಲಾಕುನ್ನಿ (ಕ): ಮ.1.30ಕ್ಕೆ, ಒಬ್ಬಟ್ಟು (ಕ): ಸಂ.4.30ಕ್ಕೆ, ಉದಾಹರಣೆ (ಕ): ರಾ.7ಕ್ಕೆ, ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ರಾ.9.15ಕ್ಕೆ.
ಸ್ಕ್ರೀನ್ 4	ಮಾರ್ಟಿನ್ (ಕ): ಮ.1.10ಕ್ಕೆ, ಯಲಾಕುನ್ನಿ (ಕ): ಮ.3.55ಕ್ಕೆ, ವೆಟ್ಟೈಯನ್ (ತ): ಸಂ.6.30ಕ್ಕೆ, ಪಣಿ (ಮ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ರೇಸ್



16ನೇ ದಿನ, ಭಾನುವಾರ, 27-10-2024

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ

I. ರಾಯಲ್ ಕಲ್ಕತ ಟರ್ಫ್ ಕ್ಲಬ್ ಟ್ರೋಫಿ ಡಿII-1100 ಮೀ.
ರೇಟೆಡ್ 20 ರಿಂದ 45. ಮಧ್ಯಾಹ್ನ 1.30ಕ್ಕೆ
1. ದಿ ಗ್ರೇ ಜೆರನಿಯಮ್ 2. ಕಾಪ್ರಿ ಗರ್ಲ್ 3. ಪೊನಿಕ್ಸ್ ಸರ್‌ಪ್ರೈಸ್

II. ರಾಯಲ್ ವೆಸ್ಟರ್ನ್ ಇಂಡಿಯಾ ಟರ್ಫ್ ಕ್ಲಬ್ ಟ್ರೋಫಿ -1200 ಮೀ.
ರೇಟೆಡ್ 40 ರಿಂದ 65. ಮ.2.00ಕ್ಕೆ
1. ಸದರನ್ ಫೋರ್ಸ್ 2. ಗೋಲ್ಡನ್ ಟೈಮ್ 3. ಹೈ ಒಪಿನಿಯನ್

III ಹೈದ್ರಾಬಾದ್ ರೇಸ್ ಕ್ಲಬ್ ಟ್ರೋಫಿ -1400 ಮೀ.
ರೇಟೆಡ್ 40 ರಿಂದ 65. ಮಧ್ಯಾಹ್ನ 2.30ಕ್ಕೆ
1. ಎಲ್‌ಜಿಎಸ್ ಸ್ಟಾರ್ 2. ರಿಯಲ್ ಶೋ 3. ಡೈನಾಮಿಕ್ ಫೋರ್ಸ್

IV. ಬೆಂಗಳೂರ್ ಟರ್ಫ್ ಕ್ಲಬ್ ಟ್ರೋಫಿ-1200 ಮೀ. ರೇಟೆಡ್
80 ಮತ್ತು ಮೇಲ್ವರ್ಗ. ಮ. 3.00ಕ್ಕೆ
1. ಪಾಲಿಷ್ ಗರ್ಲ್ 2. ಝಾರ್ 3. ಬ್ರೇ ಟ್ರೂಪರ್

V. ಮೈಸೂರ್ ರೇಸ್ ಕ್ಲಬ್ ಆನಿವರ್ಸರಿ ಕಪ್-1400 ಮೀ. ರೇಟೆಡ್
3 ವರ್ಷದ (ಟರ್ಮ್ಸ್) ಮ.3.30ಕ್ಕೆ
1. ಶುಭಾಂಕರ್ 2. ಶಾಮ್‌ರಾಕ್ 3. ಓ ಹಂಸಿನಿ

VI. ಕ್ಯೂಬಿಕ್ ಮೈಸೂರ್ ಡರ್ಬಿ -2000 ಮೀ. 3 ವರ್ಷ (ಟರ್ಮ್ಸ್). ಸಂ.4.00ಕ್ಕೆ
1. ಬೋರ್ಬೋನೇರ್ 2. ಜಾನ್‌ವಿಕ್ 3. ಅಮಿಗೊ

VII. ಮದ್ರಾಸ್ ರೇಸ್ ಕ್ಲಬ್ ಟ್ರೋಫಿ -1600 ಮೀ.
ರೇಟೆಡ್ 20 ರಿಂದ 45. ಸಂ.4.45ಕ್ಕೆ
1. ಡಾ. ಆಶ್ 2. ಮಿಸ್ಟಿ ಕೋಸ್ 3. ಫೋರ್ಸ್ ಆಫ್ ನೇಚರ್

VIII. ರಾಯಲ್ ಕಲ್ಕತ ಟರ್ಫ್ ಕ್ಲಬ್ ಟ್ರೋಫಿ ಡಿI-1100 ಮೀ.
ರೇಟೆಡ್ 20 ರಿಂದ 45. ಸಂ.5.20ಕ್ಕೆ
1. ಫಸ್ಟ್ ಇಂಪ್ರೆಷನ್ 2. ಚಿಕೊಕ್ಸ್ 3. ಅಲ್ಟಿಮೇಟ್ ಸ್ಟ್ರೈಕರ್

ದಿನದ ಅತ್ಯುತ್ತಮ	ಸದರನ್ ಫೋರ್ಸ್
ಡಬ್ಬಲ್	ಬೋರ್ಬೋ ನೇರ್, ಫಸ್ಟ್ ಇಂಪ್ರೇಷನ್
ಜಾಕ್‌ಪಾಟ್	4, 5, 6, 7 ಮತ್ತು 8
ಮಿನಿ ಜಾಕ್‌ಪಾಟ್	5, 6, 7 ಮತ್ತು 8
I ಟ್ರಿಬಲ್	1, 2 ಮತ್ತು 3
II ಟ್ರಿಬಲ್	3, 4 ಮತ್ತು 5
III ಟ್ರಿಬಲ್	6, 7 ಮತ್ತು 8
ಎಕ್ಸ್‌ಆಕ್ಟ್	1 ರಿಂದ 8

ಟಿಪ್‌ಸ್ಟರ್ ಪಿಜೆಸಿ

ವಾಣಿಜ್ಯ ಪದವೀಧರರೇ ಗಮನಿಸಿ

ಕಲಿಯಿರಿ ಟ್ಯಾಲಿ, ಇ-ಫೈಲಿಂಗ್, ಜಿಎಸ್‌ಟಿ & ಇನ್‌ಕಮ್ ಟ್ಯಾಕ್ಸ್
ತಕ್ಷಣವೇ ಉದ್ಯೋಗ ಪಡೆದುಕೊಳ್ಳಬಹುದು.
* ವಯಸ್ಸಿನ ಮಿತಿ ಇಲ್ಲ * ಗೃಹಿಣಿಯರಿಗೂ ಅವಕಾಶ.
ತರಗತಿಗಳು ಪ್ರಾರಂಭ 4-11-2024 ರಿಂದ
ಸಂಪರ್ಕಿಸಿ: ಗ್ಲೋಬಲ್ ಅಕೌಂಟ್ಸ್
ಕರೆ ಮಾಡಿ : 89515-25007

ನಗರಸಭಾ ಕಾರ್ಯಾಲಯ, ಅರಸೀಕೆರೆ.
ದೂ ಸಂ:08174–232201 ಫ್ಯಾಕ್ಸ್ ನಂ:08174–233274
ಈ ಮೇಲ್ ವಿಳಾಸ: itstaff_ulb_arasikere@yahoo.com
ವೆಬ್‌ಸೈಟ್ ವಿಳಾಸ: www.arasikeretown.mrc.gov.in
ನಂ:ನ.ಸ.ಅ/ಘ.ವ.ನಿ/ಎಸ್.ಬಿ.ಎಂ2.0/ಪೌ.ಕಪಾಟು&ರಾ.ನಿ/01/2024–25
ದಿನಾಂಕ :25–10–2024.

ಟೆಂಡರ್ ಪ್ರಕಟಣೆ

(ಕರ್ನಾಟಕ ಸಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ) ಅರಸೀಕೆರೆ ನಗರಸಭೆ ವ್ಯಾಪ್ತಿಯಲ್ಲಿ 2024–25ನೇ ಸಾಲಿನ ನಗರಸಭೆಯ ಶೇ 29.00 ರ ಎಸ್.ಎಫ್.ಸಿ ಮತ್ತು 2024–25 ನಗರಸಭಾ ನಿಧಿ ಅಡಿಯಲ್ಲಿ, ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದ್ದೇಶ 1999–2000 ಪ್ರಕಾರ ಆಕ್ಟ್ 2000 ನಿಯಮದಂತೆ Karnataka Standard Tender Document –KW1 & KG1 ರ ಪ್ರಕಾರ ದ್ವಿ ಲೋಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಕರ್ನಾಟಕ ಸಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಟೆಂಡರ್‌ದಾರರು ಪೋರ್ಟಲ್:– http://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಕ್ರ.ಸಂ.1)ವಿವರ:DMA/2024-25/OW/WORK_INDENT30139/CALL-2 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ): 4.15 2)DMA/2024-25/IND3765 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ): 10.00 ಹೆಚ್ಚಿನ ವಿವರಗಳನ್ನು www.kppp.karnataka.gov.in ವೆಬ್‌ಸೈಟ್‌ನಲ್ಲಿ ಮತ್ತು ಪೌರಾಯುಕ್ತರು, ನಗರಸಭೆ ಅರಸೀಕೆರೆ/ಸಹಾಯಕ ಕಾರ್ಯಪಾಲಕ ಅಭಿಯಂತರರು(ಪರಿಸರ), ನಗರಸಭೆ ಅರಸೀಕೆರೆ ಈ ಕಛೇರಿಯಲ್ಲಿ ಪಡೆಯಬಹುದು.

ಸಹಿ/–ಅಧ್ಯಕ್ಷರು, ನಗರಸಭೆ, ಅರಸೀಕೆರೆ.
ಸಹಿ/– ಪೌರಾಯುಕ್ತರು, ನಗರಸಭೆ, ಅರಸೀಕೆರೆ.
ವಾಸಾಸಂಇ/ಹಿಸನಿ/ಹಾಸನ/602/ಕೆಎಸ್‌ಎಂಸಿಎ/2024–25

SITE FOR SALE
30'x40' @ Vishwas Enclave, Mysuru-Hunsur Highway, near St. Joseph's Central School. 11 A Katha, Buyers only
Contact 8095853054


ಹಸಿರು ನಮ್ಮ ಉಸಿರು

LAND FOR SALE
KIADB, Belawadi Industrial Estate Mysore - Mangaluru Highway
21,800+500 SFT Land for sale
@ Rs.3000/- P.sft.
Email: kushwantha.1693@gmail.com

ಮೈಸೂರಿನ ಕಂಪೆನಿಗೆ ಬೇಕಾಗಿದ್ದಾರೆ
* ಆಫೀಸ್ ಬಾಯ್
* ಟ್ರಾಕ್ಟರ್ ಡ್ರೈವರ್
* ಅಡಿಕೆ ತೋಟದ ಕೆಲಸಕ್ಕೆ ಒಂದು ಕುಟುಂಬ

ಸಂಪರ್ಕಿಸಿ: 8123450066

Grand Wedding? Grand Venue !
* Wedding/Convention hall on special rate
* 2 Banquet halls to accommodate 50 to 100
* Wedding
* Engagements
* Conferences
* Trade Fairs
* Product Launches

Rajendra Kalamandhira
Ramanuja Road, Mysore-4.
Call: 0821 2434555, 9845923388, 9845016938
viceroycomforts@rpsshotels.com, rajendrakalamandhira@rpsshotels.com
The Following Dates suitable & available for auspicious wedding & other celebrations as per PANCHANGA - 2024 - 25
January 2025: 19, 23, 24. February 2025: 5, 6, 9, 14, 16, 20. March 2025: 3, 6, 9, 12, 17, 19, 21, 23, 26. April 2025: 6, 10, 16, 18, 21, 23. May 2025: 2, 4, 7, 9, 15, 21, 21, 23, 30.

SPORTS EVENTS Coverage
Organizing any events at School, College, or Club ? Contact us for Professional Videography and Photography Services! We also offer streaming for YouTube and Cable TV channels.
Contact SNE TV
70904 99000 / 99 72 000 268

ವಿಲ್ಲಾ ಸೈಟ್– ಹುಣಸೂರು
20x30, 30x40 30x50m,
4 Kms ಬಸ್ ಸ್ಟಾಂಡ್‌ನಿಂದ
Entrance Arch,
Water Tank,
40 ಅಡಿ ರಸ್ತೆ, 80% ಬ್ಯಾಂಕ್ ಲೋನ್
Rs 650/sft. Call
74117 96800

4ನೇ ವರ್ಷದ ಸವಿನೆನಪು



ಶ್ರೀಮತಿ ದೇವಮ್ಮ ಮುದ್ದೇಗೌಡ್ರು
ದುಃಖತಪ್ತರು: ಮಕ್ಕಳು ಹಾಗೂ ಮೊಮ್ಮಕ್ಕಳು

10ನೇ ವರ್ಷದ ಪುಣ್ಯಸ್ಮರಣೆ




ಕಾರ್ಯಕ್ರಮಕ್ಕೆ ಸರ್ವರಿಗೂ ಸ್ವಾಗತ ಕೋರುವವರು
ಮಕ್ಕಳಾದ: ಎಂ.ಎಸ್. ಸತೀಶ್ ಮತ್ತು ಎಂ.ಹರೀಶ್, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು
ಶ್ರೀಮತಿ ಬಸವಲಿಂಗಮ್ಮ
W/o ದಿ॥ ಕೆ.ಮುತ್ತಯ್ಯ
ಸ್ಥಳ: ಸಿದ್ದನಹುಂಡಿ ಗ್ರಾಮ, ಟಿ.ನರಸೀಪುರ
ಸಮಯ: ಮಧ್ಯಾಹ್ನ 1ಕ್ಕೆ

SITE FOR SALE
MUDA site, near Dadadahalli Gravity One, Prashanth Premium (30x40) - 1 Site (South facing)
30 Lakh Rupees.
(Price Negotiable)
Mob: 9845949841

ಜಮೀನು ಮಾರಾಟಕ್ಕಿದೆ
ಮೈಸೂರು ತಾ, ಜಯಪುರ ಹೋಬಳಿಯಲ್ಲಿ ಹತ್ತವಾಳು ಮುಖ್ಯ ರಸ್ತೆಯಲ್ಲಿ 1 ಎಕರೆ 28 ಗುಂಟೆ, ಕೊಳದಹುಂಡಿ ಮುಖ್ಯರಸ್ತೆಯಲ್ಲಿ 1 ಎಕರೆ, 31 ಗುಂಟೆ, ಮೂದೂರ ಹುಂಡಿ ಗ್ರಾಮದಲ್ಲಿ 1 ಎಕರೆ 31 ಗುಂಟೆ, ಮದೂರಲ್ಲಿ 32 ಗುಂಟೆ ಹಾಗೂ 25 ಗುಂಟೆ, ಮಹಾಲಕ್ಷ್ಮಿ ಲೇಔಟ್ ಪಕ್ಕದಲ್ಲಿ 20 ಗುಂಟೆ ತಂತಿ ಬೇಲಿ ಕಾಂಪೌಂಡ್ ಗೇಟ್ ಹಾಕಲಾಗಿದೆ. ಕಡಿಮೆ ಬೆಲೆಯಲ್ಲಿ ಮಾರಾಟಕ್ಕೆ ಜಮೀನುಗಳು ಇವೆ ಸಂಪರ್ಕಿಸಿ:
9945661696 / 9663793666

4 ಎಕರೆ ಕೃಷಿ ಜಮೀನು ಮಾರಾಟಕ್ಕಿದೆ
ಸುಂಕಾತೊಣ್ಣೂರು, ಪಾಂಡವಪುರ ತಾ॥, ಮಂಡ್ಯ, ಮೈಸೂರಿನಿಂದ 30ಕಿಮೀ
ಬೆಲೆ: 1 ಗುಂಟೆಗೆ 1.25 ಲಕ್ಷರೂ.
ಒಟ್ಟು: 2 ಕೋಟಿ, ಸಂಪರ್ಕಿಸಿ
9632434689, 8496000727




ನಮ್ಮ ಗುರುಗಳಾದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕರು
ಡಾ॥ ಶಶಿಶೇಖರ್ ದೀಕ್ಷಿತ್
ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು:



ವಿಕ್ರಾಂತ್ ಪಿ.ದೇವೇಗೌಡರು
ಮಾಲೀಕರು: ಶ್ರೀ ವೆಂಕಟೇಶ್ವರ ಟ್ರೇಡರ್ಸ್
ಏಷ್ಯನ್ ಪೇಂಟ್ ಅಧಿಕೃತ ಮಾರಾಟಗಾರರು



ಜನ್ಮ ದಿನದ ಶುಭಾಶಯಗಳು
ತಾಯಿ ಶ್ರೀ ಚಾಮುಂಡೇಶ್ವರಿಯ ಭಕ್ತರು ಆರಾಧಕರು ಹಾಗೂ ಸಂಸ್ಕೃತದ ಘನವೆತ್ತರು ಸಪ್ತವೇದಿಯಗಳು ಮತ್ತು ಮುಖ್ಯ ಆಗಮಿಕರು ಹಾಗೂ ಗುರುಗಳಾದ
ಡಾ॥ ಎನ್. ಶಶಿಶೇಖರ್ ದೀಕ್ಷಿತ್
ಅವರಿಗೆ ಜನ್ಮ ದಿನದ ಹಾರ್ದಿಕ ಶುಭಕಾಮನೆಗಳು
—ಅಶ್ವಥ್ ಭಾವಸಾರ್



ಮೈಸೂರಿನ ಚಾಮುಂಡಿ ಬೆಟ್ಟದ, ಚಾಮುಂಡಿ ತಾಯಿಯ ಪ್ರಧಾನ ಅರ್ಚಕರಾದ
ಡಾ॥ ಎನ್. ಶಶಿಶೇಖರ್ ದೀಕ್ಷಿತ್
ಅವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶುಭಾಶಯ ಕೋರುವವರು: ದೇವಾಲಯದ ನೌಕರರು, ಚಾಮುಂಡಿ ಬೆಟ್ಟದ ಗ್ರಾಮಸ್ಥರು, ಮುಖಂಡರು ಹಾಗೂ ಅಭಿಮಾನಿಗಳು

केन्द्रीय रेशम उत्पादन अनुसंधान एवं प्रशिक्षण संस्थान
Central Sericultural Research & Training Institute
[केन्द्रीय रेशम बोर्ड - वस्त्र मंत्रालय - भारत सरकार] मानंदवाडी रोड, श्रीरामपुरा, मैसूर - 570 008
[Central Silk Board - Min. of Textiles – Govt. of India] Manandavadi Road, Srirampura Mysore – 570 008

CSB/RTI/SA/OCT/2024-25 Dated: 26/10/2024

WALK-IN-INTERVIEW FOR THE POST OF SERICULTURE ASSISTANTS

A Walk-in-Interview will be held on **13.11.2024** at Central Sericultural Research and Training Institute, Srirampura, Mysuru - 570 008 as shown below:

'A' 02 (Two) Sericulture Assistant (SA) purely on contract basis to work in the field of Sericulture at Central Sericultural Research & Training Institute, Central Silk Board, Government of India for a period of one year from the date of First candidate joining.

Qualifications for Sericulture Assistant: Four Years full time degree in Sericulture Sciences B.Sc or Three years full time degree with PG Diploma in Sericulture

Desirable Candidate: Experience in Sericulture related work with Proficiency in Computer (MS Office)

Walk-in-Interview will be held on **13/11/2024**, time **10:30 AM** (candidates should reach the venue by 9:30 AM for verification of documents, other recruitment procedures).

Interested can also visit our website **www.csrtimys.res.in, https://csb.gov.in/** for details.

Sd/- DIRECTOR
CSR &TI, Mysuru


ಸುಸಜ್ಜಿತವಾಗಿ ನಡೆಯುತ್ತಿರುವ ಇಟ್ಟಿಗೆ ಫ್ಯಾಕ್ಟರಿ
ಬಾಡಿಗೆಗೆ ದೊರೆಯುತ್ತದೆ (ಮಣ್ಣಿನ ಸಮೇತ)
BRICK FACTORY AVAILABLE FOR RENT (WITH SOIL)
ಹಿನಕಲ್ ರಿಂಗ್ ರಸ್ತೆಯಿಂದ 10 ಕಿ.ಮೀ
ಸಂಪರ್ಕಿಸಿ: 9008949783

FIRST FLOOR HOUSE FOR RENT
at D.No.470, 13th Main Road, Saraswathipuram, Mysore-09 with 2 BHK, AEH, Solar & UPS facilities.
Call : 98801 26722

FOR ADVERTISEMENT
STAR OF MYSORE Please Call: 0821-2496522 / 23 Email: ad@starofmysore.com
ಮೈಸೂರು ಮಿತ್ರ Please Call: 0821-2496522 / 23 Email: ad@mysurumithra.com

ಬಾಡಿಗೆಗೆ ದೊರೆಯುತ್ತದೆ
ರೆಸಾರ್ಟ್ ನಡೆಸಲು ಅನ್ವಕ್ತಾಂತವಾಗಿರುವ ಸುಂದರವಾದ ಜಾಗ
ಹಿನಕಲ್ ರಿಂಗ್ ರಸ್ತೆಯಿಂದ 10 ಕಿ.ಮೀ
AVAILABLE FOR RENT RESORT PURPOSE CONVERTED BEAUTIFUL LAND
ಸಂಪರ್ಕಿಸಿ: 8105586679

1ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಗಂಗಮ್ಮ
ನಿಧನ: 03.11.2023
ಲೇಟ್ ನಿಂಗಯ್ಯನವರ ಧರ್ಮಪತ್ನಿ, ದೇವಯ್ಯನಹುಂಡಿ, ಶ್ರೀರಾಂಪುರ
ದುಃಖತಪ್ತರು: ಪತ್ನಿ ರತ್ನಮ್ಮ ಮತ್ತು ಕುಟುಂಬವರ್ಗ
ಪ್ರಕಟಣೆ: ಶ್ರೀಮತಿ ಪೋರಮ್ಮ (ಗಂಗಮ್ಮ ಮಗಳು)

3ನೇ ವರ್ಷದ ಪುಣ್ಯಸ್ಮರಣೆ



ನಿಮ್ಮ ನೆನಪು ನಮ್ಮ ಹೃದಯದಲ್ಲಿ ಸದಾ ಶಾಶ್ವತವಾಗಿದ್ದು, ನಿಮ್ಮೊಂದಿಗಿನ ಒಡನಾಟದ ಕ್ಷಣಗಳು ಯಾವಾಗಲೂ ಹಚ್ಚ ಹಸಿರಾಗಿರುತ್ತದೆ.
ನಿಮ್ಮ ನೆನಪಿನಲ್ಲಿರುವ ಪತಿ: ಶಿವಸ್ವಾಮಿ, ಮಗಳು ಭುವನ ಮತ್ತು ಕುಟುಂಬವರ್ಗದವರು.
ಶ್ರೀಮತಿ ರೋಜ್‌ಲಿನ್ ಮೇರಿ

LAND FOR SALE
30 Guntas, Harohalli, Bannur Main road Backside, Just 15kms from, Mysore
9611418225

SITE FOR SALE
40x60 W/F
Brahmins Layout 'A' Block
40 Feet Road
Mob: 9620461052

ಹೆರಿಟೇಜ್ ಹೋಮ್ಸ್ 2ನೇ ಹಂತ
MYSURU - HUNSUR HIGHWAY, MYSORE
MEGA RESIDENTIAL TOWNSHIP
MUDA LIMITS
ಕೇವಲ ₹750/ ಪ್ರತಿ ಚದರ ಅಡಿ
30x40 30x50 40x60 50x80
ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಕೆಲವೇ ಸೈಟ್‌ಗಳು ಮಾತ್ರ ಲಭ್ಯ
ಸುಲಭ 4 ಕಂತುಗಳ ಸೌಲಭ್ಯವಿದೆ
ನಿಮ್ಮ ಕನಸಿನ ನಿವೇಶನ ನಿಮ್ಮ ಕೈಗೆಟುಕುವ ಬೆಲೆಯಲ್ಲಿ
ಅದ್ವಿಕಾ ವೆಂಚರ್ಸ್
9513301854 / 9071386615

Building construction
Starts from 1799 Rs/sqft
Call 9988554496

CONSTRUCTION OF RESIDENTIAL BUILDING
@ Rs. 1,75,000/- squres
Call : 97402 23239 / 70226 77953

9ನೇ ವರ್ಷದ ಸವಿನೆನಪು




ನೀವು ಮರೆಯಾಗಿ 9 ವರ್ಷಗಳು ಕಳೆದರು ನಿಮ್ಮ ನೆನಪು ಸದಾ ಮನಸ್ಸಿನಲ್ಲಿದೆ.
ಮಗ ಬಿ.ನಾಗೇಂದ್ರ ಕುಮಾರ್, ಸೊಸೆ ಶಿಲ್ಪ, ಮೊಮ್ಮಗಳು ಎನ್.ಹರ್ಷಿತಾ, ಅಳಿಯ ಮಹಾದೇವು, ಮೊಮ್ಮಗ ಎಂ.ವಿಹಾನ್ ಗೌಡ ತಮ್ಮ ನಂಜುಂಡಯ್ಯ ಅವರ ಮಗ ಎನ್.ಮಂಜುನಾಥ್
ಶ್ರೀಮತಿ ಗೌರಮ್ಮ

WANTED
Ex-Servicemen From Army/navy/airforce. For Security Guard Duty. Max Age 58 Years. Payment - as per Dgr Regulations. Place Of Work - Industrial Area Kadakola (Container Corporations Of India Limited).
9481712868

MAHENDRA DEVELOPERS
Muda approved sites & House for sale
* Vajamangala - 20x30, 20x40, 30x40
* Nagawala- 20x40, 30x40, 30x50,40x60
* Hunsuru - 20x30, 20x40, 30x40
* Devagalli - 30x40, 40x60
* Uttanahalli - 5.04 Guntas Farm land

8884001233

3ನೇ ವರ್ಷದ ಸವಿನೆನಪು



ಶ್ರೀಮಾನ್ N. ಸ್ವಾಮಿ ಗೌಡ
ನಿಧನ: 27.10.2021
ನಿಮ್ಮ ನೆನಪಿನಲ್ಲಿರುವ: ಪತ್ನಿ, ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು ಮಜ್ಜಿಗೆಪುರ


ಹೋಮ್ ನರ್ಸ್

ಆಲ್ ಇನ್ ಒನ್

ಹೋಮ್ ನರ್ಸಿಂಗ್ ಸೇವೆಗಳು



24x7 ಲಭ್ಯವಿದೆ ನಿಮ್ಮ ಮನೆಯಲ್ಲಿ
FREE TRIAL
ನಮ್ಮ ಬೆಲೆ ₹749/ದಿನ * ರಿಂದ ಪ್ರಾರಂಭವಾಗುತ್ತದೆ
ಜನರಲ್ ನರ್ಸಿಂಗ್ ಕೇರ್ ಐಸಿಯು ಆರೈಕೆ
ನಿಮ್ಮ ಮನೆಯಲ್ಲಿ ನರ್ಸಿಂಗ್ ಕೇರ್ ಮತ್ತು ಕೇರ್‌ಟೇಕರ್ ಸೇವೆಗಳು



* ಹಿರಿಯ ಆರೈಕೆ
* ಡ್ರೆಸ್ಸಿಂಗ್
* ಇಂಜೆಕ್ಷನ್
* ರೈಲ್ಸ್ ಟ್ಯೂಬ್
* ಕ್ಯಾಥಿಟೆರೈಸೇಶನ್
* ಬೇಬಿ ಕೇರ್
* ನೆಬ್ಯುಲೈಸೇಶನ್
* ಶುಗರ್ & ಬಿಪಿ ಮಾನಿಟರ್

BEST SERVICE
ಸಂಪೂರ್ಣ ತರಬೇತಿ ಪಡೆದ ಮತ್ತು ಶಿಸ್ತುಬದ್ಧ ಆರೈಕೆದಾರರು
MEDIBEES HOMECARE SERVICES
70-4383-4383
*Terms & Conditions Apply

Diwali Offer
ಯುವರಾಜ YUVARAJA HOME APPLIANCES
SONY 65" LED TV 3 YEARS WARRANTY ₹ 2995/-* EMI Upto 30 Months
SAMSUNG 75" LED TV SAMSUNG 43" LED TV FREE 1 EMI FREE* ₹ 2995/-* EMI Upto 30 Months
SAMSUNG WASHING MACHINE 12 kg ₹ 2490/-* EMI Upto 24 Months
3 YEARS WARRANTY INSTANT CASHBACK upto Rs. 25,000/- 1 EMI FREE* upto 30% OFF * Conditions Apply
SAMSUNG GALAXY S24 ULTRA 24 Months EMI* ZERO Down Payment*
SAMSUNG REFRIGERATOR ₹3990/-* EMI Upto 30 Months
LG 65" LED TV 3 YEARS WARRANTY ₹ 1999/-* EMI Upto 36 Months
LG WASHING MACHINE 9 kg EMI 12 Months 1 EMI CASHBACK*
oppo F27 Pro 5G 12 Months EMI* ZERO Down Payment* EMI ₹2333/-
vivo V40 8 Months EMI* ZERO Down Payment* EMI ₹4125/-
Preethi ZODIAC FREE worth ₹1525/-* MILTON CASSEROLE EMI ₹1332/-
Butterfly 1.2 HP Motor 100% Copper Motor 6 Months EMI* FREE worth ₹2500/-*
Haier 65" LED TV ₹ 1994/-* EMI Upto 30 Months
Haier REFRIGERATOR ₹ 2994/-* EMI Upto 30 Months
EUREKA FORBES Aquaguard EMI 12 Months 1 EMI CASHBACK*
LG REFRIGERATOR ₹ 3999/-* EMI Upto 36 Months
Haier WASHING MACHINE EMI ₹ 1994/-* Up to 36 Month
IFB WASHING MACHINE ₹1950/-* EMI 30 Months
* Conditions Apply
LG WIN LG DREAM HOME PACKAGE Every Day*
0% INTEREST up to 36 Months EMI on 1 EMI Free* BAJAJ FINSERV *Conditions Apply
up to 25%* DISCOUNT ON SELECTED CREDIT CARD *Conditions Apply
ಯುವರಾಜ YUVARAJA HOME APPLIANCES
Ph : 0821-2457705
M : 9448753227
N.R. Mohalla, Mysore